ಸಂವಾದ



ಸಂವಾದ

ಸಾಹಿತ್ಯಿಕ, ಸಾಂಸ್ಕೃತಿಕ ಸಂಕಲನ

- ನಮ್ಮ ಸಾಹಿತ್ಯ, ಸಾಂಸ್ಕೃತಿಕ ಬದುಕಿನ ಸ್ಪಂದನಕ್ಕೆ
- ವಸ್ತುನಿಷ್ಟ ಸತ್ಯದ ಆವಿಷ್ಕಾರಕ್ಕೆ

ಸಂಪಾದಕರು :

ಡಿ. ಎಸ್. ನಾಗಭೂಷಣ

ರಾಘವೇಂದ್ರ ಪಾಟೀಲ

ಸ. ಉಷಾ

ಮುಖ ಪುಟದ ಚಿತ್ರ:
ಶಂಕರ ಪಾಟೀಲ

- ಆಜೀವ ಸದಸ್ಯತ್ವ ರೂ. **300–00**
- ವಾರ್ಷಿಕ ಚಂದಾ ರೂ. **30–00**

(ಅಂಚೆ ಮೂಲಕ ಚಂದಾ ಕಳುಹಿಸುವವರು ಎಂ.ಓ. ಅಥವಾ ಡಿ.ಡಿ. ಮೂಲಕ ಮಾತ್ರ ಕಳುಹಿಸಬೇಕು. ಆಜೀವ ಚಂದಾವನ್ನು ಒಂದು ವರ್ಷದಲ್ಲಿ ತಲಾ ನೂರು ರೂಪಾಯಿಗಳ ಮೂರು ಕಂತುಗಳಲ್ಲಿ ಕೊಡಬಹುದಾಗಿದೆ)

ಮುದ್ರಣ, ಪ್ರಕಾಶನ ಹಾಗೂ ಸಂಪಾದನೆ:
ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ ಅಂಚೆ–577 531, ಚಿತ್ರದುರ್ಗ ಜಿಲ್ಲೆ
–ಇವರಿಗಾಗಿ.

ಮುದ್ರಕರು:
ನ್ಯಾಷನಲ್ ಪ್ರೆಸ್, ಹಾಸನ

ಖಾಸಗಿ ಪ್ರಸಾರಕ್ಕಾಗಿ

ಸಂವಾದ

೧೬

ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ, ಚಿತ್ರದುರ್ಗ ಜಿಲ್ಲೆ–577 531

ಈ ಸಂಚಿಕೆಯ ಲೇಖಕರು :

- **ರಾಘವೇಂದ್ರ ಖಾಸನೀಸ**
  213, 8ನೇ ಕ್ರಾಸ್, I ಎನ್ ಬ್ಲಾಕ್, ರಾಜಾಜಿ ನಗರ, ಬೆಂಗಳೂರು – 560 010.
- **ಕಿ. ರಂ. ನಾಗರಾಜ**
  ಅಧ್ಯಾಪಕರು, ಕನ್ನಡ ಅಧ್ಯಯನ ಕೇಂದ್ರ, ಜ್ಞಾನಭಾರತಿ, ಬೆಂಗಳೂರು – 560 056.
- **ಡಿ. ಎಸ್. ನಾಗಭೂಷಣ**
  ಕಾರ್ಯಕ್ರಮ ನಿರ್ವಾಹಕ, ಆಕಾಶವಾಣಿ, ಹಾಸನ – 573 201.
- **ಅಮಿತಾವ್ ಘೋಷ್**
  ಖ್ಯಾತ ಇಂಗ್ಲೀಷ್ ಕಾದಂಬರಿಕಾರ.
- **ಜಯರಾಮ ಕಾರಂತ**
  ಮನೆ ನಂ. 8–1–151, ಓಕುಡೆ ರಾಂಭಟ್ ಓಣಿ,
  ಕುಂಜಿಬೆಟ್ಟು, ಉಡುಪಿ – 576 102 (ದ.ಕ.)
- **ಆನಂದ ಝುಂಝುರವಾಡ**
  ಮುನ್ಸೀಫ್ ನ್ಯಾಯಾಲಯ, ಬನಹಟ್ಟಿ (ಜಮಖಂಡಿ ತಾಲ್ಲೂಕು)
- **ಸ. ರಘುನಾಥ**
  ಶಾಲಾ ಅಧ್ಯಾಪಕರು, ಗೌನಿಪಲ್ಲಿ – 563 135 (ಕೋಲಾರ ಜಿಲ್ಲೆ)
- **ಎಂ. ಆರ್. ಕಮಲ**
  405, 'ಉಮಾಶಂಕರ', 9ನೇ ಜಿ ಮುಖ್ಯರಸ್ತೆ, I ಎನ್ ಬ್ಲಾಕ್,
  ರಾಜಾಜಿ ನಗರ, ಬೆಂಗಳೂರು – 560 010.
- **ಸ. ಉಷಾ**
  ಕನ್ನಡ ಅಧ್ಯಾಪಕರು, ಹೊಯ್ಸಳೇಶ್ವರ ಕಾಲೇಜು,
  ಅರಸೀಕೆರೆ – 573 103 (ಹಾಸನ ಜಿಲ್ಲೆ)
- **ಆನಂದಕಂದ**
  (ದಿವಂಗತ ಬೆಟಗೇರಿ ಕೃಷ್ಣಶರ್ಮರು)
- **ರಾಘವೇಂದ್ರ ಪಾಟೀಲ**
  ಜೀವಶಾಸ್ತ್ರ ಅಧ್ಯಾಪಕರು, ಪದವಿ ಪೂರ್ವ ಕಾಲೇಜು,
  ಮಲ್ಲಾಡಿಹಳ್ಳಿ – 577 531 (ಚಿತ್ರದುರ್ಗ ಜಿಲ್ಲೆ)
- **ಡಾ|| ಬಿ. ಎನ್. ಸುಮಿತ್ರಾಬಾಯಿ**
  ಸಂಸ್ಕೃತ ಅಧ್ಯಾಪಕರು, ಎ.ವಿ.ಕೆ. ಕಾಲೇಜು, ಹಾಸನ – 573 201.

ಕಥಾ ಕಮ್ಮಟ

ಸಂವಾದ–೧೪ರಲ್ಲಿ ನಾವು ಕಾವ್ಯ ಕಮ್ಮಟವೊಂದನ್ನು ನೀಡಿದ್ದೆವು, ಈ ಸಂಚಿಕೆಯಲ್ಲಿ ಕಥಾ ಕಮ್ಮಟವೊಂದನ್ನು ಪ್ರಕಟಿಸುತ್ತಿದ್ದೇವೆ. ಬೆಂಗಳೂರು ಆಕಾಶವಾಣಿ ಕೇಂದ್ರ ತನ್ನ ಸಾಹಿತ್ಯ ಕಾರ್ಯಕ್ರಮದಲ್ಲಿ ಪ್ರಸಾರ ಮಾಡಿದ ಈ ಚರ್ಚೆಯನ್ನು ಹಸ್ತಪ್ರತಿ ಮಾಡಿಕೊಟ್ಟವರು ಗೆಳೆಯ ಹೆಚ್. ನಾಗರಾಜಪ್ಪನವರು. ಆಕಾಶವಾಣಿ ಹಾಗೂ ಈ ಗೆಳೆಯನಿಗೆ ಸಂವಾದ ಋಣಿಯಾಗಿದೆ.

–ಸಂ.]

ಡಿ. ಎಸ್. ನಾಗಭೂಷಣ: ಇಂದಿನ ನಮ್ಮ ಕಥಾಕಮ್ಮಟಕ್ಕೆ ಪರಿಣತರಾಗಿ ಬಂದಿದ್ದಾರೆ ಕನ್ನಡದ ಪ್ರತಿಭಾವಂತ ಕಥೆಗಾರರಲ್ಲಿ ಒಬ್ಬರೆನಿಸಿದ ರಾಘವೇಂದ್ರ ಖಾಸನೀಸರು ಹಾಗೂ ಪ್ರತಿಭಾವಂತ ವಿಮರ್ಶಕರಲ್ಲಿ ಒಬ್ಬರಾದ ಕಿ. ರಂ. ನಾಗರಾಜ ಅವರು. ನಮ್ಮ ಹಿಂದಿನ ಕಮ್ಮಟ–ಭಾಷಾ ಕಮ್ಮಟವನ್ನು ಭಾಷೆಯ ಸೃಜನಶೀಲ ಬಳಕೆ ಎಂದರೇನು ಎಂಬ ಪ್ರಶ್ನೆಯೊಂದಿಗೆ ಮುಕ್ತಾಯಗೊಳಿಸಿದ್ದೆವು. ಆ ಪ್ರಶ್ನೆಯನ್ನು ಇಂದು ಮತ್ತೆ ಎತ್ತಿಕೊಂಡು, ಭಾಷೆಯ ಸೃಜನಶೀಲ ಬಳಕೆಯ ಒಂದು ರೂಪವಾದ ಕಥಾಪ್ರಕಾರದ ಬಗ್ಗೆ ಚರ್ಚೆ ಮಾಡಹೊರಟಿದ್ದೀವಿ, ಇಂದಿನ ಚರ್ಚೆಯಲ್ಲಿ, ಕಥೆ ಅಂದರೇನು, ಮಾನವ ಸಂಸ್ಕೃತಿಯಲ್ಲಿ ಕಥೆಯ ಮೂಲ ಎಲ್ಲಿದೆ, ಕಥೆ–ವರದಿ–ಕಲ್ಪನೆಗಳ ಅಂತರ್‌ಸಂಬಂಧ, ಕಥೆ ಮತ್ತು ಸಮಾಜ ಹಾಗೂ ಕಥೆಯಲ್ಲಿ ಭಾಷೆಯ ಬಳಕೆಯ ವೈಶಿಷ್ಟ್ಯ ಇತ್ಯಾದಿ ಪ್ರಶ್ನೆಗಳನ್ನು ಕೇಳಿಕೊಳ್ಳುವ ಉದ್ದೇಶ ಇದೆ.

ಮನುಷ್ಯ ತನ್ನ ಬಾಲ್ಯದಲ್ಲೇ ಕಥಾಪ್ರಪಂಚವನ್ನು ಪ್ರವೇಶಿಸುತ್ತಾನೆ. ಕಥೆ ಕೇಳಿಕೊಂಡೇ ಕಥೆ ಕಲ್ಪಿಸಿಕೊಂಡೇ ಆತ ಬೆಳೆಯುತ್ತಾನೆ. ಅಜ್ಜಿಯರು ಹೇಳುವ ಜಾನಪದ ಕಥೆಗಳು, ಅಣ್ಣಂದಿರು ಹೇಳುವ ದೆವ್ವದ ಕಥೆಗಳು, ತಂದೆ ತಾಯಂದಿರು ಹೇಳುವ ಮಹಾಭಾರತ, ರಾಮಾಯಣ, ಪುರಾಣಗಳ ಮಹಾಕಥೆಗಳು, ಸುದ್ದಿ–ವದಂತಿಗಳ ಮೂಲಕ ಬರುವ ಅನ್ಯರ 'ಕಥೆ'ಗಳು–ಹೀಗೆ ವಿವಿಧ ತೆರನ, ಸ್ತರದ ಕಥೆಗಳು ಒಂದಲ್ಲ ಒಂದು ರೀತಿಯಲ್ಲಿ ನಮ್ಮನ್ನು ತಾಕುತ್ತಲೇ ಇರುತ್ತವೆ. ಈ ಅರ್ಥದಲ್ಲಿ ಕಥೆ ಮತ್ತು ಮನುಷ್ಯಜೀವ ಪರಸ್ಪರ ಪೋಷಿಸಿಕೊಂಡೇ ಬೆಳೆಯುತ್ತಿವೆಯೇನೋ ಎಂಬ ಅನುಮಾನ ಉಂಟಾಗುತ್ತೆ. ಈ ಹಿನ್ನೆಲೆಯಲ್ಲಿ ಏಳುವ ಬಹಳ ಪ್ರಾಥಮಿಕ ಕುತೂಹಲದ ಪ್ರಶ್ನೆ ಅಂದರೆ ಮನುಷ್ಯನ ಬದುಕಿನಲ್ಲಿ ಅಥವಾ ಸಂಸ್ಕೃತಿಯಲ್ಲಿ ಈ ಕಥೆಯ ಪರಿಕಲ್ಪನೆ ಯಾಕೆ ಬಂತು ಮತ್ತು ಹೇಗೆ ರೂಪುಗೊಳ್ಳ್ತು

ಅನ್ನೋದು. ಅಂದ್ರೆ, ಮನುಷ್ಯನಿಗೆ ಒಂದು ಕಥೆ ಹೇಳಬೇಕು ಅಥವಾ ಕೇಳಬೇಕು ಅಂತ ಯಾಕೆ ಅನ್ನಿಸತೊಡಗಿತು ? ಕಥೆ ಅನ್ನುವ ಕಲ್ಪನೆ ಹಿಂದಿರುವಂತಹ ಮನುಷ್ಯನ ಮನಸ್ಸಿನ ಶಕ್ತಿ ಯಾವುದು ? ಈ ಪ್ರಶ್ನೆಗಳೊಂದಿಗೆ ನಾವು ಈ ಚರ್ಚೆಯನ್ನು ಆರಂಭಿಸಬಹುದೂಂತ ಕಾಣುತ್ತೆ. ಏನು ಕಿ.ರಂ. ?

ಕಿ. ರಂ. ನಾಗರಾಜ: ನೀವೇ ನಿಮ್ಮ ಪೀಠಿಕೆಯಲ್ಲಿ ಹೇಳಿದ ಹಾಗೆ ಕಥೆ ಒಂದು ವಿಶ್ವವ್ಯಾಪಕ ಕಲೆ. ಮನುಷ್ಯ ಬರವಣಿಗೆಯನ್ನು ತಿಳಿಯುವುದಕ್ಕೆ ಮುನ್ನವೇ ರೂಪುಗೊಂಡಂತಹ ಒಂದು ಕಲೆ ಇದು. ಬೇಟೆಯ ಮೇಲೆ ಅವಲಂಬಿಸಿದಂತಹ ಮನುಷ್ಯ ತನ್ನ ಪ್ರತಿನಿತ್ಯದ ಬೇಟೆಯ ವಿವರಗಳನ್ನು ಮತ್ತೊಬ್ಬನಿಗೆ ವಿವರಿಸಿ ಕೊಳ್ಳೊ ಕಾಲಕ್ಕೆ, ದಿನನಿತ್ಯದ ಮನುಷ್ಯನ ಚಟುವಟಿಕೆಗಳನ್ನು ಮತ್ತೊಬ್ಬನಿಗೆ ನಿರೂಪಿಸಿಕೊಳ್ಳುವಂತ ಕಾಲಕ್ಕೆ ಈ ಕತೆ ಅನ್ನೋದು ಆರಂಭವಾಗಿರಬಹುದು. ಒಂದು ಬಹಳ ಪ್ರಸಿದ್ಧವಾದ ಮಾತಿದೆ–ಕಥೆಗೆ ಕಾಲಿಲ್ಲ ಅಂತ. ಹೀಗಾಗಿ ಕಥೆ ಮಾನವ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿ ರೂಪುಗೊಂಡದ್ದು ತುಂಬಾ ಕುತೂಹಲದಾಯಕ ವಾದಂತಹ ಒಂದು ದೊಡ್ಡ ಚರಿತ್ರೆಯನ್ನು ಪಡಕೊಂಡಿದೆ. ಈಜಿಪ್ಟ್‌ನಲ್ಲಿ ಕ್ರಿ.ಪೂ. 3200ರ ಹೊತ್ತಿಗೆ ಕಥೆ ಆರಂಭವಾಯಿತು ಅಂತ ಕೆಲವು ಸಂಶೋಧಕರು ವಿವರಿಸ್ತಾರೆ. ಆದರೆ ಅದನ್ನು ನಿಖರವಾಗೇನೂ ಹೇಳುವಂತಿಲ್ಲ. ಉದಾಹರಣೆಗೆ ಜಾತಕದ ಕಥೆ ಗಳು, ಈಸೋಪನ ಕಥೆಗಳು, ಪಂಚತಂತ್ರದ ಕಥೆಗಳು, ಅರೇಬಿಯನ್ ನೈಟ್ಸ್ ಕಥೆಗಳು–ಹೀಗೆ ಕಥೆಯ ಒಂದು ದೊಡ್ಡ ವಲಯವೇ ನಮ್ಮ ಮುಂದೆ ಇದೆ. ಅದು ಕಾಲಕ್ರಮದಲ್ಲಿ ಹೆಚ್ಚು ಹೆಚ್ಚು ಬೇರೆ ಬೇರೆಯಾದಂಥ ಪ್ರಯೋಗಗಳಿಗೆ ಗುರಿಯಾ ಗುತ್ತಾ ಮನುಷ್ಯ ಸಂಸ್ಕೃತಿಯಲ್ಲಿ ಅದು ಸೂಕ್ಷ್ಮಗೊಳ್ಳುತ್ತಾ ಇವೊತ್ತು ಬಹಳ ಮುಖ್ಯವಾದ ಸಾಹಿತ್ಯ ಪ್ರಕಾರಗಳಲ್ಲಿ ಒಂದಾಗಿದೆ.

ಡಿ. ಎಸ್. : ಮಾನವ ಸಂಸ್ಕೃತಿಯಲ್ಲಿ ಕಥೆ ಮೂಡಿದ್ದರ ಒಂದು ರೀತಿಯ ಐತಿಹಾಸಿಕ ಹೆಜ್ಜೆಗಳನ್ನು ಕಿ.ರಂ. ಗುರುತಿಸಿದರು. ಖಾಸನೀಸರು, ಕಥೆ ಅಂದರೆ ಮೂಲತಃ ಏನು ? ಸಾಹಿತ್ಯರೂಪವಾಗಿ ಅದು ಬೆಳೆದುಬಂದ ಕ್ರಮ ಯಾವುದು ಅನ್ನೋದರ ಬಗ್ಗೆ ಹೇಳಬಹುದು.

ರಾಘವೇಂದ್ರ ಖಾಸನೀಸ : ಆದಿಮಾನವನು ನಡೆದ ಘಟನೆಗಳನ್ನು ಅವು ನಡೆದಂತೆ, ನಡೆದ ಕ್ರಮದಲ್ಲಿ ಹೇಳುತ್ತಿದ್ದ ಕ್ರಮವೇ ಕಥೆಯ ಮೂಲ ಆಗಿರಬಹುದು. ಕತೆ ಕೇಳುತ್ತಿದ್ದವನ ಪ್ರತಿಕ್ರಿಯೆಯಲ್ಲಿ ಅಭಿವ್ಯಕ್ತವಾಗುತ್ತಿದ್ದ ಉದ್ವೇಗ, ಕುತೂಹಲ, ಸಂತೋಷ, ನಿರಾಶೆ ಮುಂತಾದ ಭಾವನೆಗಳು ಕಥೆ ಹೇಳುವವನಿಗೆ ತನ್ನ ಕಥೆ ಹೇಳುವ

ತಂತ್ರವನ್ನು ರೂಪಿಸಲು ಸಹಾಯಕಾರಿಯಾಗಿರಬೇಕು. ಅದೇ ಮುಂದೆ ಕಾಲ ಕಳೆದಂತೆ ಬೆಳೆದು ಸೂಕ್ಷ್ಮಾತಿಸೂಕ್ಷ್ಮವಾದ ಕಥಾತಂತ್ರ Story telling technique ಆಗಿ ಪರಿವರ್ತಿಸಿತು. ವೇದಗಳಲ್ಲಿ, ಪುರಾಣಗಳಲ್ಲಿ, ಬೈಬಲ್ ಮುಂತಾದ ಧರ್ಮ ಗ್ರಂಥಗಳಲ್ಲಿ ಉಪಕಥೆಗಳಾಗಿ ಕಥೆ ಹುಟ್ಟಿಕೊಂಡಿತು. ಇದುವರೆಗೆ ಕಥೆಗಳಲ್ಲಿ ಹೇಳುವ ವಿಷಯ ಮುಖ್ಯವಿತ್ತೇ ವಿನಃ ಅದನ್ನು ಹೇಳುವ ರೀತಿ ಅಲ್ಲ. ಒಂದರ್ಥದಲ್ಲಿ ರಾಮಾಯಣ–ಮಹಾಭಾರತದಲ್ಲಿ ಬರುವ ಘಟನೆಗಳು ಉಪಕಥೆಗಳೇ. ಬೈಬಲ್‌ನಲ್ಲಿ ಬರುವಂತಹ ಪ್ರಾಡಿಗಲ್ ಸನ್ ದೃಷ್ಟಾಂತ ಇದಕ್ಕೆ ಇನ್ನೊಂದು ಉದಾಹರಣೆ.

ಆಮೇಲಿನ ಮುಖ್ಯ ಘಟ್ಟವೆಂದರೆ ಅರೇಬಿಯನ್ ನೈಟ್ಸ್ ಕಥೆಗಳು, ಬೊಕಾಶಿಯೋನ ಡೆಕಮೊರಾನ್ ಕಥೆಗಳು ಹಾಗೂ ಚಾಸರ್‌ನ ಕ್ಯಾಂಟರ್‌ಬರಿ ಟೇಲ್ಸ್ ಇವು ತಾಂತ್ರಿಕವಾಗಿ ಹೆಚ್ಚು ಪರಿಪೂರ್ಣವಾಗಿ ಬೆಳೆದ ಕಥೆಗಳಾಗಿದ್ದು, ಅದರಲ್ಲೂ ಬೊಕಾಶಿಯೋನ ಡೆಕಮೊರಾನ್ ಕಥೆಗಳು, ಸಮಾಜದ ವಿಶಿಷ್ಟ ವರ್ಗಗಳ ಕಟು ವಿಮರ್ಶೆ ಮಾಡುವ ಪ್ರಯತ್ನಗಳು. ಮುಂದೆ ಕಾಲಾನುಕ್ರಮದಲ್ಲಿ ಅಮೆರಿಕಾದಲ್ಲಿ ಎಡ್ಗರ್ ಅಲೆನ್‌ಪೋ, ಓ'ಹೆನ್ರಿ, ಫ್ರಾನ್ಸ್‌ನಲ್ಲಿ ಗಾಯ್ ದ ಮೊಪಾಸಾ, ರಷಿಯಾದ ಚೆಕಾಫ್, ಇಂಗ್ಲೆಂಡ್‌ನಲ್ಲಿ ಸರ್ ಆರ್ಥರ್ ಕಾನನ್ ಡಾಯ್ಲ್ ಮುಂತಾದ ಪ್ರತಿಭಾಶಾಲಿ ಕಥೆಗಾರರು ಹುಟ್ಟಿ ತಾಂತ್ರಿಕವಾಗಿ ಮಹತ್ವದ ಸಾಹಿತ್ಯ ಪ್ರಕಾರವೆಂದು ಸಣ್ಣ ಕಥೆಯು ಪರಿಪೂರ್ಣತೆಗೆ ಕಾರಣೀಭೂತರಾದರು.

ಡಿ.ಎಸ್.: ಭಾರತೀಯ ಸಂಸ್ಕೃತಿಯಲ್ಲಿ ಕಥನಕ್ರಮ ಬೆಳೆದು ಬಂದ ಬಗೆ ಬಗ್ಗೆ ಕಿ.ರಂ. ಏನಾದ್ರೂ ಹೇಳಲು ಇಷ್ಟಪಡ್ತೀರಾ ?

ಕಿ.ರಂ. : ಐತಿಹಾಸಿಕವಾಗಿ ಭಾರತೀಯ ಸಂಸ್ಕೃತಿಯಲ್ಲಿ ಕಥೆ ಬಹಳ ಹಿಂದಿನ ಕಾಲದಿಂದಲೂ ರೂಪುಗೊಳ್ತಾ ಬಂದಿದೆ. ಜಾನಪದ ಕಥೆಗಳು, ದೃಷ್ಟಾಂತ ಕಥೆಗಳು, ಶಾಸನೀಸರು ಪ್ರಸ್ತಾಪ ಮಾಡಿದಂತಹ ಉಪಕಥೆಗಳು–ಇವುಗಳೆಲ್ಲಾ ಎಲ್ಲ ಪ್ರದೇಶಗಳ ಭಾಷೆಗಳ ಸಂದರ್ಭದಲ್ಲಿ ವಿಕಾಸಗೊಂಡಿರುವಂಥದ್ದೇ ಆಗಿವೆ. ಆದ್ದರಿಂದ ಕಥೆ ಬೆಳೆದ ಕ್ರಮವನ್ನು ನಿರ್ದಿಷ್ಟ ದೇಶ–ಕಾಲಮಾನಕ್ಕೆ ಅಂಟಿಸಿ ಹೇಳೋದು ತುಂಬಾ ಕಷ್ಟ ಆಗುತ್ತೆ. ಏಕೆಂದರೆ ಬಹಳ ಮಹತ್ವದ ಕಥೆಗಳನ್ನು ನಾವು ಉಪನಿಷತ್ತುಗಳಲ್ಲಿ ಕೂಡಾ ಕಾಣಬಹುದು. ನನಗೆ ಇಲ್ಲಿ ಬಹಳ ಮುಖ್ಯ ಆಸಕ್ತಿ ಪ್ರಾಚೀನ ಕಥನ ಕಲೆಗಿಂತ ಹತ್ತೊಂಭತ್ತನೇ ಶತಮಾನದ ಮತ್ತು ಅದರ ಅನಂತರದಲ್ಲಿ ವಿಕಾಸಗೊಂಡ ಕಥಾಪ್ರಕಾರ ಹೆಚ್ಚು ಗಮನಾರ್ಹ ಅನ್ನಿಸೋದು.

ಡಿ.ಎಸ್.: ಯಾವ ಅರ್ಥದಲ್ಲಿ ?

ಕಿ. ರಂ. : ಅಂದರೆ ಹೊಸ ಸಾಹಿತ್ಯ ಪ್ರಕಾರವಾಗಿ ಯಾವುದಕ್ಕೆ ನಿರ್ದಿಷ್ಟವಾದಂತಹ ಓದುಗರಿದ್ದಾರೆ ಮತ್ತು ಒಂದು ಸಾಹಿತ್ಯಪ್ರಕಾರವಾಗಿ ವಿಕಾಸಗೊಂಡಂತಹ ಸಣ್ಣ ಕಥೆ ಅಂತ ನಾವು ಯಾವುದನ್ನ ಕರೀತೀವಿ ಆ ಮಾಧ್ಯಮ ಹೆಚ್ಚು ಈ ಹೊತ್ತು ವಿಶ್ಲೇಷಿಸಬೇಕಾಗಿರುವ, ವಿಚಾರ ಮಾಡಬೇಕಾಗಿರುವಂಥ ಒಂದು ಅಂಶ. ಅಲ್ಲದೆ ಇನ್ನೆಲ್ಲವೂ ಒಂದು ರೀತಿ ಕಥಾಸಾಹಿತ್ಯ ಅಂತ ಅನ್ನುವುದು ಹಿಂದೆ ಕಾವ್ಯದ ಮುಖೇನ Present ಆಗ್ತಾ ಇತ್ತು. ಈಗ ಕನ್ನಡ ಸಾಹಿತ್ಯವನ್ನೇ ತಗೊಳ್ಳಿ. ೧೦ನೇ ಶತಮಾನದಿಂದ ೨೦ನೇ ಶತಮಾನದ ತನಕ ಕಥೆಯೇ ಕನ್ನಡ ಸಾಹಿತ್ಯದ ಕೇಂದ್ರ ನೆಲೆ. ಪಂಪನಂತಹ ಕವಿಯ ಕಾವ್ಯವೂ ಕಥೆ ಮೂಲಕ ಪ್ರಕಟಗೊಳ್ಳುವಂಥಾದ್ದು. ಹರಿಹರನ ರಗಳೆಗಳು, ಕುಮಾರ ವ್ಯಾಸ, ರಾಘವಾಂಕನ ಕಾವ್ಯ–ಇವೆಲ್ಲ ಕಥಾಕೇಂದ್ರಿತವಾದವುಗಳು. ಆದರೆ ೧೯ನೇ ಶತಮಾನದ ನಂತರ ಸಣ್ಣ ಕಥೆ ಎನ್ನುವಂತ ಪ್ರಕಾರ ಆರಂಭವಾಗಿ ಅದಕ್ಕೇ ವಿಭಿನ್ನವಾಗಿರುವಂಥ, ವಿಶಿಷ್ಟವಾಗಿರುವಂಥ ಲಕ್ಷಣಗಳನ್ನು ನಾವು ಅನ್ವಯ ಮಾಡ್ತೀವಿ. ಕಥೆ ಅಂತ ಖಚಿತವಾಗಿ ಹೇಳುವಂತಹ ಒಂದು ಶಿಸ್ತಿಗೆ ಒಳಪಟ್ಟ, ನಿರ್ದಿಷ್ಟ ತಂತ್ರ, ಧೋರಣೆ ಮತ್ತು ಅದಕ್ಕನುಗುಣವಾದಂತಹ ಭಾಷೆಯ ಬಳಕೆ ಇವುಗಳೆಲ್ಲ ಪ್ರಕಟಗೊಂಡು, ಬಹಳ ಹೆಚ್ಚು ಅದನ್ನ ನಯಗೊಳಿಸಿದಂತಹ ಒಂದು ಮಾಧ್ಯಮವನ್ನಾಗಿ ರೂಪಿಸಿದಂತಹ ವಿಚಾರವನ್ನು ಗಮನಿಸ್ತೀವಿ.

ಡಿ.ಎಸ್.: ಈ ಹಿನ್ನೆಲೆಯೊಂದಿಗೆ ನಾವು ಮುಂದಿನ ಪ್ರಶ್ನೆಗೆ ಹೋಗಬಹುದೂಂತ ಕಾಣುತ್ತೆ. ಕಥೆ ಅಂದರೆ ಮೂಲತಃ ಏನು ಎನ್ನುವ ಪ್ರಶ್ನೆಗೆ ನೀವಿಬ್ರೂ ಉತ್ತರ ಕೊಡ್ತಾ, ನಡೆದ ಘಟನೆಗಳ ನಿರೂಪಣೆಯಿಂದ ಕತೆ ಆರಂಭವಾಗುತ್ತೆ ಅಂದಿರಿ. ಹಾಗಾದ್ರೆ ವರದಿಗೂ ಕತೆಗೂ ಮೂಲಭೂತ ವ್ಯತ್ಯಾಸಗಳು ಎಲ್ಲಿಂದ ಆರಂಭವಾಗ್ತವೆ ?

ಖಾಸನೀಸ : ಅಂದ್ರೆ ನೀವು ಕೇಳಿದ ಪ್ರಶ್ನೆ ವರದಿಯೂ ಕತೆಯಾಗಬಹುದೇ ಹೇಗೆ ಅಂತ. ಬಹುಶಃ ವರದಿ ಕತೆಯಾಗಲಾರದು. ಏಕೆಂದರೆ ನಿರ್ದಿಷ್ಟ ವಿಷಯದ ನಿವೇದನೆಯೊಂದೇ ವರದಿಯ ಗುರಿಯಾಗಿದ್ದು ಮೇಲುನೋಟಕ್ಕಷ್ಟೇ ಲಭ್ಯವಿರುವ ಮಾಹಿತಿಯನ್ನು ಮಾತ್ರ ಅದು ಒಳಗೊಂಡಿರುತ್ತದೆ ಕಾರಣ-ಕಾರಕಗಳ Cause and effects ಬಗ್ಗೆ ವರದಿಗಾರ ಅಷ್ಟೊಂದು ತಲೆಕೆಡಿಸಿಕೊಂಡಿರುವುದಿಲ್ಲ. ಈ ಕಾರಣಕ್ಕಾಗಿ ವರದಿ ಕತೆಯಾಗುವುದಿಲ್ಲ. ಆದರೆ ಕತೆಗಾರನು ನಿರ್ಲಿಪ್ತನಾಗಿದ್ದು ಕಥಾನಕದ ಓಟವನ್ನು ಪಾತ್ರಗಳ ಸ್ವಭಾವಗಳನ್ನು ಹಾಗೂ ಕಥಾಕ್ರಿಯೆಯನ್ನು ಮಾನಸಿಕವಾಗಿ ವಿಶ್ಲೇಷಿಸಿದಾಗ ಮೂಡಿಬರುವ ಅನುಭವದ ಒಟ್ಟಾರೆ ಅಭಿವ್ಯಕ್ತಿಯೇ

ಕತೆ. ಕತೆಗಾರನು ಕತೆಯ ಓಟಕ್ಕೆ ಕೃತ್ರಿಮ ಕಡಿವಾಣ ಹಾಕದೆ ರಾಜಸೂಯಯಾಗದ ಕುದುರೆಯಂತೆ ಅದನ್ನು ಅದರ ಪಾಡಿಗೆ ಬಿಟ್ಟರೆ ಅದು ಸುತ್ತಿ ಸೂರೆಮಾಡಬಹುದಾದ ಅಭಿವ್ಯಕ್ತಿಯ ವ್ಯಾಪ್ತಿ ಕತೆಯ ಅಡಿಪಾಯ ಎನ್ನುವುದು ನನ್ನ ಗ್ರಹಿಕೆ.

ಡಿ.ಎಸ್. : ಖಾಸನೀಸರು ಹೇಳಿದ ಮಾತುಗಳನ್ನು ಇನ್ನಷ್ಟು ವಿಸ್ತರಿಸಿ ಕಿ.ರಂ. ಮಾತಾಡಬಹುದು. ಅದಕ್ಕೆ ಪ್ರೇರಕವಾಗಿ ನನ್ನದೊಂದು ಸಣ್ಣ ಪ್ರಶ್ನೆ. ಒಂದು ವರದಿ ಎಲ್ಲಿ ವರದಿಯಾಗುವುದು ನಿಂತು ಕತೆಯಾಗಲು ಆರಂಭಿಸುತ್ತೆ ?

ಕಿ.ರಂ. : ಖಾಸನೀಸರು ಹೇಳಿದ ಹಾಗೆ ವರದಿ ಕತೆ ಅಲ್ಲ. ವರದಿ ಒಂದು ನಿರ್ದಿಷ್ಟ ಘಟನೆಯನ್ನು ನಿರೂಪಿಸುವಂಥ ಮಟ್ಟಕ್ಕೆ ಮಾತ್ರ ಸೀಮಿತಗೊಳ್ಳುತ್ತೆ. ಅಷ್ಟೇ ಅಲ್ಲದೆ, ವರದಿಯಲ್ಲಿ ವರದಿಗಾರನ ಒಂದು Vision–ದರ್ಶನ-ಪ್ರಧಾನವಾಗಿರಲ್ಲ. ಬಹಳ ಖಚಿತವಾಗಿ, ನಡೆದ ಸಂಗತಿಯನ್ನು ನಿರೂಪಿಸೋದಷ್ಟೇ ವರದಿಯ ಪ್ರಧಾನ ಉದ್ದೇಶ. ಆದರೆ ಒಂದು ಕತೆ ಅಂದ್ರೆ ಅದಕ್ಕೊಂದು ಘಟನೆ ಇರುತ್ತೆ, ಒಂದು ಸನ್ನಿವೇಶ ಇರುತ್ತೆ. ಈ ಘಟನೆ, ಸನ್ನಿವೇಶಗಳನ್ನು ನಡೆಸಿಕೊಂಡು ಹೋಗುವಂತಹ ಪಾತ್ರ ನಿರ್ಮಿತಿ ಇರುತ್ತೆ. ಅವೆಲ್ಲವೂ ಒಂದು ಐಕ್ಯತೆಯ ಕಡೆಗೆ ವಿಕಾಸಗೊಳ್ಳಲು ಬೆಳೆಯುವಂಥದ್ದಾಗಿರುತ್ತದೆ. ಕತೆಯನ್ನು ಓದ್ತಾ ಇರತಕ್ಕಂಥವನನ್ನು ಅದರೊಳಗಡೆ ಇರತಕ್ಕಂತಹ ಘಟನೆ, ಸನ್ನಿವೇಶ, ಪಾತ್ರನಿರ್ಮಿತಿ ಇವುಗಳು ಮೇಲಿಂದ ಮೇಲೆ ಆವರ್ತನಗೊಳ್ಳುತ್ತಾ ಆವರ್ತನಗೊಳ್ಳುತ್ತಾ ಒಂದು ನಿರ್ದಿಷ್ಟ ಪರಿಣಾಮದ ಕಡೆಗೆ ಕರೆದುಕೊಂಡು ಹೋಗುವಂತಿರುತ್ತವೆ. ಹೀಗಾಗಿ ವರದಿ ಕತೆ ಆಗೋಲ್ಲ. ಆದರೆ ಕಥಾನಕದ ಒಂದು ತಂತ್ರವನ್ನಾಗಿ ವರದಿಯನ್ನು ಬಳಸಿಕೊಳ್ಳಬಹುದು. ಉದಾಹರಣೆಗೆ ಮಾಸ್ತಿಯವರ ಕತೆಗಳಲ್ಲಿ ನಾನು ಹಿಂದೆ ಕೇಳಿದಂಥ ಒಂದು ಘಟನೆಯನ್ನು ನಿಮಗೆ ಈಗ ನಿರೂಪಿಸುತ್ತೇನೆ ಅಥವಾ ಇಂಥ ಡೈರಿಯೊಂದನ್ನು ನಾನು ನಿಮಗೆ ಈಗ ಪ್ರಸ್ತುತಗೊಳಿಸುತ್ತೇನೆ ಅಂತನ್ನೋ ರೀತಿಯಾದಂಥ ಒಂದು ಅಂಶವಾಗಿ, ವರದಿ ಒಂದು ತಂತ್ರವಾಗಿ ಕತೆಯಲ್ಲಿ ಬಳಕೆಯಾಗಬಹುದು.

ಡಿ. ಎಸ್. : ಆದರೆ ಒಂದು ಘಟನೆಯಲ್ಲಿ ವರದಿ ಮತ್ತು ಕತೆಗಳೆರಡರ ಸಾಧ್ಯತೆಯೂ ಇರುತ್ತೆ; ಅದನ್ನು ವರದಿಯಾಗಾದರೂ ಪ್ರಸ್ತುತಪಡಿಸಬಹುದು, ಕತೆಯಾಗಾದರೂ ಪ್ರಸ್ತುಪಡಿಸಬಹುದು ಅಂತೀರಾ ?

ಕಿ.ರಂ. : ವರದಿ ಮೂಲತಃ ಕಲಾತ್ಮಕ ತಂತ್ರಗಳೆಲ್ಲವನ್ನೇನೂ ಒಳಗೊಳ್ಳುವುದಿಲ್ಲ. ಆದರೆ ಕತೆಯಲ್ಲಿ ಒಂದು ಕಲಾತ್ಮಕ ತಂತ್ರದ ನೆಲೆಗಳ ಮೂಲಕ ಒಂದು ವಿಶೇಷ ಅರ್ಥ ಸಾಧ್ಯತೆಗಳು ಹೊರಡುತ್ವೆ.

ಡಿ.ಎಸ್.: ಹಾಗಾದ್ರೆ ಕಲಾತ್ಮಕ ವರದಿ ಕತೆಯಾಗಬಲ್ಲುದಾ ?

ಕಿ. ರಂ.: ಹೂಂ.... ಕಲಾತ್ಮಕತೆಯ ವ್ಯಾಖ್ಯಾನವನ್ನು ನಾವೀಗ ಪರಿಶೀಲಿಸ ಬೇಕಾಗುತ್ತೆ....

ಡಿ. ಎಸ್.: ಈ ಪರಿಶೀಲನೆಗೆ ಸಂಬಂಧಪಟ್ಟ ಹಾಗೇ ನಾವು ಇನ್ನೊಂದು ಪ್ರಶ್ನೆಯನ್ನು ಕೇಳಿಕೊಂಡು ಮುಂದುವರೀಬಹುದೂಂತ ಕಾಣುತ್ತೆ. ಆ ಪ್ರಶ್ನೆ, ಕತೆ ಹುಟ್ಟುವುದು ಒಂದು ಘಟನೆಯಲ್ಲೋ ಅಥವಾ ಒಂದು ಸೃಜನಶೀಲ ಮನಸ್ಸಿನಲ್ಲೋ ಅನ್ನೋದು.

ಖಾಸನೀಸ: ಕತೆಯೊಂದರ ಹುಟ್ಟು ಒಂದು ಸಂಕೀರ್ಣ ಕ್ರಿಯೆ. ಹೀಗಾಗಿ ಅದರ ಉಗಮ ಬೆಳವಣಿಗೆ ಹಾಗೂ ಅಭಿವ್ಯಕ್ತಿಗಳನ್ನು ಹಂತ ಹಂತವಾಗಿ ನಿಖರವಾಗಿ ಗುರುತಿಸುವುದು ಅಸಾಧ್ಯ. ಘಟನೆಯು ಕೇವಲ ಪ್ರೇರಣೆ ಮಾತ್ರವಾಗಿ, ಕತೆಯ ಸರ್ವಾಂಗೀಣ ಬೆಳವಣಿಗೆ ಲೇಖಕನ ವ್ಯಕ್ತಿತ್ವದ ಕಮ್ಮಟದಲ್ಲಿ ರೂಪ ತಾಳುತ್ತದೆ. ಕತೆಯಲ್ಲಿ ಲೇಖಕನ ಸೃಜನಶೀಲ ಮನಸ್ಸಿನ ಕ್ರಿಯೆ ಅಲ್ಲದೆ ಅವನ ಸಂಸ್ಕಾರವೂ ಬಹು ಮಟ್ಟಿಗೆ ಧ್ವನಿತವಾಗಿರ್ತದೆ.

ಕಿ. ರಂ.: ಒಂದು ಕತೆ ಲೇಖಕನು ಲೋಕವನ್ನು ನೋಡುವ ಮೂಲಕ ನಿರ್ಮಾಣವಾಗುವಂತಹುದು. ಹೀಗಾಗಿ ಲೋಕದ ಘಟನೆಗಳೇ ಕತೆಯಲ್ಲೂ ಮೈ ತಳೆಯುತ್ತವೆ. ಆದರೆ ಹಾಗೆ ಮೈದಳೆಯುವಾಗ ಅದು ಅನೇಕ ಅವಸ್ಥಾಂತರಗಳನ್ನು ಪಡೆದುಕೊಳ್ತದೆ ಅನ್ನುವುದನ್ನು ನಾವು ಮರೆಯುವ ಹಾಗಿಲ್ಲ. ಹೀಗಾಗಿ ಕತೆ ಹುಟ್ಟುವುದು ಒಂದು ಸೃಜನಶೀಲ ಮನಸ್ಸಿನಲ್ಲಿಯೇ. ಆ ಸೃಜನಶೀಲ ಮನಸ್ಸು ಅದಕ್ಕೆ ಒಂದು ಆಕಾರ ಕೊಡುತ್ತೆ. ಲೇಖಕ ತನ್ನ ನಿರ್ಮಾಣ ಪ್ರತಿಭೆಯ ಮೂಲಕ ಆ ಘಟನೆ, ಸನ್ನಿವೇಶವನ್ನು ಒಂದು ಕತೆಯನ್ನಾಗಿ ಮಾಡುತ್ತಾನೆ. ಆದ್ದರಿಂದ ಕತೆ ಹುಟ್ಟುವುದು ಲೋಕದ ಸಂಗತಿಗಳಿಂದಲೇ ಆದರೂ ಅದು ಬೇರೆ ಬೇರೆ ರೂಪಾಂತರ ಗಳನ್ನು ಧರಿಸಿ, ಒಂದು ಹೊಸ ಆಯಾಮವನ್ನು ಒಬ್ಬ ಕತೆಗಾರನ ಮೂಲಕ ಪಡೆದುಕೊಳ್ಳುತ್ತೆ.

ಡಿ. ಎಸ್.: ನಮ್ಮ ಚರ್ಚೆಗೆ ಇಲ್ಲಿ ಇನ್ನೊಂದು ಅಂಶವನ್ನು ತರಬಹುದಣಂತ ಕಾಣುತ್ತೆ. ನಾವು ಸೃಜನಶೀಲತೆ, ನಿರ್ಮಾಣ ಪ್ರತಿಭೆ, ಅವಸ್ಥಾಂತರ, ರೂಪಾಂತರ ಹಾಗೂ ಹೊಸ ಆಯಾಮಗಳ ಮಾತನಾಡುವಾಗ ನಾವು ಸ್ಥೂಲವಾಗಿ ಹೇಳ್ತಾ ಇರೋದು ಮನಸ್ಸಿನ ಕಲ್ಪನಾಶೀಲತೆ ಬಗ್ಗೆ ಅನ್ನಿಸುತ್ತೆ. ಈ ಹಿನ್ನೆಲೆಯಲ್ಲಿ ಏಳುವ ಪ್ರಶ್ನೆ ಅಂದ್ರೆ, ಒಂದು ಲೋಕಸಂಗತಿಗೆ ಕಲ್ಪನೆಯ ಶಕ್ತಿಯ ಸ್ಪರ್ಶ ಮಾಡಿಸಿದರೆ

ಅದು ಒಂದು ಕತೆಯಾಗಿ ಅರಳುತ್ತೇಂತ ಹೇಳಬಹುದಾ ? ಅಥವಾ ಕಥಾಭಿವ್ಯಕ್ತಿಗೂ ಮನುಷ್ಯನ ಕಲ್ಪನಾಶಕ್ತಿಗೆ ಇರುವ ಸಂಬಂಧ ಯಾವ ತೆರನದ್ದು, ಎನ್ನುವ ಪ್ರಶ್ನೆ ತಗೊಂಡರೆ, ಖಾಸನೀಸರು ಏನು ಹೇಳ್ತಾರೆ ?

ಖಾಸನೀಸ : ಕಥಾವಸ್ತು ಅಂದರೆ ಕಚ್ಚಾ ಸರಕು ಇದ್ದ ಹಾಗೆ. ಕಲ್ಪನೆಯು ಮಿಶ್ರಣ ಆ ಕಚ್ಚಾ ಸರಕನ್ನು ಸಂಸ್ಕರಿಸಿ ಕಲಾಕೃತಿಯನ್ನಾಗಿ ಮಾಡುತ್ತೆ. ಕತೆಗಾರನಲ್ಲಿ ಅಗತ್ಯವಾಗಿ ಇರಬೇಕಾದ ಪರಕಾಯ ಪ್ರವೇಶ ಶಕ್ತಿ ಕಲ್ಪನಾಲೋಕಕ್ಕೆ ಸಂಬಂಧಿಸಿದ್ದು. ಸಂಶೋಧಕನ ಮೂಲಪ್ರೇರಣೆ ಹಾಗೂ ಅತ್ಯುತ್ತಮ ಲೇಖಕನ ಸ್ಫೂರ್ತಿಯ ಮೂಲ ಸೆಲೆ ಒಂದೇ. ಅದೇ ತರ್ಕಬದ್ಧವಾದ ಕಾಲ್ಪನಿಕ ವೈಚಾರಿಕ ಶಕ್ತಿ. ಜೂಲ್ಸ್‌ವರ್‌ನಲ್ಲಿ ವ್ಯಕ್ತವಾಗುವ ವೈಜ್ಞಾನಿಕ ಭವಿಷ್ಯವಾಣಿ (Scientific Prophecy) ಹಾಗೂ ಮುಂದೆ ಶತಮಾನಗಳ ನಂತರ ವಿಜ್ಞಾನಿಗಳು ಸಾಧಿಸಿದ ಅಂತರಿಕ್ಷ ಪ್ರಯಾಣದ ಯಶಸ್ಸು–ಇವೆರಡೂ ಕಲ್ಪನೆಗಳ ಸೆಲೆಗಳ ಉಗಮ ಒಂದೇ. ಹೀಗಾಗಿ ಕತೆ ಹಾಗೂ ಗಳ ಸಂಬಂಧ ಪೂರಕವಾಗಿದೆ ಮತ್ತು ಪರಸ್ಪರ ಅವಲಂಬಿಯಾಗಿದೆ.

ಕಿ.ರಂ. : ಈ ಕಲ್ಪನೆ ಅನ್ನುವುದು ಲೇಖಕ ಲೋಕಾನುಭವವನ್ನು ಪರಿಣಾಮ ಕಾರಿಯಾಗಿ ಮಂಡಿಸೋದಕ್ಕೆ ಬಳಸುವಂಥ ಒಂದು ಮುಖ್ಯವಾದ ಅಂಶ. ಹೀಗಾಗಿ ಕಲ್ಪನೆ ಅನ್ನೋದನ್ನ ಇಲ್ಲಿ ಪ್ರತ್ಯೇಕವಾಗಿ ವಿಚಾರ ಮಾಡೋಕೆ ಆಗೊಲ್ಲ. ಲೋಕಾನು ಭವವನ್ನು ಪರಿಣಾಮಕಾರಿಯಾಗಿ ಮಂಡಿಸೋದಕ್ಕೆ ಬಳಸುವಂಥ ಒಂದು ಮುಖ್ಯ ವಾದ ಅಂಶ. ಹೀಗಾಗಿ ಕಲ್ಪನೆ ಅನ್ನೋದನ್ನ ಇಲ್ಲಿ ಪ್ರತ್ಯೇಕವಾಗಿ ವಿಚಾರ ಮಾಡೋಕೆ ಆಗೋಲ್ಲ. ಲೋಕಾನುಭವ ಕಲಾಕೃತಿ ಆದಾಗ ಅದು ಕಲ್ಪನೇನೋ ಅದು ವಸ್ತು ಸತ್ಯವೋ ಅಥವಾ ಲೋಕಸಂಗತಿಯೋ!.... ಅವೆಲ್ಲವೂ ಮೀರಿ ಒಂದು ಕಲಾಕೃತಿಯಾಗಿ ಬಿಡುತ್ತೆ ಅದು.

ಡಿ.ಎಸ್. : ಅಂದರೆ, ನೀನು ಏನು ಹೇಳ ಹೊರಟಿದ್ದಿ ಅನ್ನೋದು ಆ ನಿನ್ನ ಕಲ್ಪನೆಯನ್ನು ನಿಯಂತ್ರಿಸುತ್ತೇಂತ ಅಂತೇನಾದ್ರೂ ನೀವು ಹೇಳೋಕ್ಕೆ ಹೊರಟಿದ್ದೀರಾ ?

ಕಿ.ರಂ. : ನಮಗೆ ಒಂದು ಕಲಾಕೃತಿಯ ಒಳಗಡೆ ಅದು ಬಹಳ ನಿರ್ದಿಷ್ಟವಾಗಿ, ನಿಖರವಾಗಿ ಗುರುತಿಸೋಕ್ಕೆ ಆಗೊಲ್ಲ–ಕಲ್ಪನೆಯ ಅಂಶ ಯಾವುದೂಂತ. ಯಾಕೇಂದ್ರೆ ಆ ಕಲ್ಪನೆ ಏನಿದ್ರೂ ಕವಿಯ ಸೃಷ್ಟಿಶೀಲತೆಯ ಸಂದರ್ಭದಲ್ಲಿ ಮಾತ್ರ ಕ್ರಿಯಾತ್ಮಕ ವಾಗಿರುವಂತಹದ್ದು. ಅದು ಓದುಗನ ಹತ್ತಿರ ಬಂದಾಗ ಅದು ಕಲ್ಪನೆಯ ಅಂಶ ಅನ್ನುವುದನ್ನು ಪ್ರತ್ಯೇಕಗೊಳಿಸುವುದಕ್ಕೆ ಸಾಧ್ಯವಾಗದೇ ಇರುವಂತಾದ್ದು ಕೂಡಾ ಆಗಿರುತ್ತೆ.

ಡಿ.ಎಸ್. : ಈಗ ನಾವು ಮುಂದಿನ ಪ್ರಶ್ನೆಗೆ ಹೋಗಬಹುದು-ಈ ಪ್ರತಿಭೆ, ಕಲ್ಪನೆ ಪ್ರೈದಳೆಯುವ ಒಂದು ಮಾಧ್ಯಮವಾದ ಭಾಷೆ ಕಡೆಗೆ. ನಾವು ಸಾಮಾನ್ಯ ವಾಗಿ ಕಥಾ ವಿಮರ್ಶೆಯಲ್ಲಿ, ಇಲ್ಲಿ ಭಾಷೆಯನ್ನು ಸಮರ್ಥವಾಗಿ ದುಡಿಸಿಕೊಳ್ಳಲಾಗಿದೆ ಅಥವಾ ದುಡಿಸಿಕೊಂಡಿಲ್ಲ ಎನ್ನುವ ಮಾತುಗಳನ್ನು ಕೇಳ್ತಾ ಇರ್ತೀವಿ. ಹೀಗಂದ್ರೆ ಏನರ್ಥ ಖಾಸನೀಸ್ ?

ಖಾಸನೀಸ : ಕಥಾನಕದ ಸಮರ್ಥ ಸಂವಹನೆಯ ಸಾಧನವಾಗಿ ಮಾತ್ರ ಕತೆ ಯಲ್ಲಿ ಭಾಷೆಗೆ ಸ್ಥಾನವಿದೆ. ಕಾವ್ಯದಲ್ಲಿ, ಕವಿತೆಯಲ್ಲಿ ಇದ್ದಷ್ಟು ಪ್ರಮುಖ ಹೊಣೆ ಗಾರಿಕೆ ಭಾಷೆಗೆ ಇಲ್ಲಿಲ್ಲ. ಗದ್ಯಲೇಖನ ಶೈಲಿಯಲ್ಲಿ ವಿಚಾರಗಳನ್ನು, ಭಾವನೆಗಳನ್ನು ಸುಲಲಿತವಾಗಿ ಹೇಳುತ್ತಾ ವಿಶಿಷ್ಟ ಪರಿಣಾಮಕ್ಕಾಗಿ ವಿಶಿಷ್ಟ ಪದಪುಂಜಗಳನ್ನು ಉಪ ಯೋಗಿಸುತ್ತಾ ಹೋಗುವ ಸಕ್ರಿಯ ಭಾಷೆಯೊಂದರ ಅಗತ್ಯವಿರುತ್ತದೆ. ಅತಿರಂಜಿತ ಭಾಷೆಯೂ ಒಳ್ಳೆಯ ಕತೆಯ ಅಂತಸ್ಸತ್ವವನ್ನು ಕಡಿಮೆ ಮಾಡಿಬಿಡಬಹುದು. ಗ್ರಾಮೀಣ ಭಾಷೆ, ಗ್ರಂಥಸ್ಥ ಭಾಷೆ, ಶ್ರೀಸಾಮಾನ್ಯನ ಆಡುಮಾತು – ಉಪ ಯೋಗಿಸಿದ ಭಾಷೆ ಯಾವುದೇ ಆದರೂ ಕತೆಯ ಅಗತ್ಯಕ್ಕನುಗುಣವಾಗಿ ಉಪಯೋ ಗಿಸಬೇಕೇ ಹೊರತು ಅನಗತ್ಯವಾದ ಚಮತ್ಕಾರಿಕ ಪರಿಣಾಮಕ್ಕಾಗಿ ಅಲ್ಲ.

ಕಿ.ರಂ. : ನಾನು ಖಾಸನೀಸರ ಅಭಿಪ್ರಾಯವನ್ನು ಹಾಗೆ ಒಪ್ಪಲ್ಲ-ಒಂದು ಕವಿತೆ ಒಳಗಡೆ ಭಾಷೆಗೆ ಇರತಕ್ಕಂತಹ ಸ್ಥಾನದ ರೀತಿಯಲ್ಲಿ ಸಣ್ಣಕತೆ ಒಳಗಡೆ ಅದರ ಸ್ಥಾನ ಅಷ್ಟೇನೂ ಮಹತ್ವದ್ದಲ್ಲ ಅನ್ನೋ ಮಾತನ್ನ. ಖಾಸನೀಸರು ಭಾಷೆಯನ್ನು ಒಂದು ಅಂಶವನ್ನಾಗಿ ಮಾತ್ರ ಪ್ರತ್ಯೇಕಿಸಿ ಮಾತನಾಡ್ತಾ ಇದಾರೆ. ಒಳ್ಳೆ ಕಲಾಕೃತಿ ಯಲ್ಲಿ ಹಾಗೆ ಭಾಷೆಯನ್ನು ಪ್ರತ್ಯೇಕಿಸಿ ಮಾತನಾಡೋಕೆ ಆಗೊಲ್ಲ. ಯಾಕೇಂದ್ರೆ, ಈ ಸಣ್ಣಕತೆಯ ಮಾಧ್ಯಮವೇ, ಅಥವಾ ಸಾಹಿತ್ಯದ ಮಾಧ್ಯಮವೇ ಮೂಲಭೂತ ವಾಗಿ ಭಾಷೆಯನ್ನು ಒಡೆದು ಕಟ್ಟೋದರಿಂದ ನಿರ್ಮಾಣವಾಗುವಂಥದ್ದು. ಭಾವಗೀತೆ ಮತ್ತು ಸಣ್ಣ ಕತೆ ಇವೆರಡೂ ಕೂಡ ಒಂದೇ ರೀತಿಯಾದಂಥ ತೀವ್ರತೆಯನ್ನು ಪಡೆದು ಕೊಂಡಿರುವಂತಹ ಮಾಧ್ಯಮಗಳು. ಇರಬಹುದು-ಭಾವಗೀತೆ ಒಳಗಡೆ ಅದಕ್ಕೇ ಬೇರೆ ರೀತಿಯಾದಂತಹ ಗೇಯತೆ, ಲಯ, ಛಂದೋರೀತಿಗಳು ಮುಖ್ಯ ಆಗಿರಬಹುದು. ಅದೂ ಹೇಳೋಕ್ಕಾಗಲ್ಲ. ಈಗ ಉದಾಹರಣೆಗೆ ಲಂಕೇಶರ 'ರೊಟ್ಟಿ' ಅಥವಾ ದೇವನೂರ ಮಹಾದೇವರ 'ಅಮಾಸ'ದಂತಹ ಕತೆಗಳನ್ನೇ ನೋಡಿ. ಅವಕ್ಕೆ ತನ್ನದೇ ಆದಂಥ ವಿಶಿಷ್ಟ ಲಯವೂ ಇರುತ್ತೆ ಅಲ್ಲಿ. ಒಂದು ರೀತಿ ಕಾವ್ಯದ ಸ್ಪರ್ಶದಿಂದ ಕತೆಗೆ ಬೇರೆಯೇ ರೀತಿಯಾದಂಥ ಒಂದು ತೀವ್ರತೆ ಬರುವಂತಾಹದ್ದನ್ನು ನೋಡಿದ್ದೀವಿ ನಾವು ಕನ್ನಡದಲ್ಲಿ. ಸ್ವತಃ ಖಾಸನೀಸರೇ ಆ ರೀತಿಯಾದಂಥ ಒಳ್ಳೇ

ಕತೆಗಳನ್ನು ಬರೆದಿದ್ದಾರೆ. ಆದ್ದರಿಂದ ಭಾಷೆ ಇಲ್ಲಿ ಎಂಥದ್ದಿರಬೇಕು ಅಂತ ಹೇಳ ಕ್ಕಾಗಲ್ಲ. ಬಹಳ ಕಷ್ಟವಾದ ವಿಚಾರ.

ಡಿ ಎಸ್.: ಪ್ರಶ್ನೆ ಇಲ್ಲಿ ಭಾಷೆ ಎಂಥದ್ದಿರಬೇಕು ಅನ್ನುವುದಲ್ಲ. ಕಥಾಭಿವ್ಯಕ್ತಿಗಾಗಿ ಭಾಷೆಯನ್ನು ಸಮರ್ಥವಾಗಿ ದುಡಿಸಿಕೊಳ್ಳುವುದು ಅಂದರೇನು ಅನ್ನುವುದು.

ಕಿ.ರಂ.: ಹಾಂ ... ಈಗ ಉದಾಹರಣೆಗೆ ಮಾಸ್ತಿಯವರ 'ಗೌತಮಿ ಹೇಳಿದ ಕತೆ' ಅಥವಾ 'ಮೊಸರಿನ ಮಂಗಮ್ಮ' ತಗೊಳ್ಳಿ. ಅಲ್ಲಿ ಗೊತ್ತಾಗುತ್ತೆ ಭಾಷೆಗೆ ಯಾವ ರೀತಿಯಾದಂಥ ತೀವ್ರತೆ ಮತ್ತು ಆ ಭಾಷೆಗಿರತಕ್ಕಂತಹ immediacy ಅಂದರೆ 'ಸದ್ಯತನ' ಎಷ್ಟು ಮುಖ್ಯಾಂತ. ಈವಾಗ ಕಾದಂಬರಿಯ ಭಾಷಾಕ್ರಮಕ್ಕಿಂತ ಒಂದು ಸಣ್ಣಕತೆಯ ಭಾಷಾಕ್ರಮ ಇದೆಯಲ್ಲಾ ಅದು ಬಹಳ ಸದ್ಯತನವನ್ನು ಅಪೇಕ್ಷಿಸುತ್ತೆ. ಅಂತಹ ಸದ್ಯತನದ ಭಾಷಾಕ್ರಮ ಇದೆಯಲ್ಲಾ ಆ ಭಾಷಾಕ್ರಮ ಯಾವುದೇ ಉತ್ತಮವಾದಂಥ ಸಣ್ಣಕತೆಯ ಜೀವಾಳ.

ಡಿ ಎಸ್.: ಆದ್ರೆ ಕನ್ನಡದಲ್ಲಿ ಅನೇಕ ಸಾಹಿತ್ಯ ಚಳುವಳಿಗಳು ನಡೆದ ಮೇಲೆ ಈ ಕಥಾ ರೂಪದಲ್ಲಿ ಭಾಷೆಯ ಬಳಕೆ ಕುರಿತಂತೆ ಕೂಡಾ ನಮ್ಮ ಕಲ್ಪನೆ ಬದಲಾಗ್ತಾ ಬಂದಿದೆ ಅಲ್ವಾ ? ಉದಾಹರಣೆಗೆ ನವೋದಯದ ಕುವೆಂಪು ಅವರ 'ಧನ್ವಂತರಿಯ ಚಿಕಿತ್ಸೆ'ಯ ಭಾಷಾಕ್ರಮಕ್ಕೂ ನಂತರವೇ ಕಾಣಿಸಿಕೊಂಡ ಪ್ರಗತಿಶೀಲ ಭಾರತೀಯ ಪ್ರಿಯರ 'ಮೋಚಿ' ಕತೆಯ ಭಾಷಾ ಕ್ರಮಕ್ಕೂ ಸಾಕಷ್ಟು ವ್ಯತ್ಯಾಸ ಇದೆಯಲ್ವಾ ?

ಕಿ.ರಂ. : ಭಾಷೆಯ ಕಲ್ಪನೆ ಮತ್ತು ಲೇಖಕನ ಧೋರಣೆ–ಇವೆರಡಕ್ಕೂ ಬಹಳ ಸಮೀಪದ ಸಂಬಂಧ ಇದೆ. ಅಷ್ಟೇ ಅಲ್ದೆ ನಮ್ಮ ಸಮಾಜದಲ್ಲಿಯೂ ಕೂಡಾ ಈ ಭಾಷೆ ಬೇರೆ ಬೇರೆ ರೀತಿಯಾದಂಥ ಬದಲಾವಣೆಗೆ ಪಕ್ಕಾಗಿರುವಂಥದನ್ನ ನೋಡುತ್ತೀವಿ. ಆದ್ದರಿಂದ ಸಾಹಿತ್ಯದಲ್ಲಿ ಮಾತ್ರ, ಕತೆಯಲ್ಲಿ ಮಾತ್ರ ಭಾಷೆ ಬದಲಾಗಿ ಬಿಟ್ಟಿದೇಂತ ಹೇಳಕ್ಕಾಗೊಲ್ಲ.

ಡಿ.ಎಸ್.: ಮೂಲತಃ, ಸಮಾಜದಲ್ಲಿ ಆಗತಕ್ಕಂಥ ಬದಲಾವಣೆಯೇ ಸಾಹಿತ್ಯದಲ್ಲಿ ಆಗುವಂಥ ಬದಲಾವಣೆಗೆ ಕಾರಣವಾಗಬಹುದು.

ಕಿ.ರಂ.: ಅದೇ ಕಾರಣ. ಅದೂ ಭಾಷೆಯಲ್ಲಂತೂ ಬಹಳ. ಹತ್ತು ವರ್ಷಗಳ ಹಿಂದೆ ನಾವು ಉಪಯೋಗಿಸುತ್ತಿದ್ದಂತಹ ಭಾಷಾ ಕ್ರಮಕ್ಕೂ ಇವೊತ್ತು ನಾವು ಬಳಸಿರತಕ್ಕಂತಹ ಭಾಷಾಕ್ರಮಕ್ಕೂ ಎಷ್ಟೋ ವ್ಯತ್ಯಾಸ ಇದೆ. ಈಗ ಉದಾಹರಣೆಗೆ ಶ್ರೀಕೃಷ್ಣ ಆಲನಹಳ್ಳಿ ಮತ್ತು ದೇವನೂರ ಮಹಾದೇವ ಅವರ ಕತೆಗಳನ್ನು ನಾವು ಓದಿದಾಗ ನಮಗೆ ಕನ್ನಡ ಗದ್ಯದ ಸ್ವರೂಪ ಅಥವಾ ಕಥಾ ಭಾಷೆಯ ಸ್ವರೂಪ ಹೇಗೆ ಹೊಸ ಮಜಲುಗಳನ್ನು ಪಡಕೊಂಡಿದೆ ಅನ್ನೋದು ಕಾಣುತ್ತೆ. ಅಲ್ದೆ ನೋಡಿ,

ನವ್ಯ ಕತೆಗಾರರಾದಂಥ ಅನಂತಮೂರ್ತಿ, ಲಂಕೇಶ, ಚಿತ್ತಾಲ, ದೇಸಾಯಿ, ತೇಜಸ್ವಿ, ಖಾಸನೀಸ–ಇವರ ಕಥಾಕ್ರಮ ಹಾಗೂ ಅದರ ಭಾಷಾಕ್ರಮಗಳಿಗಿಂತ ಭಿನ್ನವಾದಂತಹ ಭಾಷಾಕ್ರಮದ ಸಂದರ್ಭದಲ್ಲಿ ಇವೊತ್ತು ನಾವಿದ್ದೀವಿ. ಆದ್ದರಿಂದ ಕನ್ನಡ ಸಾಹಿತ್ಯ ಎಂದಿನಿಂದಲೂ ಪ್ರಯೋಗಶೀಲತೆಯ ಕಡೆಗೆ ಅದರ ತುಡಿತ ಇರುವುದರಿಂದ ಹೊಸ ಓದುಗರನ್ನು ಆಕರ್ಷಿಸುವಂತಹ ಸಾಧ್ಯಮ ಕೂಡಾ ಆಗಿಬಿಟ್ಟಿದೆ. ಒಂದು ರೀತಿ ಸಣ್ಣಕತೆ ಇವೊತ್ತು ಬಹಳ ಅತ್ಯಂತ ಜನಪ್ರಿಯವಾದಂತಹ ಸಾಹಿತ್ಯದ ಪ್ರಕಾರಗಳಲ್ಲಿ ಒಂದು. ಆ ಹಿನ್ನೆಲೆಯಲ್ಲಿ ಭಾಷೆಯನ್ನ ದುಡಿಸಿಕೊಳ್ಳುವುದು ಲೇಖಕನಿಗೆ ಸಂಬಂಧ ಪಟ್ಟಂಥ ವಿಚಾರ. ಆದರೆ ಆ ಕತೆಗೆ ಆಕರ್ಷಿತರಾಗಿ ಇರತಕ್ಕಂತಹ ಓದುಗರಿದ್ದಾರಲ್ಲ, ಆ ಓದುಗರು ಕೂಡಾ ಹೊಸ ಭಾಷಾ ಸಂದರ್ಭಕ್ಕೆ ಹೇಗೆ ಪ್ರತಿಕ್ರಿಯಿಸುತ್ತಿದ್ದಾರೆ ಅಂತನ್ನುವುದನ್ನ ಈ ಹೊತ್ತಿನ ಸಣ್ಣಕತೆಯ ವ್ಯಾಪ್ತಿಯನ್ನು ಗಮನದಲ್ಲಿಟ್ಟುಕೊಂಡು ನೋಡಬಹುದು.

ಡಿ.ಎಸ್.: ನಮ್ಮ ಈವರೆಗಿನ ಚರ್ಚೆ ಏನು ಹೇಳುತ್ತೆ ಅಂದ್ರೆ, ಸಣ್ಣಕತೆ ಒಂದು ಸಾಹಿತ್ಯ ಪ್ರಕಾರವಾಗಿ ತನ್ನದೇ ಆದ ಒಂದು ಆಂತರಿಕ ಶಿಸ್ತನ್ನು ಪಡೆದುಕೊಂಡಿದೆ ಮತ್ತು ಈ ಆಂತರಿಕ ಶಿಸ್ತಿನ ಮೂಲಕ ಅದು ಸ್ವಯಂಪೂರ್ಣವಾದ ಒಂದು ಕಲಾ ಕೃತಿಯಾಗಿ ಮೂಡಬಲ್ಲದಾಗಿದೆ. ಈ ಹಿನ್ನೆಲೆಯಲ್ಲಿ ನಾವು ಈಗ ಈ ಕಮ್ಮಟದ ಕೊನೆಯ ಪ್ರಶ್ನೆಯನ್ನ ಎತ್ತಿಕೊಳ್ಳಬಹುದು. ಅದೂಂದ್ರೆ, ಸಣ್ಣಕತೆ ಒಂದು ಸ್ವಯಂ ಪೂರ್ಣವಾದ ಕಲಾಕೃತಿ ಆಗುವುದಾದರೆ ಅದು ತನ್ನ ಒಡಲಲ್ಲಿ ಒಂದು ದರ್ಶನದ ಕುಡಿಯನ್ನಾದರೂ ಪಡೆದಿರಬೇಕಾಗುತ್ತೆ ಅಲ್ಲವಾ ?

ಖಾಸನೀಸ: ಕತೆಯು ಅದರ ಸೀಮಿತ ಚೌಕಟ್ಟಿನಲ್ಲಿ ಬದುಕಿನ ವಿರಾಟ್‌ದರ್ಶನವನ್ನು ಕೊಡಲಾರದು. ಆದರೆ ಪ್ರತಿಯೊಂದು ಕತೆಯೂ ತನ್ನ ಇತಿಮಿತಿಯಲ್ಲಿ ಬದುಕಿನ ಒಂದು ಅಂಶವನ್ನಾದರೂ ಬೆಳಗಿಸುವಂತಾಗಬೇಕು. ಕೊನೆಯಲ್ಲಿ ಓದುಗನನ್ನು Sadder and a wiser man ಅಥವಾ Happier and wiser man ಮಾಡು ವುದೇ ಒಂದು ಒಳ್ಳೆಯ ಕತೆಯ ಸಾರ್ಥಕತೆಯ ದ್ಯೋತಕ. ಕೆಲವು ಕತೆಗಳನ್ನು ಕೇವಲ ಮನರಂಜನೆಗೆಂದೇ ಬರೆದಿದ್ದಿರಬಹುದು. ಆದರೆ ಒಂದು ಮಾತು ನಿಜ– ಪ್ರತಿಯೊಂದು ಕತೆಗೂ ಅದರದೇ ಆದ ಖಚಿತ ಉದ್ದೇಶ ಸಾಧನೆ ಇರಬೇಕು. ಆ ಅರ್ಥದಲ್ಲಿ ಅದೇ ಆ ಕತೆ ಕೊಡುವ ಬದುಕಿನ ದರ್ಶನ. ಸಣ್ಣ ಕತೆ ಒಂದು ಧರ್ಮೋ ಪದೇಶವಲ್ಲ. ದಿನಪತ್ರಿಕೆಯಲ್ಲಿಯ ಒಂದು ರಾಜಕೀಯ ಸಂಪಾದಕೀಯವಲ್ಲ. ಯಾವುದೋ ಪಠ್ಯಪುಸ್ತಕವೊಂದರ ಒಂದು ಪ್ರಕರಣವೂ ಅಲ್ಲ. ನಾವು ನೋಡಿ ಸಂತೋಷಪಟ್ಟ ಒಂದು ಒಳ್ಳೆಯ ಚಲಚಿತ್ರದಂತೆ, ನಾವು ಚಪ್ಪಾಳೆ ತಟ್ಟಿ ಪ್ರೋತ್ಸಾ ಹಿಸಿದ ಒಂದು ಉದ್ರೇಕಕಾರಿ ಪಂದ್ಯದಂತೆ, ಕತೆ ಅದಕ್ಕನುಗುಣವಾದ ಒಂದು

ನಿರ್ದಿಷ್ಟವಾದ ಮನರಂಜನೆಯನ್ನು ನೀಡಬೇಕು ಎನ್ನುವುದು ಮಾತ್ರ ಸ್ಪಷ್ಟವಾದ ಅಂಶ. ಕತೆಯು ಒಂದು ಅರ್ಥದಲ್ಲಿ Fiction. A Fiction, the Dictionary tells us, is another word for lie. ಹಾಗಾದ್ರೆ ಕತೆ ಸುಳ್ಳುಗಳ ಕಂತೆಯೇ? ಇಂಥ ಸುಳ್ಳುಗಳಿಂದ ನಾವು ಹೇಗೆ ಮತ್ತು ಯಾಕೆ ಪುಳಕಿತರಾಗುತ್ತೇವೆ? ಕೆಲವೊಂದು ಸುಳ್ಳುಗಳು ಸತ್ಯಕ್ಕಿಂತಲೂ ಹೆಚ್ಚು ದಿಟವಾದ ಸತ್ಯದ ಭ್ರಮೆಯನ್ನುಂಟು ಮಾಡುತ್ತವೆಂದೇ ?....ಹೀಗೆ ಒಟ್ಟಿನಲ್ಲಿ ಕತೆ ಪುರಾಣವಾಗಿ, ಇಡೀ ಮನುಕುಲದ ಐತಿಹಾಸಿಕ ಹಾಗೂ ಸಾಮಾಜಿಕ ಪ್ರಜ್ಞೆಯಾಗಿ ಮನೋವಿಶ್ಲೇಷಣೆಯ ಹರಿತವಾದ ಅಸ್ತ್ರವಾಗಿ ಅಥವಾ ಕೇವಲ ತಂತ್ರ ಚಮತ್ಕಾರವಾಗಿ ನಮಗೆ ಬದುಕಿನ ದರ್ಶನವನ್ನು ಕೊಡುತ್ತದೆ.

ಕಿ.ರಂ. : ಖಾಸನೀಸರ ಮಾತಿನಲ್ಲೇ ಎಲ್ಲ ಅಂಶಗಳೂ ಇದ್ದ ಹಾಗೆ ನನಗೆ ತೋರುತ್ತಾ ಇದೆ. ಆದರೆ ಖಾಸನೀಸರು ಹೇಳುವಂಥಾ ಸುಳ್ಳು ಎನ್ನುವ ಒಂದು ಅಂಶವನ್ನು ವಿಸ್ತರಿಸೋಕೆ ಇಷ್ಟಪಡ್ತೀನಿ. ಯಾವುದೇ ಕತೆ ಸುಳ್ಳು ಹೇಳ್ತಾ ಇರುತ್ತೆ; ಆದರೆ ಓದತಕ್ಕಂಥವನಿಗೆ ಅದರ ನಿಜಗಳು ತಿಳೀತಾ ಇರ್ತವೆ. ಸುಳ್ಳು ಲೇಖಕನ ದೃಷ್ಟಿಯಲ್ಲಿ ಒಂದು ತಂತ್ರ. ಓದುಗನ ನೆಲೆಯಿಂದ ಅದು ನಿಜ. ಯಾಕೇಂದ್ರೆ ಯಾವುದೇ ಒಂದು ಕಲಾಕೃತಿ ಅನೇಕ ಸುಳ್ಳಿನ ಅಂಶಗಳನ್ನು ಒಳಗೊಳ್ಳದೆ ಅದು ಒಳ್ಳೇ ಕಲಾಕೃತಿ ಆಗೋಲ್ಲ. ಯಾಕೇಂದ್ರೆ ನಾವು ಲೋಕದಲ್ಲಿ ಮಾತನಾಡುವ ರೀತಿಯಲ್ಲಿ ಒಂದು ಕತೆ ಮಾತನಾಡ್ತಾ ಇರೊಲ್ಲ. ನಾವು ಲೋಕದಲ್ಲಿ ವ್ಯವಹರಿಸೋ ರೀತಿ ಒಂದು ಕತೆಯು ವ್ಯವಹಾರಗಳಿಂದ ನಡೆಯೊಲ್ಲ. ಇದೇ ಒಂದು ರೀತಿಯಾದಂಥ Manipulation. ಹಾಗಾಗಿ ಒಂದು ಕತೆಯಲ್ಲಿ ದರ್ಶನ ಎನ್ನುವುದು ಅದು ಪ್ರತೀತಿಗೊಳ್ಳುವಂಥಾದದ್ದು. ದರ್ಶನ ಒಂದು ಅರ್ಥದಲ್ಲಿ ತುಂಬಾ Fat word, ಇನ್ನೊಂದು ಅರ್ಥದಲ್ಲಿ ಬಹಳ ಅನಿವಾರ್ಯದಾದಂಥ ಮುಖ್ಯವಾದಂಥ Element. ಯಾಕೇಂದ್ರೆ ಸಣ್ಣ ಕತೇನ ಅಲ್ಪ ಜೀವಿಗಳ ಮಹಾಕಾವ್ಯ ಅಂತ ಕರೀತಾರೆ .. ಆ ಮೇಲಿಂದ ಬಾಹ್ಯ ಘಟನೆಗಳನ್ನೆಲ್ಲ ವಿಘಟನೆಗೊಳಿಸೋದು ಒಂದು ಕತೆಯ ಉದ್ದೇಶ. ಆಮೇಲಿಂದ ಘಟನೆ ವಿಘಟನೆಗಳನ್ನು ಪೋಣಿಸಿ ಅದರಿಂದ ಮತ್ತೊಂದು ಅರ್ಥ ಸಾಧ್ಯತೆಯನ್ನು ಹುಟ್ಟಿಸೋದು ಒಂದು ಸಣ್ಣ ಕತೆಯ ಉದ್ದೇಶ. ಹೀಗಾಗಿ ಸಣ್ಣ ಕತೆಯಲ್ಲಿ ಒಂದು Vision ಅನ್ನೋದು ಎಲ್ಲ ಕಲಾಕೃತಿಗಳಲ್ಲೂ ಹುಟ್ಟೋ ಹಾಗೆ ಹುಟ್ಟುತ್ತೆ. ಆದರೆ ಈ ಸಣ್ಣಕತೆಯಲ್ಲಿ ಹುಟ್ಟೋ ಅಂತ Visionಅನ್ನ ಎಲ್ಲರೂ ಒಂದಲ್ಲ ಒಂದು ರೀತಿಯಿಂದ ಮುಖ್ಯಾಂತ ಪರಿಗಣಿಸ್ತಾರೆ. ಏಕೆಂದರೆ ತಮ್ಮ ಸುತ್ತಣ ಸಂಗತಿಗಳ ಮುಖೇನವೇ ಈ ಸಣ್ಣಕತೆಗೆ ಮೂಲದ್ರವ್ಯ ಸಿದ್ಧಗೊಳ್ಳೋದ್ರಿಂದ ಅದರಿಂದ ಹುಟ್ಟುವಂಥ ದರ್ಶನ ಕೂಡಾ ಬಹಳ ಮುಖ್ಯವಾದದ್ದೇ ಆಗಿರುತ್ತೇಂತ.

●

ಅರಬ್ಬೀ ಲೇಖಕ:

ನಗೀಬ್ ಮಹಫುಜ್‌ರ ಪ್ರಪಂಚ

⊕ ಅಮಿತಾವ್ ಘೋಷ್

1989ನೇ ವರ್ಷಕ್ಕಾಗಿ ನೋಬೆಲ್ ಸಾಹಿತ್ಯ ಪ್ರಶಸ್ತಿ ಪಡೆದ ನಗೀಬ್ ಮಹಫುಜ್ ಮೂರನೇ ಜಗತ್ತಿನ ಭಾಷೆಯೊಂದರಲ್ಲಿ ಬರೆಯುವ ಲೇಖಕನಾಗಿದ್ದರೂ, ಮೂರನೇ ಜಗತ್ತಿನ ಸಾಹಿತ್ಯ ಪ್ರಪಂಚದಲ್ಲಿ ಇನ್ನೂ ಅಪರಿಚಿತರಾಗೇ ಉಳಿದಿದ್ದಾರೆ. ಬಹುಶಃ ಇದಕ್ಕೆ ಕಾರಣ ಅವರು ಮೂರನೇ ಜಗತ್ತಿನ ಭಾಷೆಯೊಂದರಲ್ಲಿ ಬರೆಯುತ್ತಿರುವುದೇ ಆಗಿರಬಹುದು. ಅದೇನೇ ಇರಲಿ, ನಗೀಬರಿಗೆ ನೋಬೆಲ್ ಪ್ರಶಸ್ತಿ ಬಂದಾಗ ಸ್ವತಃ ಅವರ ದೇಶದಲ್ಲೇ ಅವರ ಸಾಹಿತ್ಯದ ಬಗ್ಗೆ ಉಂಟಾದ ವಾದ ವಿವಾದಗಳು ಮತೀಯ ಮೂಲಭೂತವಾದದ ಹುಣ್ಣು ಮೂರನೇ ಜಗತ್ತಿನ ಸಾಹಿತ್ಯ ಸಂಸ್ಕೃತಿಯ ·ಬೇರುಗಳನ್ನು ತಿಂದುಹಾಕಲು ಹೇಗೆ ಸನ್ನದ್ಧವಾಗುತ್ತಿವೆ ಎಂಬುದರ ಬಗ್ಗೆ ಬೆಳಕು ಚೆಲ್ಲುವಂತಿವೆ. ಈ ಹಿನ್ನೆಲೆಯಲ್ಲಿ ನಗೀಬರ ವ್ಯಕ್ತಿಚಿತ್ರ. ಸಾಹಿತ್ಯದ ನೆಲೆಗಳು ಹಾಗೂ ಒಲವುಗಳನ್ನು ಪರಿಚಯಿಸುವ ಇಂಗ್ಲಿಷ್ ಲೇಖನವೊಂದರ ಕನ್ನಡ ರೂಪಾಂತರವನ್ನು ಇಲ್ಲಿ ಕೊಡುತ್ತಿದ್ದೇವೆ. –ಸಂ.]

ನಗೀಬ್ ಮಹಫುಜ್‌ಗೆ 1989ರ ಸಾಹಿತ್ಯಕ್ಕಾಗಿನ **ನೋಬೆಲ್** ಪ್ರಶಸ್ತಿ ಬಂದಿದೆ ಎನ್ನುವ ಸುದ್ದಿ ಇಜಿಪ್ಶಿಯನ್ನರಿಗೆ ಜಾಗತಿಕ ಫುಟ್‌ಬಾಲ್ ಪಂದ್ಯಗಳಲ್ಲಿ ಚಾಂಪಿಯನ್‌ಶಿಪ್ ದೊರೆತಷ್ಟು ಸಂಭ್ರಮವನ್ನುಂಟುಮಾಡಿತು. ಮೂಲಭೂತವಾದಿಗಳು ದುರುದ್ದೇಶದ ಮಾತುಗಳನ್ನಾಡಿದರೂ, ಕೈರೋದ ಉಳಿದೆಲ್ಲರೂ ಈ ಸುದ್ದಿ ಕೇಳಿ ಸಂತೋಷದಿಂದ ಬೀಗಿದರು. ತಿಂಗಳುಗಳು ಕಳೆದ ನಂತರ ಕೂಡ ಇಜಿಪ್ಶಿಯನ್ನರಲ್ಲಿ ಆ ಸಂತೋಷ ತುಂಬಿಕೊಂಡೇ ಉಳಿದಿದೆ. ಇಂಥ ಒಳ್ಳೆಯ ಸುದ್ದಿ ಮಹಫುಜ್‌ನನ್ನು ಹೇಗೆ ತಲುಪಿತು ಎಂದು ಜನ ಕಥೆಕಟ್ಟಿ ಮಾತಾಡಿಕೊಳ್ಳುತ್ತಾರೆ. ಸ್ವೀಡನ್ನಿನ ಅಧಿಕಾರ ವರ್ಗದವರು ಕೈರೋದ ಅಧಿಕಾರಿಗಳೊಂದಿಗೆ ಫೋನಿನಲ್ಲಿ ಮಾತಾಡಿದರಂತೆ,... ಕಮಿಟಿಯವರು ಫೋನಿನ ಮೂಲಕ ನಗೀಬ್‌ನನ್ನು ಸಂಪರ್ಕಿಸುವ ಮೊದಲೇ ಫೋನಿನ ತಂತಿಗಳಲ್ಲಿಂದ ಸುದ್ದಿ ಸೋರಿ ಗುಟ್ಟು ರಟ್ಟಾಯಿತಂತೆ....ನಗೀಬ್ ಮಲಗಿದ್ದನಂತೆ ಮಧ್ಯಾಹ್ನದ ಊಟಮಾಡಿ....ಅಲ್ಲವಂತೆ.... ಅದಾಗ ಇನ್ನೂ

ಮುಂಜಾವದ ಕತ್ತಲಂತೆ.... ನಗೀಬ್ ಇನ್ನೂ ಎಚ್ಚರವಾಗಿರಲಿಲ್ಲವಂತೆ... ಅವನ ಹೆಂಡತಿ ಏನೋ ಸಾಮಾನ್ಯ ಸುದ್ದಿ ಹೇಳುವವಳಂತೆ ನಗೀಬನನ್ನು ಯಾರೋ ಅಭಿನಂದಿಸಬಯಸುತ್ತಾರೆ ಎಂದು ಹೇಳಿದಳಂತೆ... ಊಹೂಂ.... ಹಾಗಲ್ಲವಂತೆ.... ಅವಳೇ ಅಭಿನಂದಿಸಲು ಎಬ್ಬಿಸಿದಳಂತೆ ಹೀಗೆ ... ಕಥೆಗಳು.

ಇಂಥ ಕಥೆಗಳು ಪ್ರತಿಯೊಬ್ಬನ ನಾಲಗೆಯ ಮೇಲಿದ್ದವು. ರಾಷ್ಟ್ರೀಯ-ಸಾಮುದಾಯಿಕ ಖುಷಿಯನ್ನು, ಹೆಮ್ಮೆಯನ್ನು ಹೇಳುವ ಕಥೆಗಳಿವು. ಮಹಫುಜ್‌ನ ಓದುಗರು ಸಾಕಷ್ಟು ಜನ. ಇಷ್ಟರ ಮೇಲೆ ಅವನು ಸ್ವಲ್ಪ ಚಕ್ರಂ ಆದರೂ ಎಲ್ಲರೂ ಒಪ್ಪಿಕೊಂಡ ಅಂಕಲ್. ನಮ್ರ, ದೊಡ್ಡ ಮನಸ್ಸಿನ ದಯಾಳು ವ್ಯಕ್ತಿ.... ನಗೀಬ್ ಸರ್ಕಾರೀ ಸೇವೆಯಲ್ಲಿ ಮೂವತ್ತಕ್ಕೂ ಹೆಚ್ಚು ವರ್ಷಕಾಲ ದುಡಿದವನು.

ಸಾಹಿತ್ಯಕ್ಕಾಗಿನ ನೋಬೆಲ್ ಬಹುಮಾನ ಅರಬ್ಬೀ ಲೇಖಕನೊಬ್ಬನಿಗೆ ಬರಲಿದೆ ಎನ್ನುವ ಗುಸುಗುಸು ಆಗಾಗಲೇ ಅರಬ್ಬೀ ದೇಶಗಳಲ್ಲೆಲ್ಲ ಹಬ್ಬಿತ್ತು. ಕೆಲವು ದೇಶಗಳು ತಮ್ಮ ಲೇಖಕನಿಗೇ ಅದು ಬರಬೇಕು ಎನ್ನುವ ಭಾವನೆಯಲ್ಲಿದ್ದರೂ ಇಂಥ ದೇಶಗಳ ಜನರೂ ಸೇರಿ, ಒಟ್ಟು ಅರಬ್ ಪ್ರಪಂಚ ನಗೀಬನಿಗೆ ಸಂದ ಬಹುಮಾನಕ್ಕಾಗಿ ಅಪಾರ ಖುಷಿಪಟ್ಟರು. ಅವರೆಲ್ಲರೂ ನಗೀಬನಿಗೆ ಸಂದ ಪ್ರಶಸ್ತಿ ಜಾಗತಿಕ ಮಟ್ಟದಲ್ಲಿ ಅರೇಬಿಕ್ ಸಾಹಿತ್ಯಕ್ಕೆ ದೊರೆತ ಗೌರವ ಎಂದು ಭಾವಿಸಿದರು. ಅರೇಬಿಕ್ ಸಾಹಿತ್ಯವನ್ನು ಗುರುತಿಸುವ ಕೆಲಸ ತುಂಬ ತಡವಾಯಿತೆನ್ನುವ ಭಾವನೆ ಅವರಲ್ಲಿದ್ದರೂ ಈಗ ಅದನ್ನು ಮರೆತು ಸಂತೋಷದಿಂದ ನಗೀಬನಿಗೆ ದೊರೆತ ಗೌರವವನ್ನು ಸ್ವಾಗತಿಸಿದರು, ಹೆಮ್ಮೆಪಟ್ಟುಕೊಂಡರು.

ಇಂಥ ಉತ್ತೇಜಿತ ಸಂದರ್ಭದಲ್ಲಿ ಯಾವನಾದರೂ ಅಭಿಪ್ರಾಯ ಸಂಗ್ರಾಹಕನು ಅರಬ್ ಜಗತ್ತಿನ ಆಯ್ದ ಓದುಗರಿಗೆ ಈ ಎರಡು ಪ್ರಶ್ನೆ ಕೇಳಿದ್ದರೆ ಎನ್ನುವ ಕುತೂಹಲ ಉಂಟಾಗುತ್ತದೆ. ಈ ಪ್ರಶ್ನೆಗಳು ಯಾವುವೆಂದರೆ-ಮೊದಲನೆಯದು-ಅರಬ್ಬೀ ಭಾಷೆಯಲ್ಲಿ ಬರೆಯುತ್ತಿರುವವರಲ್ಲಿ, ನಗೀಬ್‌ನು ಅತ್ಯಂತ ಹೆಚ್ಚಿನ ಆಸಕ್ತಿ ಮೂಡಿಸುವ, ಹೊಸ ಹೊಸ ಕಾಣ್ಕೆಗಳುಳ್ಳ-ಕಲ್ಪನಾ ಶಕ್ತಿಯುಳ್ಳ ಲೇಖಕನೆನ್ನುತ್ತೀರಾ ? ಮತ್ತು ಎರಡನೆಯದು-ನೋಬೆಲ್ ಬಹುಮಾನ ಗಳಿಸಲು ಇಂದಿನ ಅರಬ್ಬೀ ಲೇಖಕರಲ್ಲಿ ಅತಿ ಹೆಚ್ಚಿನ ಅರ್ಹತೆಗಳನ್ನು ಹೊಂದಿದವನು ನಗೀಬ್ ಎಂದು ನಿಮಗೆ ಅನಿಸುತ್ತದೆಯೆ ? ನನಗನ್ನಿಸುವಂತೆ ಮೊದಲ ಪ್ರಶ್ನೆಗೆ ಹೆಚ್ಚಿನ ಓದುಗರು 'ಅಲ್ಲ' ಎನ್ನುವ ಉತ್ತರ ಕೊಡಬಹುದಾದರೆ ಎರಡನೆಯ ಪ್ರಶ್ನೆಗೆ 'ಹೌದು' ಎನ್ನುವ ಉತ್ತರ ದೊರೆಯುತ್ತದೆ.

ಈ ಎರಡು ಪ್ರಶ್ನೆಗಳ ಇಲ್ಲ-ಹೌದು ಉತ್ತರಗಳ ನಡುವಿನ ವ್ಯತ್ಯಾಸದಲ್ಲಿ ನೋಬೆಲ್ ಬಹುಮಾನ ನಿಂತಿದೆ ಮತ್ತು ಈ ಬಹುಮಾನದ ಪ್ರಭಾವ ಇಜಿಪ್ತ, ಇಂಡಿಯಾಗಳಂತಹ ದೇಶಗಳಲ್ಲಿ ಅದ್ಭುತವಾದದ್ದಾಗಿದೆ. ಒಮ್ಮೆ, ಮೇ ತಿಂಗಳಿನ ಸುಡುವ ಬಿಸಿಲಿನಲ್ಲಿ ಕಿಕ್ಕಿರಿದು-ತುಂಬಿದ ಟ್ರಾಫಿಕ್‌ಜಾಮ್‌ನಿಂದ ನಿಂತು ಹೋದ ಬಸ್ಸಿನೊಳಗಡೆ ಸಿಕ್ಕಿಹಾಕಿಕೊಂಡಾಗ ಅಚಾನಕವಾಗಿ ನಾನು ಒಂದು ಸಾಹಿತ್ಯಕ ಚರ್ಚೆ ಕೇಳಿಸಿಕೊಂಡೆ. ಇಡೀ ದಿನದ ದುಡಿತದಿಂದ ದಣಿದುಹೋದ, ಬೆವರಿನಿಂದ ತೊಯ್ದ ಮನುಷ್ಯನೊಬ್ಬ ಮೇಲ್ಗಡೆಯ ಕಬ್ಬಿಣದ ಸಳಿಯನ್ನು ಹಿಡಿದುಕೊಳ್ಳಲು ಸಫಲನಾಗದೇ, ಕೈಜಾರಿ ಕೈಯಲ್ಲಿನ ಬ್ರೀಫ್‌ಕೇಸನ್ನು ಕಾಲ್ಬೆರಳುಗಳ ಮೇಲೆ ಎತ್ತಿಹಾಕಿಕೊಂಡ.... ಅವನ ತಾಳ್ಮೆಯ ಅಣೆಕಟ್ಟು ಒಡೆದಂತಾಯಿತು.... ಅವನು ಸಾರಿಗೆ ವ್ಯವಸ್ಥೆಯನ್ನು ದನಿ ಎತ್ತಿ ಬಯ್ಯತೊಡಗಿದ.... ರಸ್ತೆಗಳ ಬಗ್ಗೆ.... 'ನೋಡಿ ನಾನು ಮನೆಗೆ ಬೇಗನೇ ಹೋಗಿ ನನ್ನ ಮಗನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕು. ಆದರೆ.... ಪ್ರತಿದಿನ ತಡವಾಗುತ್ತಿದೆ'.... ಅವನ ವಟವಟ ನಡೆದಿರಬೇಕಾದರೆ ಪಕ್ಕದವನೊಬ್ಬ ಒಮ್ಮೆಲೇ ಅವನಿಗೆ-'ಅದೇಕೆ ಹಾಗೆನ್ನುತ್ತೀರಿ....? ಸಾಹಿತ್ಯದ ನೋಬೆಲ್ ಬಹುಮಾನವನ್ನು ರವೀಂದ್ರನಾಥ ಠಾಗೋರರು ಪಡೆದರಲ್ಲ-ಅವರು ಇದೇ ಕಲ್ಕತ್ತೆಯವರಲ್ಲವೇ?'....ಇದೇ ಕ್ಷಣದಲ್ಲಿ, ಅಲ್ಲಿ ದೂರದ ಈಜಿಪ್ತಿನ, ಕೈರೋದ ತಹ್ರೀರ್ ಅಥವಾ ಶೂಬ್ರಾ ಅಥವಾ ಇನ್ನಾವುದೋ ಜನದಟ್ಟಣೆಯ ಭಾಗದ ರಸ್ತೆಯಲ್ಲಿ ಟ್ರಾಫಿಕ್ಕಿನ ದಟ್ಟಣೆಗೆ ಸಿಕ್ಕಿ ನಿಂತು ಹೋದ ವಾಹನದಲ್ಲಿ ಸಿಕ್ಕಿಹಾಕಿಕೊಂಡ ಯಾರಾದರೂ ಒಬ್ಬರು ಖಂಡಿತವಾಗಿ ನಗೀಬ್‌ನ ಬಗ್ಗೆ ಹೀಗೇ ಮಾತಾಡುತ್ತಿರುತ್ತಾರಲ್ಲವೆ ? ಇದೀಗ ನೋಡಿ ಹೇಗೆಕೈರೋ ಮತ್ತು ಕಲ್ಕತ್ತೆಗಳ ಸಾರಿಗೆ ವ್ಯವಸ್ಥೆಗಳು ಸ್ಟ್ಯಾಕ್ ಹೋಮಿನ ನಿಯಂತ್ರಣದಲ್ಲಿವೆ ?

ಇಂಥ ಪ್ರಭಾವಶಾಲಿಯಾದ ಬಹುಮಾನ ನೀಡುವಾಗ, ಪುಸ್ತಕಗಳ ಮೌಲ್ಯ ನಿರ್ಣಯದ ಸಾಮಾನ್ಯ ನಿಯಮಗಳನ್ನು ಅನುಸರಿಸಲಾಗುವುದಿಲ್ಲ. ಇಲ್ಲಿ ಯಾವುದು ಮುಖ್ಯವಾಗುತ್ತದೆಂದರೆ, ಲೇಖಕನ ಕೃತಿ ಪಾರಮಾರ್ಥಿಕ ನೆಲೆ ಹೊಂದಿರುವಂಥದ್ದಾಗಿರಬೇಕು, ಅದು ಮಹಾನ್ ಕೃತಿಯಾಗಿರಬೇಕು....ಗಂಭೀರವಾದುದಾಗಿರಬೇಕು. ಮತ್ತು ಇದಲ್ಲದೆ ಆ ಕೃತಿಯು ಜಾಗತಿಕ ಸಾಹಿತ್ಯ ಪರಂಪರೆಯ ಭಾಗ ಎನ್ನಿಸುವಂಥದ್ದಾಗಿರಬೇಕು. ಮಹಫೂಜ್‌ನ ಕೃತಿ ಈ ಎಲ್ಲ ಅಂಶಗಳಲ್ಲಿ ಗೆದ್ದಿದ್ದರೆ ಅದು ಡೆಕಾಥ್ಲೀಟ್‌ನೊಬ್ಬನು ಎಲ್ಲ ಹತ್ತು ರೀತಿಯ ಪಂದ್ಯಗಳಲ್ಲಿ ನಿಧಾನವಾಗಿ ಅಂಕಗಳನ್ನು ಗಳಿಸುವ ರೀತಿಯದೇ ಹೊರತು ಯಾವುದೋ ಒಂದರಲ್ಲಿ ಅತಿ ಪ್ರತಿಭೆಯನ್ನು ಪ್ರದರ್ಶಿಸಿ ಗಳಿಸುವ ಗೆಲುವಿನ ರೀತಿಯದಲ್ಲ. ಮಹಫೂಜ್‌ನು ಇದುವರೆಗೆ

ಮುವ್ವತ್ತೈದು ಕಾದಂಬರಿಗಳನ್ನು, ಹನ್ನೆರಡು ಕಥೆಗಳ ಸಂಕಲನಗಳನ್ನು ಮತ್ತು ಅನೇಕ ನಾಟಕಗಳು ಮತ್ತು ಚಲನಚಿತ್ರ ಸಂಭಾಷಣೆಗಳನ್ನು ಬರೆದಿದ್ದಾನೆ. ಮಹಫುಜ್‌ನಿಗೆ ತತ್ವಶಾಸ್ತ್ರ ಮತ್ತು ಫ್ರೆಂಚ್ ಸಾಹಿತ್ಯದ ಆಳವಾದ ಓದಿನ ಹಿನ್ನೆಲೆ ಇದೆ. ಅಲ್ಲದೆ ಅರೇಬಿಕ್ ಸಾಹಿತ್ಯದಲ್ಲಿ ಅಸಂಗತವಾದ ಮತ್ತು ಪ್ರಜ್ಞಾಪ್ರವಾಹ ತಂತ್ರಗಳನ್ನು ಅಳವಡಿಸಿದ ಮೊದಲಿಗನೆನ್ನುವ ಹಿರಿಮೆ ನಗೀಬನದು. ನಗೀಬನ ಪ್ರತ್ಯೇಕ ಕೃತಿಗಳ ಬಗ್ಗೆ ಯಾರದಾದರೂ ಏನಾದರೂ ಅಭಿಪ್ರಾಯವಿರಬಹುದು. ಆದರೆ ಆಧುನಿಕ ಅರಬ್ಬೀ ಸಾಹಿತ್ಯಕ್ಕೆ ನಗೀಬನು ನೀಡಿದ ಘನಿಷ್ಟವಾದ ಕೊಡುಗೆಯ ಬಗ್ಗೆ ಯಾರದೂ ಎರಡು ಅಭಿಪ್ರಾಯಗಳಿರಲು ಸಾಧ್ಯವಿಲ್ಲ. ಆದ್ದರಿಂದಲೇ ಅರಬ್ಬೀ ಪ್ರಪಂಚವೆಲ್ಲ ನಗೀಬನಿಗೆ ದೊರೆತ ಗೌರವದಿಂದ ಸಂಭ್ರಮಪಟ್ಟದ್ದು.

ಅಮೆರಿಕದಲ್ಲಿ ಮಹಫುಜ್‌ನಿಗೆ ಇನ್ನೊಂದು ರೀತಿಯ ಒಪ್ಪಿಗೆ ದೊರೆಯಿತು. ನ್ಯೂಯಾರ್ಕ್ ಟೈಮ್ಸ್‌ನ ಮೊದಲ ಪುಟದಲ್ಲಿ ಬಂದ ನಗೀಬ್‌ನ ನೋಬೆಲ್ ಪ್ರೈಜ್‌ನ 'ಕಥೆ'ಯ ಎರಡನೇ ಪ್ಯಾರಾದಲ್ಲಿ ಏನು ಉಲ್ಲೇಖವಿತ್ತೆಂದರೆ-ಇಸ್ರೇಲಿಗಳಿಗೆ ನಗೀಬ್‌ನ ರಾಜಕೀಯ ನಿಲುವುಗಳು ಪೂರ್ಣವಾಗಿ ಒಪ್ಪಿತವಾಗುತ್ತವೆ ಎನ್ನುವುದು. ಆದರೆ ಇಷ್ಟೆಲ್ಲದರ ನಡುವೆ, ನಗೀಬ್‌ನ ಕೃತಿಗಳು, ಅವನ ಕಾಳಜಿಗಳು ಮತ್ತು ಅವನ ವಸ್ತು ಇವೆಲ್ಲವುಗಳ ಬಗ್ಗೆ ಹೆಚ್ಚಿನ ಮಹತ್ವ ದೊರೆಯದೇ ಅವನ ಬಗೆಗಿನ ಕಥೆಗಳಿಗೇ ಹೆಚ್ಚಿನ ಮಹತ್ವ ದೊರೆತಂತಾಗಿದೆ.

O

ಮಹಫುಜ್‌ನ ಜನನ ಕೈರೋದಲ್ಲಿ-1911ರಲ್ಲಿ. ಇವನ ತಂದೆ ಸರ್ಕಾರದ ಒಂದು ಸಣ್ಣ ಚಾಕರಿಯಲ್ಲಿದ್ದ. ಹಳೆಯ ಪಟ್ಟಣದ ಹೃದಯದಲ್ಲಿ ಮಹಫುಜ್ ಬೆಳೆದದ್ದು. ಜನನಿಬಿಡವಾದ ಈ ಭಾಗ ಪುರಾತನವಾದ ಅಲ್-ಅಝರ್ ವಿಶ್ವ ವಿದ್ಯಾಲಯ ಮತ್ತು ಪೈಗಂಬರರ ಮೊಮ್ಮಗ ಸಯೀದ್ ಹುಸೇನ್‌ನ ಭವ್ಯಸಮಾಧಿ ಯಾಚೆಗೆ ಚಾಚಿಕೊಂಡಿತ್ತು. ನಗೀಬ್‌ನ ಬಾಲ್ಯಕಾಲದಲ್ಲಿ ಈ ಭಾಗದಲ್ಲಿ ಅಲ್ಪ ಆದಾಯದ ಮರ್ಯಾದಸ್ತ ಕುಟುಂಬಗಳು ವಾಸಿಸುತ್ತಿದ್ದವು. ಅವರೆಲ್ಲ ತಮ್ಮ ಸಣ್ಣಪುಟ್ಟ ಅಂಗಡಿ-ವ್ಯವಹಾರಗಳಿಂದ ದೊರೆಯುವ ಅಲ್ಪ ಆದಾಯದಿಂದ ಬದುಕಲು ಕಷ್ಟಪಡುತ್ತ ತಮ್ಮ ಮಕ್ಕಳನ್ನು ಒಳ್ಳೆಯ ಶಾಲೆಗಳಿಗೆ ಸೇರಿಸಲು ಧಡಪಡಿಸುವವರಾಗಿದ್ದರು. ಧೂಳು ತುಂಬಿದ ಕಿಟಕಿಗಳ ಮೂಲಕ ಹರಿಯುತ್ತಿದ್ದ ಅವರ ನೋಟಗಳಿಗೆ ಮಧ್ಯಯುಗದ ಮಸೀದಿಗಳು ಮತ್ತು ಆಸ್ಪತ್ರೆಗಳು-ಧಾರ್ಮಿಕ ಶಾಲೆಗಳು ಕಾಣುತ್ತಿದ್ದವು. ಸುತ್ತಲಿನ ಜಗತ್ತನ್ನು ಮಹಫುಜ್ ತನ್ನದಾಗಿಸಿಕೊಂಡ. ಈ ಜಗತ್ತು ಕೈರೋದ ಸಣ್ಣಪುಟ್ಟ ನೌಕರಿಗಳಲ್ಲಿರುವ ಜನತೆಯದು....ತಮ್ಮ ಅಲ್ಪ

ಸಂಬಳಗಳಲ್ಲಿ ಮನೆಯ ಖರ್ಚುವೆಚ್ಚಗಳನ್ನು ಸರಿತೂಗಿಸಲು ಸದಾ ಹೆಣಗುತ್ತಿರುವವರು.... ಹೇಗಾದರೂ ಮಾಡಿ ಸರ್ಕಾರೀ ಚಾಕರಿಯ ಏಣಿಯ ತಮಗಿಂತ ಮೇಲಿನ ಮೆಟ್ಟಲಿಗೆ ತಮ್ಮ ಮಕ್ಕಳನ್ನು ನೂಕಲು ಪ್ರಯತ್ನಿಸುತ್ತಿರುವವರದು. ವ್ಯಾಪಾರಸ್ಥರ ಮತ್ತು ಹೋಟೆಲ್ಲು ಮಾಲೀಕರ ಧಾಡಸೀತನದ, ತೋರುಗಾಣಿಕೆಯ ನಡಾವಳಿಕೆಗಳ ಎದುರು ಈ ಜನತೆ ತಮ್ಮ ಅಮಾಯಕ ವ್ಯಕ್ತಿತ್ವವನ್ನು ಉಳಿಸಿಕೊಂಡು ಬಂದವರು. ಇಲ್ಲಿಂದ ಇವರು ಬೇರೆಲ್ಲಿಗೇ ಹೋಗಲಿ ಅವರ ಆಸೆ ಆಕಾಂಕ್ಷೆಗಳು ಕಾಳಜಿಗಳು ಮಾತ್ರ ಅವೇ ಆಗಿರುತ್ತವೆ. ಈ ಭಾಗದಿಂದ ಬೇರೆಕಡೆಗೆ ಹೋದ ಮಹಫುಜ್‌ನ ಕುಟುಂಬಕ್ಕೂ ಈ ಮಾತು ಅನ್ವಯಿಸುತ್ತದೆ.

ಆಧುನಿಕ ಇಜಿಪ್ತಿನ ವೈವಿಧ್ಯತೆ, ತುಮುಲಗಳ ಜನಾಂಗದಲ್ಲಿ ಈ ಅತ್ಯಂತ ಸಣ್ಣ ಗುಂಪು ಮಹಫುಜ್‌ನ ಮನೋಭೂಮಿಕೆಯನ್ನು ಆಕ್ರಮಿಸಿಕೊಂಡು ಬಿಟ್ಟಿರುವುದನ್ನು ಕಾಣುತ್ತೇವೆ. ಮಹಫುಜ್‌ನಿಗಿಂತ ಹಿಂದಿನ ಮತ್ತು ಅವನ ಸಮಕಾಲೀನ ಅನೇಕ ಶ್ರೇಷ್ಠ ಬರಹಗಾರರಲ್ಲಿ ಮೂಡಿಬಂದಿರುವ ಇಜಿಪ್ತಿನ ಹಳ್ಳಿಗಾಡಿನ ಭಾಗದ ಜೀವನ ಮಹಫುಜ್‌ನ ಬರಹದಲ್ಲಿ ಒಂದಿಷ್ಟೂ ಕಾಣುವುದಿಲ್ಲ. ಇದು ಎಷ್ಟರ ಮಟ್ಟಿಗೆಂದರೆ– ಅದು ನಮಗೆ ಅನೇಕ ಸಲ ಕೃತ್ರಿಮವೆಂದು ಕೂಡ ತೋರಬಹುದು. ಸಾಮಾನ್ಯ ವಾಸ್ತವದಲ್ಲಿ ಪಟ್ಟಣ ಪ್ರದೇಶದ ಜನಕ್ಕೆ ಸಹಜವಾಗಿ ಹಳ್ಳಿಗಾಡಿನ ಸ್ನೇಹಿತನೋ, ಸಂಬಂಧಿಯೋ ಇದ್ದೇ ಇರುತ್ತಾನೆ. ಆದರೆ ಮಹಫುಜ್‌ನ ಪಾತ್ರಗಳಿಗೆ ಹಳ್ಳಿಗಾಡಿನ ಒಬ್ಬ ಕೂಡ ಸ್ನೇಹಿತ, ಸಂಬಂಧಿಯೋ ಇದ್ದೇ ಇರುವುದೇ ಇಲ್ಲ.. ಹೀಗಾಗಿ, ನಗೀಬನದೇ ಆದ ಒಂದು ಇಜಿಪ್ತಿನ ಪುಟ್ಟಪ್ರಪಂಚ ಇದು ಎಂದು ಹೇಳಬೇಕಾಗುತ್ತದೆ. ಆದರೆ, ಸಾಂಜಕುಲತ್ ಜನ (ಪ್ಯಾರೀಸಿನ ರಿಪಬ್ಲಿಕ್‌ನರು) ಮಿಡಿ ಹಳ್ಳಿಗಾಡಿನ ರೈತಾಪಿವರ್ಗದ ಜನಕ್ಕಿಂತ ಸ್ವಲ್ಪ ಹೆಚ್ಚು ವ್ಯಕ್ತಿತ್ವ ಹೊಂದಿದವರಾಗಿರುತ್ತಾರೆ ಎನ್ನುವ ಅರ್ಥದಲ್ಲಿ ಮಹಫುಜ್‌ನ ಬಗ್ಗೆ ಇಂಥ ಮಾತು ಹೇಳಬಹುದೆಂದು ತೋರುತ್ತದೆ.

ಕುತೂಹಲದ ಅಂಶವೆಂದರೆ ಮಹಫುಜ್‌ನ ತನ್ನ ಪಾತ್ರಗಳ ಪ್ರಪಂಚವನ್ನು ಅತ್ಯಂತ ರಹಸ್ಯವಾದ, ಸುಲಭವಾಗಿ ಬದಲಾಗದ ಮಾರ್ಗದ ಮೂಲಕ ಅಂದರೆ ಅವುಗಳ ಕೌಟುಂಬಿಕ ಪರಿಸರದ ಮೂಲಕ ಪ್ರವೇಶಿಸುತ್ತಾನೆ. ಹಾಗೆ ನೋಡಿದರೆ ಈ ಕೌಟುಂಬಿಕ ಕ್ಷೇತ್ರವಿಟ್ಟುಕೊಂಡು ಮಹಫುಜ್‌ನಂತೆ ಅನೇಕರು ಅನೇಕ ಕಾದಂಬರಿಗಳನ್ನು ಬರೆದಿದ್ದಾರೆ. ಕುಟುಂಬಗಳ ಇತಿಹಾಸ, ಅವುಗಳಲ್ಲಿನ ಕೊನೆಯಿಲ್ಲದ ಜನನ ಚಕ್ರ–ಸಫಲ–ವಿಫಲ ಮದುವೆಗಳು–ಕಾಯಿಲೆ, ಸಾವುಗಳು....ಏನೇನೆಲ್ಲ ಬಂದಿವೆ. ಆದರೆ ಮಹಫುಜ್‌ನ ರೀತಿಯಲ್ಲಿ ಅದಕ್ಕೆ ಬೇರೆಯದೇ ಆಯಾಮ ಒದಗುತ್ತದೆ.

ಸನಾತನ ಪರಂಪರೆಗೆ ಕಟ್ಟು ಬಿದ್ದ ದೇಶಗಳಲ್ಲಿದ್ದಂತೆ ಇಜಿಪ್ತ್ ಮತ್ತು ಅರಬ್ ಪ್ರಪಂಚದಲ್ಲಿ ಕುಟುಂಬವೆನ್ನುವುದು ಅತ್ಯಂತ ಆಪ್ತವಾದದ್ದು-ರಹಸ್ಯವಾದದ್ದು. ಹೊರಗಿನ ದೃಷ್ಟಿ ಇದನ್ನು ತಲುಪದಂತೆ ಮನೆಯ ಸುತ್ತು ಪ್ರಾಗಾರದ ಗೋಡೆ ಇದೆ ....ಪರದೆಗಳಿವೆ .. ಮುಖಗಳಿಗೆ ಬುರಕಾಗಳಿವೆ ಮತ್ತು ಬಾಯಿ ಬಿಚ್ಚದಂತೆ ಮಾಡುವ ನಿಯಮಾವಳಿಗಳಿವೆ. ಇಂಥಲ್ಲಿ ಈ ಗೋಡೆಗಳನ್ನು. ಬಾಗಿಲುಗಳನ್ನು ದಾಟಿ ಪರದೆಗಳಡಿಯಲ್ಲಿ ಹುಗಿದುಹೋದ ವಿಫಲಗೊಂಡ ಮದುವೆಗಳ ಸಂಬಂಧವನ್ನು-ಬಚ್ಚಿಟ್ಟು ಕೊಂಡ ಅತ್ಯಂತ ರಹಸ್ಯವಾದ ಆಸೆಯನ್ನು ತಲುಪಿ ಅವುಗಳನ್ನು ಈ ಜನರ ಕೌಟುಂಬಿಕ ಪಾವಿತ್ರ್ಯದ, ಸೂಕ್ಷ್ಮವಾದ ನೈತಿಕ ಆವರಣದ ಹೊರಗೆ ಎಳೆಯುವುದೆಂದರೆ-ಅದೂ ಸಾರ್ವಜನಿಕ ಮಾಧ್ಯಮವಾದ ಬರೆಹದ ಬಯಲಿಗೆ ತರುವುದೆಂದರೆ.... ಬಲು ಕಷ್ಟದ ವಿಷಯ. ಒಮ್ಮೆ ಈ ಮಡಿವಂತಿಕೆ ಮೀರಿಯಾದ ಕೂಡಲೇ ಮಹಫುಜನ ಓದುಗರು ಅಪರಾಧದ ಸಂಭ್ರಮದಲ್ಲಿ ತನ್ನ ನೆರೆಮನೆಯವರ ಬಗ್ಗೆ ತಾನು ಯಾವಾಗಲೂ ಹೊಂದಿದ್ದ ಸಂಶಯಗಳಾದ-ಕದ್ದು ಮುಚ್ಚಿ ನಡೆಯುವ ತಡಕಾಟಗಳನ್ನು, ಅತೃಪ್ತಿ, ಆಶಾಭಂಗಗಳನ್ನು ಗುರುತಿಸತೊಡಗುತ್ತಾನೆ. ಜನತೆಯ ಭಯ, ಪೂರ್ವಾಗ್ರಹಗಳು ಮತ್ತು ಸಂಶಯಗಳನ್ನು ಕಂಡುಕೊಳ್ಳುವ ಅಂತಃಸ್ಫೂರ್ತಿ ಮಹಫುಜನಿಗಿದೆ. ಅವನು ಅವರ ಈ ಗುಣಗಳನ್ನು ತೆಗೆದುಕೊಂಡು ತಯಾರಿಸುವ ಕಥಾನಕದ ಅಡುಗೆಯನ್ನು ಅವರಿಗೇ ಉಣಬಡಿಸುತ್ತಾನೆ. ಇದು ನಗೀಬನ ವೈಶಿಷ್ಟ್ಯವಾಗಿದೆ.

ನಗೀಬನ ಕೈಯಲ್ಲಿ ಈ ಜನರ ಕೌಟುಂಬಿಕ ಒಳಸುಳಿಗಳು ತಮ್ಮಷ್ಟಕ್ಕೆ ತಾವೇ ಸಂವಹನಶೀಲವಾಗುತ್ತ ಕಾದಂಬರಿಗಳಲ್ಲಿ ಇವುಗಳದೇ ಇನ್ನೊಂದು ಭಾಷೆ ಏರ್ಪಡುತ್ತದೆ. ಈ ಭಾಷೆಯ ಮೂಲಕ ನಗೀಬನು ಈ ಜನರ ಮಿತಗೊಂಡ ಜೀವನದ ಅಂಚಿನಲ್ಲಿ ತೂಗುತ್ತಿರುವ ಅಪಾಯವನ್ನು ತೋರಿಸುತ್ತಾನೆ. ಈ ಅಪಾಯವೆಂದರೆ-ತಮ್ಮ ವರ್ತಮಾನಕ್ಕೊಂದು ಅರ್ಥವಂತಿಕೆಯನ್ನು-ಗೌರವವನ್ನು ತಂದುಕೊಡುತ್ತದೆಂದು ಭಾವಿಸಿರುವ ಇನ್ನೊಂದು ಲೋಕದ ಮರೀಚಿಕೆಯ ಕಲ್ಪನೆ. ಇದು ಎಂಥ ಪ್ರಪಂಚವೆಂದರೆ ಸಹೋದರರು ಮರ್ಯಾದಸ್ತ ನೌಕರರ ಜೀವನವನ್ನು ಬದುಕಲೆಂದು ಬಯಸಿ, ಅವರಿಗೆ ಸಹಾಯಮಾಡಲೆಂದು ಸಹೋದರಿಯರು ವೇಶ್ಯೆಯರಾಗುವಂತಹದು, ಕುಡಿತದಲ್ಲಿ ಮುಳುಗಿಹೋದ ತಂದೆ ತನ್ನ ಮಕ್ಕಳನ್ನು ವೇಶ್ಯಾವಾಟಿಕೆಗಳಲ್ಲಿ ಎದುರುಗೊಳ್ಳುವಂತಹದು; ಮಹಾತ್ವಾಕಾಂಕ್ಷೆ ನೀತಿಗಳ ಎಲ್ಲೆಯನ್ನು ಮೀರಿದ್ದು, ಮೇಲಕ್ಕೇರಹೋಗುವ ಯುವಕರು ಅಸಫಲತೆಯ ಸಿಂಬಳದಲ್ಲಿ ಸಿಕ್ಕಿಹಾಕಿಕೊಳ್ಳುವಂಥದು. ಇಲ್ಲಿ-ಅಪರಾತ್ರಿಗಳವರೆಗೆ ಹೊರಗುಳಿಯಲು ಬಿಟ್ಟ ಹುಡುಗರು ದುರ್ವ್ಯಸನಗಳಲ್ಲಿ ಆಳವಾಗಿ ಮುಳುಗಿ ಭೂಗತ ಪ್ರಪಂಚವೊಂದನ್ನು ನಿರ್ಮಿಸುತ್ತಾರೆ.

ಜುಲೈ-ಆಗಸ್ಟ್ ೧೯೮೦/೮೯

ಮಹಫುಜನ ಕೃತಿಗಳಲ್ಲಿ ಬರುವ ಈ ಭೂಗತಪ್ರಪಂಚ ಯಾವಾಗಲೂ ದುರ್ದೆಶೆಯ ಸೂಚನೆಗಳನ್ನು, ಕುರುಹುಗಳನ್ನು ನೀಡುತ್ತ ಬರುತ್ತದೆ....ಇದೊಂದು ಶುದ್ಧ ಭ್ರಮಾಧೀನ ಸ್ಥಿತಿ ...ಕೊಳೆಯುತ್ತಿರುವುವರ–ದುರ್ವಾಸನೆ ಬೀರುವ ಕೊಚ್ಚೆ .. ಇಲ್ಲಿರುವವರು ಕುಡಿಯುತ್ತಾರೆ, ಪ್ರಜ್ಞೆ ಕಳೆದುಹೋಗುವವರೆಗೆ. ಹಶೀಶ್ ಸೇದುತ್ತ ಹಾಡುವ ಹುಡುಗಿಯರಲ್ಲಿ ಇಲ್ಲವೇ ನಾರ್ಕೋಟಿಕ್ಸ್‌ಗಳ ಸಾಗಾಣಿಕೆಯ ಅವ್ಯವಹಾರ ಗಳಲ್ಲಿ ಕಳೆದುಹೋಗಿರುತ್ತಾರವರು....

ನಗೀಬ್ ಇಂಥ ಉಪಕರಣಗಳ ಮೂಲಕ ತನ್ನ ಓದುಗರನ್ನು ಹೇಗಿರಬೇಕಾದ ಪ್ರಪಂಚ ಹೀಗಾಗಿದೆಯಲ್ಲ ಎನ್ನುವ ಅಚ್ಚರಿಯ ಭಾವಕ್ಕೆ ತಂದು ನಿಲ್ಲಿಸುತ್ತಾನೆ. ಓದುಗನು ತನ್ನ ಮನಸ್ಸಿನಲ್ಲಿಟ್ಟುಕೊಂಡ ಪ್ರಪಂಚದ ಬಗೆಗಿನ ಕಲ್ಪನೆಯನ್ನೇ ಇಲ್ಲಿ ಕಾಣುವಂತಾದಾಗ ಈ ಬರಹ ಅವನಿಗೆ ಆಪ್ತವಾಗುತ್ತದೆ. ಒಂದು ಕಡೆ ಬಡತನ ಮತ್ತು ಸಾಮಾಜಿಕ ಅವನತಿಯ ಭಯ ಮತ್ತು ಇನ್ನೊಂದು ಕಡೆಗೆ ಅಧಿಕಾರ ಮತ್ತು ಸಂಪತ್ತುಳ್ಳವರ ದರ್ಪ-ಈ ಎರಡರ ಭಯಾನಕ ವಾಸ್ತವದ ನಡುವೆ-ಸಿಕ್ಕಿಹಾಕಿಕೊಂಡ ಜನರ ಮನಸ್ಸಿನಲ್ಲಿ ಮಹಫುಜ್‌ನ ಕೃತಿಯಲ್ಲಿನ ಪ್ರಪಂಚ ಸಹಜವಾಗಿ ಆಪ್ತವಾಗಿ ಬಿಡುತ್ತದೆ. ಇಂಥ ದುರ್ಧರ ಪರಿಸ್ಥಿತಿ ಇಜಿಪ್ತಿಗೆ ವಿಶಿಷ್ಟವಾದದ್ದೇನೂ ಅಲ್ಲ. ಕಲ್ಕತ್ತಾದ ಇಬ್ಬರು ಪ್ರಮುಖ ಲೇಖಕರು ಮಹಫುಜನ ವಸ್ತು ಮತ್ತು ವಿನ್ಯಾಸ ಗಳನ್ನೇ ಬಳಸುತ್ತಿರುವುದು ನೆನಪಾಗುತ್ತದೆ. ಮಹಫುಜ್ ಈ ಇಬ್ಬರಿಗಿಂತ ತುಂಬ ತುಂಬ ಒಳ್ಳೆಯ ಕಸಬುದಾರನೆನ್ನುವ ಮಾತು ಇದ್ದೇ ಇದೆ. ಇದು ವಿದ್ಯಾವಂತ ಸಂಬಳ ಪಡೆಯುವ ನಗರವಾಸಿಯ ಪ್ರಜ್ಞೆಯಲ್ಲಿ ಮೂಡಿಬಂದಂಥ ಬರಹ. ಇವರ ಸಂದರ್ಭ ಎಂಥದೆಂದರೆ–ಬಡತನದ ವಿಶಾಲವಾದ ಹುದಲು ಮತ್ತು ಶ್ರೀಮಂತಿಕೆಯ ಪುಟ್ಟ ನಿಗೂಢ ಕೂಟಗಳ ನಡುವೆ ಸಿಕ್ಕಿಹಾಕಿಕೊಂಡು, ತಮ್ಮ ಪರಂಪರೆಯಲ್ಲಿ, ಗೌರವಾನ್ವಿತ ಮನೆತನಗಳ ಇತಿಹಾಸದಲ್ಲಿ ಏನಾದರೂ ಬದುಕಿಗೊಂದು ಅರ್ಥದ ಪುಟ್ಟ ಎಳೆ–ಬದುಕಿನ ಸಾಚಾತನದ ಬಗ್ಗೆ ನಂಬುಗೆ ಕಂಡಾವೇನೋ ಎಂದು ತಡಕಾಡು ತ್ತಿರುವಂಥದು. ಆದರೆ ಇದು ಅವರಿಗೆ ಅತ್ಯಂತ ಕ್ರೂರವಾದ ಭ್ರಮನಿರಸನವೆನಿಸಿ ಬಿಡುತ್ತದೆ. ಏಕೆಂದರೆ ಈ ಪೀಳಿಗೆಗಳು–ಮನೆತನಗಳು ಇಜಿಪ್ತಿನ ಇಲ್ಲವೇ ಭಾರತದ ಇಸ್ಲಾಮ್ ಇಲ್ಲವೇ ಹಿಂದೂ ಪರಂಪರೆಗಳೊಂದಿಗೆ ಸಂಬಂಧಪಟ್ಟೇ ಇಲ್ಲ. ಇವರ ಇಂದಿನ ಜೀವನ ವಿಧಾನ ಇಜಿಪ್ತಿನ ಇಲ್ಲವೇ ಭಾರತದ್ದಾಗಿರದೇ ವಿಕ್ಟೋರಿಯನ್ ರೀತಿಯೊಂದಿಗೆ ಸೇರಿಕೊಳ್ಳುವಂಥದ್ದಾಗಿದೆ.

ಭ್ರಷ್ಟಾಚಾರದ ಮೂಲಕ ಅನೈತಿಕ, ಅನರ್ಹ ಜನರ ಶ್ರೀಮಂತಿಕೆ ಬೆಳೆಯುತ್ತ ಹೋಗುವುದನ್ನು ಮತ್ತು ಆದೇ ಸಂದರ್ಭದಲ್ಲಿ ನಮ್ರ, ಸಾತ್ವಿಕ ಜನ ಪ್ರಾಮಾಣಿಕ

ವಾದ ಕೂಲಿ ಪಡೆಯುಲು ಹೆಣಗುವಂಥ ಪರಿಸ್ಥಿತಿಯ ಬಗೆಗಿನ ಅಸಾಧ್ಯ ತಿರಸ್ಕಾರ ಪೂರಿತ ಪ್ರಜ್ಞೆಯಲ್ಲಿ ಮಹಫುಜನ ಕೃತಿಗಳು ಮೂಡಿ ಬಂದಿವೆ. ಇರುವುದೆಲ್ಲದರ ಬಗ್ಗೆ–ಅದು ಹೇಗಿರಬೇಕೋ ಹಾಗೆ ಇಲ್ಲದ್ದರಿಂದ–ಈ ತಿರಸ್ಕಾರ, ಕೋಪ. ಈ ವಿಘಟನೆಯ ಮೂಲಗಳು ಅಲ್ಲೋಲಕಲ್ಲೋಲವುಂಟುಮಾಡುವಷ್ಟು ತೀವ್ರವಾದ ನೈತಿಕ ಕೋಪವನ್ನು ಹುಟ್ಟಿಸುವಷ್ಟು ಆಸಕ್ತಿಯುವಾಗಿಲ್ಲ. ಯಾಕೆಂದರೆ ವಿಘಟನೆಯ ಪಾಪಕೂಪದ ಮುಂದೆ ಅವು ಏನೇನೂ ಅಲ್ಲ.

ಮಹಫುಜ್ ಕೆಲವು ಅರೆಬೆಡಗಿನ ನೀತಿ ಕಥೆಗಳಂತಹ ಕಥಾನಕಗಳನ್ನು ರಚಿಸಿದ್ದಾನೆ. ಆದರೆ ಅವನನ್ನು ಮೂಲಭೂತವಾಗಿ ಧಾರ್ಮಿಕ ಲೇಖಕನೆಂದು ಪರಿಗಣಿಸಲಾಗದು, ಅವನ ಕೃತಿಗಳಲ್ಲಿ ಮತ್ತೆ ಮತ್ತೆ ಉಲ್ಲೇಖಗೊಳ್ಳುವ ಚಿಂತಕ ಅಬುಲ್–ಅಲಾ–ಅಲ್–ಮಾರ್ರೀ ಒಬ್ಬ ಮಧ್ಯಯುಗದ ಅರಬ್ಬೀ ಚಿಂತಕನಾಗಿದ್ದು ಅವನು ಒಬ್ಬ ಮುಕ್ತ ಮತ್ತು ವಾಸ್ತವವಾದೀ ಚಿಂತಕನಾಗಿದ್ದಾನೆ. ಮಹಫುಜ್ ರಾಜಕೀಯ ವ್ಯವಸ್ಥೆ ಕುರಿತು ವ್ಯಂಗ್ಯ ಕಥಾನಕಗಳನ್ನು ರಚಿಸಿದ್ದಾನಾದರೂ ಅವನನ್ನು ಒಬ್ಬ ರಾಜಕೀಯ ಲೇಖಕನೆಂದು ಹೇಳಲಾಗದು. ಒಟ್ಟಿನ ಮೇಲೆ ಅವನ ಕೃತಿಗಳಲ್ಲಿ ರಾಜಕೀಯ ಮತ್ತು ಇತಿಹಾಸಗಳು ಒಂದು ಹಿನ್ನೆಲೆಯನ್ನು ಒದಗಿಸಲು ದುಡಿಯುತ್ತವೆ.

ಮಹಫುಜ್‌ನ ಕೃತಿಗಳಲ್ಲಿ ತಾಯಿಯ ಪಾತ್ರಗಳು ಅಸಾಧ್ಯ ಎನಿಸುವ ಮಟ್ಟಿಗೆ ಸಹನೆಯ ಮೂರ್ತಿಗಳಾಗಿವೆ. ಮನೆಯ ರಕ್ಷಿತ ಆವರಣ ದಾಟಿ ಕೆಲಸ ಮಾಡಲು ಹೊರಗೆ ಹೋಗುವ ಹುಡುಗಿಯರು ಬಹುತೇಕವಾಗಿ ಆಮಿಷಕ್ಕೆ ಬಲಿಯಾಗುತ್ತಾರೆ. ಅಂದರೆ ಮಹಫುಜ್‌ನ ಕೃತಿಗಳು ಹತ್ತೊಂಬತ್ತನೇ ಶತಮಾನದ ಶ್ರೇಷ್ಠ ಸಾಹಿತಿಗಳಾದ ಬಾಲ್ಜಾಕ್, ಟಾಲ್‌ಸ್ಟಾಯ್, ಫ್ಲಾಬರ್ಟ್ ಮುಂತಾದವರ ಕೃತಿಗಳ ಪ್ರಭಾವದಲ್ಲಿ ವಿವರ ಮತ್ತು ರಾಚನಿಕ ಶ್ರೀಮಂತಿಕೆಯನ್ನು ತೋರುತ್ತವೆ. ಆದರೆ ಇವು ಅತ್ಯಂತ ದುಃಖಾರ್ದ್ರಭಾವ ಹುಟ್ಟಿಸುತ್ತವೆನ್ನುವಾಗಲೂ ಅವು ನಿಜವಾದ, ದುರಂತವನ್ನು ಚಿತ್ರಿಸುತ್ತಿರುವುದಿಲ್ಲ. ಯಾಕೆಂದರೆ ಇಲ್ಲಿನ ದುಃಖ ಉಗಮವಾಗುತ್ತಿರುವುದು ಕೇವಲ ಪೀಳಿಗೆಗಳ (ಮನೆತನಗಳ) ಉತ್ತಮಿಕೆ ಭಂಗಗೊಳ್ಳುತ್ತಿರುವುದರಿಂದ. ಆದರೆ ಗೌರವಾನ್ವಿತ ಪರಂಪರೆಗಾಗಿನ ಚಡಪಡಿಕೆಯನ್ನು ಮಹಫುಜ್‌ನಂಥ ಅದ್ಭುತ ಕಥೆಗಾರರಿಗೆ ಕೂಡ ಒಂದು ನಿಜವಾದ ದುರಂತವಾಗಿ ಚಿತ್ರಿಸಲು ಸಾಧ್ಯವಾಗದು.

ಮಹತ್ವದ್ದೆನಿಸದ ಸಣ್ಣ ಪುಟ್ಟ ವಿವರಗಳ ಮೂಲಕ ಕಟ್ಟಲ್ಪಡುವ ಈ ಕೃತಿಗಳು ಈ ಸಮಾಜದ ಬಗೆಗಿನ ಮಹಫುಜ್‌ನ ಸೂಕ್ಷ್ಮವಾದ ಮತ್ತು ವ್ಯಾಪ್ತವಾದ

ಗ್ರಹಿಕೆಯನ್ನು ಹೇಳುತ್ತವೆ. ಅವನ ವಿವರಗಳನ್ನು ಅವನ ಕೃತಿಗಳ ಭಾಷಾಂತರಗಳ ಸಂಪಾದಕರು ಹೇಳಿ ಬಿಡುವ 'ಕೈರೋದ ದರ್ಶನ ಮತ್ತು ವಾಸನೆ' ಎನ್ನುವ ಮಾತು ನಮಗೆ ತಿಳಿಸಲಾರದು. ಅವುಗಳಿಗೆ ಪ್ರತಿಯೊಂದಕ್ಕೂ ಅಡಿ ಟಿಪ್ಪಣಿ ಬೇಕಾಗುತ್ತವೆ. ಹೊರದೇಶದ ಓದುಗರಿಗೆ ಇಜಿಪ್ಟಿನಲ್ಲಿ 'ಸಂಬಳದ ನೌಕರ' ಎನ್ನುವುದರ ನಿಜವಾದ ಅರ್ಥ, ಅಲ್ಲಿನ ಪದವಿ ಪರೀಕ್ಷೆಯ ಮಹತ್ವ, ಅಲ್ಲಿನ ಎಂಟನೆ ಹಂತದ ಕೆಲಸಗಾರರೆಂದರೆ ಏನು ಎಂಬುದು ತಿಳಿಯದೆ ಮಹಫುಜ್‌ನ ಕೃತಿಗಳು ಅರ್ಥವಾಗಲಾರವು. ಇವು ಇಜಿಪ್ಟಿನ ರಹಸ್ಯಗಳು, ಇಜಿಪ್ಟಿನ ವೈಶಿಷ್ಟ್ಯಗಳು.

O

ನೋಬೆಲ್ ಬಹುಮಾನ ಮಹಫುಜನಿಗೆ ಕಷ್ಟಗಳನ್ನು ತಂದಿಕ್ಕಿತು. ಬಹುಮಾನದ ಘೋಷಣೆಯಾಗುತ್ತಿದ್ದಂತೆಯೇ ಅವನಿಗೆ ಮುಸ್ಲಿಂ ಸನಾತನವಾದಿಗಳಿಂದ ಕೊಲೆಯ ಬೆದರಿಕೆಗಳು ಬರತೊಡಗಿದವು. ಇದಕ್ಕೆ ಕಾರಣ ಮಹಫುಜನು 1959ರಲ್ಲಿ ಬರೆದ 'ಗೆಬೆಲಾವಿಯ ಮಕ್ಕಳು' ಎಂಬ ಪುಸ್ತಕವಾಗಿತ್ತು. ಅಲಿಗರಿ ರೀತಿಯ ಈ ಕಾದಂಬರಿಯ ಮೂರು ಮುಖ್ಯ ಪಾತ್ರಗಳು ಮೂವರು ಮಹಂತರುಗಳಾದ ಮೊಸೆಸ್, ಜೀಸಸ್ ಮತ್ತು ಮೊಹಮದ್ ಇವರನ್ನು ಪ್ರತಿನಿಧಿಸುತ್ತವೆಂದು ಹೇಳಲಾಗುತ್ತದೆ. ಮುಸ್ಲಿಂ ಧಾರ್ಮಿಕ ಸಂಸ್ಥೆಯು ಈ ಪುಸ್ತಕವನ್ನು ಇಸ್ಲಾಂ ಧರ್ಮಕ್ಕೆ ವಿರುದ್ಧವಾದದ್ದೆಂದು ಘೋಷಿಸಿದೆ. ಮಹಫುಜ್ ಈ ಎಲ್ಲ ತರಲೆಯಿಂದ ತೀವ್ರ ಮಾನಸಿಕ ಕ್ಷೋಭೆಗೆ ಒಳಗಾದ. ಈ ಪುಸ್ತಕ ಇಜಿಪ್ಟಿನಲ್ಲಿ ಅರಬೀ ಭಾಷೆಯಲ್ಲಿ ಪ್ರಕಟವಾಗಲಿಲ್ಲ ವಷ್ಟೇ ಅಲ್ಲ, ಕೆಲವು ಕಾಲ ಅವನು ಬರೆಯುವುದನ್ನೇ ನಿಲ್ಲಿಸಿದ್ದ. ಮುಂದೆ ಕ್ರಮೇಣ ಮಹಫುಜ್ ಬರೆಯತೊಡಗಿದ. ಈ ಕೊಲೆಯ ಬೆದರಿಕೆಗಳು ಬರುವವರೆಗೆ ಈ ತರಲೆ ಮರೆತೇ ಹೋಗಿತ್ತು. ಆದರೆ ಮಧ್ಯಪೂರ್ವದಲ್ಲಿ 50ರಿಂದ 80ರ ದಶಕಗಳ ನಡುವೆ ಒಂದು ಯುಗವೇ ಕಳೆದುಹೋದಂತಾಗಿದೆ. ಆಗ ಪಂಡಿತರ ಒಂದು ಗುಂಪು ಅಂದು ಆ ಪುಸ್ತಕಕ್ಕೆ ಹಾಕಿದ ಬಹಿಷ್ಕಾರಕ್ಕೂ, ಇಂದು ಇದೀಗ ಕಾಲೇಜುಗಳಿಂದ ಹೊರಬಂದ ಯುವಕರ ಹಿಂಡು ನೀಡುತ್ತಿರುವ ಕೊಲೆಯ ಬೆದರಿಕೆಗೂ ಇರುವ ಅಂತರವನ್ನು ನಾವು ಗಮನಿಸಬೇಕು. ಈ ಅಂತರ ಮಹಫುಜ್‌ನ ಪೀಳಿಗೆಯ ಅವಧಿಯಲ್ಲೇ ಮಧ್ಯಪೂರ್ವ ಎಷ್ಟೊಂದು ಬದಲಾಗಿದೆ ಎನ್ನುವುದನ್ನು ತೋರಿಸುತ್ತದೆ.

ಮಹಫುಜನ ತಾರುಣ್ಯದಲ್ಲಿ ಇಸ್ಲಾಂ ಒಂದು ರಾಜಕೀಯ ಚಿಂತನೆ ಎನ್ನುವಂತೆ ಒಂದು ಪ್ರಮುಖ ವಾಹಿನಿಯಾಗಿರಲಿಲ್ಲ. ಅವನು ಕಾಲೇಜಿಗೆ ಹೋಗುವ ಆ ದಿನಗಳಲ್ಲಿ –ಅಂದರೆ ಇಪ್ಪತ್ತರ ದಶಕದ ಕೊನೆಯ ಮತ್ತು ಮೂವತ್ತರ ದಶಕದ ಆರಂಭದ ಕಾಲದಲ್ಲಿ ಇಜಿಪ್ಟಿನಲ್ಲಿ ರಾಷ್ಟ್ರೀಯತೆಯ ಒಂದು ಚಳುವಳಿ ನಡೆದಿತ್ತು. ಅಂದಿನ ಮುಖ್ಯ ಚಿಂತಕರು ಇಜಿಪ್ಟಿಗಾಗಿ ಇಜಿಪ್ಟಿನದೇ ಆದ ಒಂದು ರಾಷ್ಟ್ರೀಯ ಸಂಸ್ಕೃತಿ

ಯನ್ನು ನಿರ್ಮಿಸುವ ಉದ್ದೇಶದಿಂದ ಪ್ರೇರಿತರಾಗಿದ್ದರು. ಆಗ ಅವರು ಫರೋನ ಮತ್ತು ಹೆಲೆನಿಕ್ ಆದ ಬೇರುಗಳನ್ನು ಅಗೆದು ಅವುಗಳಿಂದ ಇಜಿಪ್ಸಿಯನ್ ಸಂಸ್ಕೃತಿ ಕಟ್ಟಲು ಪ್ರಯತ್ನಿಸುತ್ತಿದ್ದರು. ಆಗ ಅವರ ಚಿಂತನೆ ಒಟ್ಟು ಅರಬ್ಬೀ ಪ್ರಪಂಚ ಅಥವಾ ಇಸ್ಲಾಂ ಜಗತ್ತನ್ನು ಪರಿಗಣಿಸದಂಥದಾಗಿತ್ತು. ಆಗ ಇಜಿಪ್ತಿನಲ್ಲಿ ಏನನ್ನೂ ಯೋಚಿಸಬಹುದಾಗಿತ್ತು. ಯಾವುದೂ ಧರ್ಮದ್ರೋಹವೆಂದು ಪರಿಗಣಿತವಾಗುತ್ತಿದ್ದಿಲ್ಲ. ಅಂಥ ಕಾಲದಲ್ಲಿ ಈ 'ಗೆಬಲಾವಿಯ ಮಕ್ಕಳು' ಕೃತಿ ಬಂದಿದ್ದರೆ ಯಾರೂ ಏನೂ ಅನ್ನುತ್ತಿದ್ದಿರಲಿಲ್ಲ. ಆದರೆ ಈ ಪುಸ್ತಕ ಬಂದದ್ದು 50ರ ದಶಕದ ಕೊನೆಯ ಹಂತದಲ್ಲಿ. ಅಷ್ಟರಲ್ಲಿ ಇಸ್ರೇಲಿನ ಸ್ಥಾಪನೆಯಾದದ್ದರಿಂದ ಮತ್ತು ಇಜಿಪ್ತಿನಲ್ಲಿ ಕ್ರಾಂತಿ ನಡೆದು ಹೋದದ್ದರಿಂದ ಧರ್ಮದ ಸ್ಥಾನ ಸಂಪೂರ್ಣವಾಗಿ ಬದಲಾಗಿತ್ತು. ಇಜಿಪ್ತಿನಲ್ಲಿ ಇಸ್ಲಾಂ ಅತ್ಯಂತ ಚೈತನ್ಯಶೀಲವಾಗಿ ಪ್ರಭಾವಶಾಲಿಯಾಗಿಬಿಟ್ಟಿತ್ತು ಮತ್ತು ಅಲ್ಲಿನ ಧಾರ್ಮಿಕ ಸಂಸ್ಥೆಯು ಈ ಬದಲಾವಣೆಗಳನ್ನು ಎಲ್ಲರಿಗೂ ಸ್ಪಷ್ಟವಾಗಿ ತಿಳಿಸುವ ಬಗ್ಗೆ ದೃಢವಾಗಿತ್ತು. ಅಂಥಲ್ಲಿ ಕೂಡ ಉಲೆಮಾ-ಧಾರ್ಮಿಕ ಸಂಸ್ಥೆ ಯಾವುದೇ ಪುಸ್ತಕವನ್ನು ಬಹಿಷ್ಕರಿಸಬೇಕಾದರೆ ನಿರ್ದಿಷ್ಟ ಮಾರ್ಗವನ್ನು ಅನುಸರಿಸುತ್ತಿತ್ತು. ಆಗ ರಕ್ತಪಾತ ಕೊಲೆಯ ಬೆದರಿಕೆ ಇರುತ್ತಿರಲಿಲ್ಲ. ಅದು ಮೂವತ್ತರ ದಶಕದಲ್ಲಿನ ಚಿಂತನೆಯ ನೆರಳಿನಲ್ಲಿದ್ದವರಿಗೆ ಇಸ್ಲಾಂ ಧರ್ಮದ ನಿಯಮಾವಳಿಗಳಿಗೆ ಬದ್ಧರಾಗಿರಬೇಕೆನ್ನುವ ಸ್ಪಷ್ಟ ಸಂದೇಶ ನೀಡುವಂಥದ್ದಾಗಿರುತ್ತಿತ್ತು.

ಆದರೆ ಇಂದು ಇಸ್ಲಾಂ ತತ್ವದ ಅತ್ಯುನ್ನತ ಚಿಂತಕರನ್ನೂ ಕೂಡ ಹಿಂಸೆಯ ದಳ್ಳುರಿ ಸುತ್ತುವರಿದಿದೆ. ಇಂದು ಇಜಿಪ್ತಿನಲ್ಲಿ ಇಸ್ಲಾಂ ಧರ್ಮದ ಹೆಸರಿನಲ್ಲಿ ಮಾತನಾಡುವ ಯುವಕರೊಂದಿಗೆ ಇವರು ಯಾವ ಸಂಪರ್ಕವನ್ನು ಹೊಂದಲೂ ಸಾಧ್ಯವಾಗುತ್ತಿಲ್ಲ. ಅಷ್ಟೇ ಅಲ್ಲ ಅಲ್-ಅಝರ್ ವಿಶ್ವವಿದ್ಯಾಲಯದ ಇಸ್ಲಾಂ ಧರ್ಮದ ಸುನ್ನಿ ತತ್ವಚಿಂತನೆಯ ಪೀಠದಲ್ಲಿ ಅಧ್ಯಯನ ಮಾಡಿ ಶೇಖ್ ಪದವಿ ಪಡೆದ ಪಂಡಿತರನ್ನೂ ಸೇರಿಸಿ ಎಲ್ಲ ಧಾರ್ಮಿಕ ಚಿಂತಕರನ್ನು ಈ ಯುವಕರು ಧರ್ಮಲಂಡರು ಅಧರ್ಮಿಗಳು ಎಂದು ಘೋಷಿಸಿದ್ದಾರೆ. ಮಹಮದ್ ಅಲ್ ದಹಾಬಿ ಇಂಥ ಒಬ್ಬ ಧಾರ್ಮಿಕ ಪಂಡಿತರಾಗಿದ್ದರು. ಅಲ್ಲದೇ ಅವರು ಇಜಿಪ್ತ ಸರ್ಕಾರದಲ್ಲಿ ಧಾರ್ಮಿಕ ದತ್ತಿ ಇಲಾಖೆಯ ಮಂತ್ರಿಯೂ ಆಗಿದ್ದರು. (ಈ ಇಲಾಖೆಯಲ್ಲಿಯೇ ಮಹಫುಜ್ ಸೇವೆ ಸಲ್ಲಿಸುತ್ತಿದ್ದುದು). 1977ರಲ್ಲಿ ಈ ಪಂಡಿತರನ್ನು ಅಪಹರಿಸಿ ಕೊಲ್ಲಲಾಯಿತು. ಈ ಕೃತ್ಯಕ್ಕೆ ಕಾರಣರಾದವರು 'ಸೊಸೈಟೀ ಆಫ್ ಮುಸ್ಲಿಂಸ್'' ಎನ್ನುವ ಮೂಲಭೂತವಾದಿ ಗುಂಪಿನ ಜನ. ಈ ಬಗ್ಗೆ ನಂತರ ನಡೆದ ಮಿಲಿಟರಿ ವಿಚಾರಣೆಯಲ್ಲಿ, ಸಮಿತಿಯ ಅಧ್ಯಕ್ಷನಾದ ಜನರಲ್‌ನು ಅತ್ಯಂತ ವಿವರವಾಗಿ ಈ ಉಲೆಮಾ ನಿರುಪಯುಕ್ತವಾದದ್ದು ಎಂದು ಘೋಷಿಸಿದ್ದಾನೆ.

ಈಗ ಧಾರ್ಮಿಕ ಪಂಡಿತರಿಗೆ ಇರುವ ಏಕೈಕ ದಾರಿ ಎಂದರೆ ಈ ಮೂಲಭೂತ ವಾದಿಗಳ ಚಿಂತನೆಗಳನ್ನು ಇಸ್ಲಾಂಗೆ ವಿರುದ್ಧವಾದವುಗಳೆಂದು ಘೋಷಿಸುವುದು. ಪಾಂಡಿತ್ಯದ ದೃಷ್ಟಿಯಲ್ಲಿ ಅವು ಹಾಗಿವೆ ಕೂಡ. ಉದಾಹರಣೆಗೆ, 'ಸೊಸೈಟಿ ಆಫ್ ಮುಸ್ಲಿಮ್ಸ್' ಮಧ್ಯಯುಗದ ಎಲ್ಲ ಪಾಂಡಿತ್ಯಪೂರ್ಣ ಚಿಂತನೆಯನ್ನು ತಿರಸ್ಕರಿಸುತ್ತದೆ. ಅದು ಇಸ್ಲಾಂ ಕಾನೂನಿನ ನಾಲ್ಕು ಮುಖ್ಯ ಶಾಖೆಗಳ ಬಗೆಗಿನ ಅತಿ ಮುಖ್ಯ ಚಿಂತನೆಯನ್ನೂ ಕೂಡ ತಿರಸ್ಕರಿಸುತ್ತದೆ. ಅದಲ್ಲದೆ ಕುರಾನ್‌ನನ್ನು ಅರ್ಥೈಸಲು ತಾನು ಮಾತ್ರ ಅಧಿಕಾರ ಹೊಂದಿರುವುದಾಗಿ ಹೇಳಿಕೊಳ್ಳುತ್ತದದು. ಒಂದು ಶತಮಾನದ ಹಿಂದೆ ಇಂಥ ಯೋಚನೆಗಳು ಧರ್ಮಲಂಡತನವೆಂದು ಭಾವಿಸಲ್ಪಡುತ್ತಿದ್ದವು ಮತ್ತು ಇಂಥ ಯೋಚನೆ ಹೊಂದಿದವರನ್ನು ಅಂದು ಗಲ್ಲಿಗೇರಿಸಲಾಗುತ್ತಿತ್ತು. ಇವರ ಧಾರ್ಮಿಕ ಚಿಂತನೆಗಳು ಖಂಡಿತವಾಗಿ ನಿಜವಾದ ಇಸ್ಲಾಂನಿಂದ ಅತ್ಯಂತ ಭಿನ್ನವಾಗಿವೆ. ಆದರೆ ಇಂದು ಇಜಿಪ್ತ ಮತ್ತು ಬೇರೆ ಕಡೆಗೆ ಇವರೇ ನಿಜವಾದ ಮುಸ್ಲಿಂ ಎನಿಸಿಕೊಳ್ಳುತ್ತಿದ್ದಾರೆ. ಇಂದು ಇಜಿಪ್ತಿನಲ್ಲಿ ಇಂಥ ಮೂಲಭೂತವಾದಿಗಳ ಶಕ್ತಿ ಎಷ್ಟು ಹೆಚ್ಚಿದೆ ಎಂದರೆ ಅವರು ಇಂದು ಅಲ್ಲಿನ ಪೋಲೀಸರೊಂದಿಗೆ ಯುದ್ಧ ಘೋಷಿಸಬಲ್ಲರು. ಅನೇಕ ಸಲ ಅವರು ಕೈರೋ ಮತ್ತು ಇತರ ಪಟ್ಟಣಗಳ ಭಾಗಗಳನ್ನು ಬಿಡುಗಡೆ ಮಾಡಿದ್ದೇವೆಂದು ಘೋಷಿಸಿದ್ದಾರೆ.

ಇಂಥ ಈ ಮೂಲಭೂತವಾದಿಗಳು, ತಮ್ಮ ವಿರೋಧಿಗಳು ಮಹಫುಜನ ಮೇಲೆ ಹೊರಿಸಿದ ಆರೋಪಗಳನ್ನು ಏಕೆ ಪುನರುಚ್ಚರಿಸುತ್ತಿದ್ದಾರೆನ್ನುವ ಪ್ರಶ್ನೆ ಮೂಡುತ್ತದೆ. ಅನೇಕ ವರ್ಷಗಳಲ್ಲಿ ಈ ಒಂದು ವಿಷಯದ ಬಗ್ಗೆ ಉಲೆಮಾ ಮತ್ತು ಸೊಸೈಟಿ ಆಫ್ ಮುಸ್ಲಿಮ್ಸ್‌ನಂತಹ ಮೂಲಭೂತವಾದಿಗಳು ಏಕಾಭಿಪ್ರಾಯ ಹೊಂದಿದ್ದಾರೆ. ಇದಕ್ಕೆ ಮಹಫುಜನ ಪುಸ್ತಕ ಒಂದು ನೆಪಮಾತ್ರ. ನಿಜವಾದ ಕಾರಣವೆಂದರೆ ಮಹಫುಜ್ ಅತ್ಯಂತ ಸ್ಪಷ್ಟವಾಗಿ 'ಕ್ಯಾಂಪ್ ಡೇವಿಡ್'' ಒಪ್ಪಂದವನ್ನು ಬೆಂಬಲಿಸಿದ್ದಾಗಿದೆ. ಕೊಲೆಯ ಬೆದರಿಕೆಗಳಿಗೆ ಮಹಫುಜ್ ಅಸಾಧಾರಣವಾದ ಧೈರ್ಯದ ಪ್ರತಿಕ್ರಿಯೆ ತೋರಿಸಿದ್ದಾನೆ. ದುರುದ್ದೇಶಗಳ ರಾಜಕೀಯದ ಸೆಳವು ತುಂಬಿದ ಕೈರೋದಲ್ಲಿ ಬದುಕುವ ಅವನು ತನ್ನ ಜೀವನದ ರೀತಿಯನ್ನು ಒಂದಿನಿತೂ ಬದಲಿಸಿಕೊಂಡಿಲ್ಲ. ಅಷ್ಟೇ ಅಲ್ಲದೇ ಸರ್ಕಾರ ಕೊಡಮಾಡಿದ ಅಂಗರಕ್ಷಕರನ್ನು ಅವನು ತಿರಸ್ಕರಿಸಿದ್ದಾನೆ. ಸದ್ಯಕ್ಕೆ ಮಹಫುಜ್‌ನ ವಿರೋಧಿಗಳು ಅಪಮಾನದಿಂದ ಮುಖ ತಗ್ಗಿಸುವಂತಾಗಿದೆ. ಈ ಮೂಲಕ ಅವನು ತಾನು ವಾಸಿಸುತ್ತಿರುವ ಅತ್ಯಂತ ಅಸ್ಥಿರ ವಾತಾವರಣದ ಇಜಿಪ್ತಿನಲ್ಲಿ ಶಾಂತವಾಗಿ ಬದುಕುವ ರೀತಿಯ ಶೌರ್ಯವನ್ನು ಪ್ರದರ್ಶಿಸಿದ್ದಾನೆ. ●

ಮೂರು ಕವಿತೆಗಳು

ಜಯರಾಮು ಕಾರಂತ

1. ಹುಡುಕುವರು ಹುಡುಗರು

ಹುಡುಕುವರು ಹುಡುಗರು ತಮ್ಮ
ಅಮ್ಮದಿರ ಕಣ್ಣುಗಳ–
ಕಣ್ಣಾಮುಂಚ್ಚಾಲೆಗೆ ತೊಡಗಿ
ಓಡುವ ಎದೆಯ ಕನಸುಗಳು
ಶಿಶಿರದ ಗಾಳಿಯ ದಾಳಿಗೆ
ಅಡಿತಪ್ಪಿ ಉರುಳುವ ಹೊತ್ತು
ಅಯ್ಯೋ ಅಪ್ಪದಿರ ಹೆಗಲು
ವೈಶಾಖಕ್ಕೆ ಸೀಯುವ ಹೊತ್ತು

ಅಥವ ತಲೆಯೆತ್ತಿದರೆ ರೆಪ್ಪೆ ಇಲ್ಲದ ನೀಲ
ಆಗಸದ ತಪ್ಪಲಿನಿಂದ
ಇಣುಕುವ ಸಾವಿರ ಚುಕ್ಕೆ
ಹೆಸರು ಅಥವ ಗೋತ್ರಗಳ ಲೆಕ್ಕವ
ಬೇಕಾಬಿಟ್ಟಿ ಅಂಡಲೆವ
ತುಂಡುಮುಗಿಲ ಕೈಗಿತ್ತು
ಅಯ್ಯಪ್ಪ ಅನ್ನುವ ಹೊತ್ತು

2

ತಪ್ಪದೇ ಕಣ್ಣಲ್ಲಿ ಮಕರಂದ ಸುರಿಸೊ ವಸಂತೆ
ಪುಷ್ಪವತಿ ವಸುಂಧರೆಯು
ಸವಿಮಾತ ಹಂಚುವ ಹೊತ್ತು
ಕಾಡಿ ಕನಸುಗಳಲ್ಲಿ ಹಾಡಿ ತನ್ನೆದೆ ತೋಡಿ

ಸಾಕು ಬೇಕೆಂಬಂತೆ
ಮೀಸಿ ಬಣ್ಣದೋಕುಳಿಯಲ್ಲಿ
ಎದೆಸೆಟೆಸಿ ನರ್ತಿಸಿ ನಟಿಸಿ
ಎದೆಪದಕವಾದವಳಲ್ಲಿ
ಆಟ ಬೇಟ ಕೂಟಕ್ಕೆ ಜತೆ
ಯಾಗಿ ಹಾಯಾಗಿ ನಕ್ಕವಳಲ್ಲಿ

3

ತನು ಅರಳಿ ಋತುಚಕ್ರ ಉರುಳಿ
ಎಷ್ಟೋ ಇರುಳು
ಕಂಡ ಕನಸು ರಾಜಕುಮಾರ–
–ತನದ ಕತೆ ಕತ್ತರಿಸಿ
ಕೆಡೆದರೂ ಮರಮುರಳಿ
ಹೊಕ್ಕುಳಬಳ್ಳಿ ಹೂಬಿಟ್ಟು
ನಕ್ಕರೆ–ಮತ್ತದೇ ಮತ್ತು
ಹೊತ್ತಾರೆ: ಹುಡುಕುತ್ತಾರೆ–

ಒಡಲಪಾಡಿನ ನಡುವೆ
ಜೋಗುಳ ಹಾಡಿದ ಕೊರಳ–
ಪೇಟೆ ಕೋಟೆ ಗಡಿಬಿಡಿಯಲ್ಲಿ
ಕಚೇರಿ ಕಡತಗಳಲ್ಲಿ
ಜೂಜು ಕುಡಿತಗಳಲ್ಲಿ
ಹಾಯ್ ಹಲೋ ಭೇಟಿಗಳಲ್ಲಿ
ಇಪ್ಪತ್ತೆಂಟು ಆಟದ ಮೋಡಿ
ಆಡಿದ ಮೇಲೆ ಸೋಲುವ ಹೊತ್ತು
ಇನ್ನಿಲ್ಲವೆಂಬಷ್ಟು ಸುಸ್ತು
ವೈಮನ ಆವರಿಸುವ ಹೊತ್ತು
ಇವಳ ಮುಖ–ಮಡಿಲಲ್ಲಿ
ಇವಳೆದೆಯ ಕಡಲಲ್ಲಿ
ನಡೆ–ನೋಟ–ನಿಲುವಲ್ಲಿ
ಇವಳ ಅಡಿಯಲ್ಲಿ....

2. ರಂಗವಲ್ಲಿಯು ನಡೆ

ಇವು ಬರಿದೆ ಚುಕ್ಕಿಗಳಲ್ಲ
ನನ್ನ ಆತ್ಮದ ಬಿಕ್ಕುಗಳು

ಇರುವ ಒಗಟೆಯು ಸಿಕ್ಕ
ಬಿಡಿಸುವ ಕಾತರದಲ್ಲಿ
ಯಾತರ ಆಧಾರದಲ್ಲೊ
ತಿಣುಕಹೊರಟ ಲೆಕ್ಕಗಳು

ಒಂದು ಚುಕ್ಕಿಯು ಅಂದ
ಹೆಚ್ಚಿಸೀತೆ ಇನ್ನೊಂದೆಂದು
ತಪ್ಪಿಸಿಕೊಂಡು ಹೊರಟುವು ಅವು
ಒಂದರ ನಡೆಯು ಇನ್ನೊಂದು

ದಮ್ಮಯ್ಯ ತಪ್ಪಿಸಬೇಡ
ಆ ಅವುಗಳ ಒಳಲೆಕ್ಕ
ತಪ್ಪಿಸದೆ ಹೋದುವು ಎಂದು
ನಿಮ್ಮಂಥ ಇನ್ನೊಬ್ಬರ ದುಃಖ

ಇದಲ್ಲ ಇದಲ್ಲ ಎಂದು
ಇನ್ನೊಂದ ಹೊಸದ ಅರಸಿದ ಹಾಗೆ
ಹೊರಟವು ಈ ಗೆರೆಗಳು
ಚುಕ್ಕಿಯಿಂದ ಚುಕ್ಕಿಗೆ

ಬಣ್ಣವಿದ್ದರು ನಿನ್ನ
ಕಣ್ಣ ಸೆಳೆಯುವ ಹಾಗೆ
ಸಣ್ಣದೆನ್ನಿಸಬಹುದು
ಕಾಲಗರ್ಭದ ಒಳಗೆ

ಒಂದೊಂದಕು ಒಂದೊಂದು ಕತೆ–
ಸರಿ–ಬೆಸ ಸಂಬಂಧ

ಜುಲೈ–ಆಗಸ್ಟ್ ೧೯೯೦/೨೨

ಜಾಲಗಳ ಅರಿವಿರದೆ
ಎಲ್ಲೆಲ್ಲಿ ಮುಖವಾಡಿದ ಲತೆ–

ಇವು ಬರಿದೆ ಲತೆಗಳೆ ? ಅಲ್ಲ
ನನ್ನ ಯಾನದ ಮಿತಿಗಳು

3. ಎಲ್ಲಿದ್ದಾರೆ ? ಎಲ್ಲಿದ್ದಾರೆ ?

ನಮ್ಮ ದೇವರುಗಳೆಲ್ಲಿದ್ದಾರೆ ?
ಕಂಪೆನಿಗಳ ಕ್ಯಾಲೆಂಡರಿನಲ್ಲಿ
ಚೋರಬಜಾರದ ಮಾಲುಗಳಲ್ಲಿ
ರಾಜಕಾರಣದ ಜಾಲಗಳಲ್ಲಿ

ನಮ್ಮ ಹೆಂಡಂದಿರೆಲ್ಲಿದ್ದಾರೆ ?
ಬಾಡಿಗೆ ಮನೆಗಳ ಅಂಗಳದಲ್ಲಿ
ಕಡತಂದ ಮುಗುಳುನಗೆಹನಿ ಚೆಲ್ಲಿ
ಎಳೆಯುತ್ತಿದ್ದಾರೆ ರಂಗವಲ್ಲಿ

ನಮ್ಮ ಪ್ರೇಯಸಿಯರೆಲ್ಲಿದ್ದಾರೆ ?
ಸ್ವಾಂತಸುಖಸ್ವಪ್ನ–ಸೌಧಗಳಲ್ಲಿ
ತರಾವರಿ ಜಾಹೀರಾತುಗಳಲ್ಲಿ
ಹರಿಹರಿದ ಟೀವಿ ಚಿತ್ರಗಳಲ್ಲಿ

ನಮ್ಮ ಕಂದಮ್ಮರೆಲ್ಲಿದ್ದಾರೆ ?
ಪಠ್ಯಪುಸ್ತಕದ ಪಾಠಗಳಲ್ಲಿ
ಹೇಗೋ ಬೆಳೆಯುವ ಶೀಟೆಗಳಲ್ಲಿ
ಬದುಕಿನ ಭಾರದ ಮೂಟೆಗಳಲ್ಲಿ

ನಮ್ಮ ತಮ್ಮಂದಿರೆಲ್ಲಿದ್ದಾರೆ ?
ಪೇಟೆಗಳು ಹೆತ್ತ ಬೀದಿಗಳಲ್ಲಿ
ಅರಸುತ್ತ ಆಸೆದೃಷ್ಟಿಯ ಚೆಲ್ಲಿ
ಹೊಟ್ಟೆ ತುಂಬಿಸುವ ಕಾಯಕ ಎಲ್ಲಿ ?

ನಮ್ಮ ಹಿತೈಷಿಗಳೆಲ್ಲಿದ್ದಾರೆ ?
ಅವರಿವರ ಕನಸು–ಕಥನಗಳಲ್ಲಿ
ದೇಶಾವರಿ ರಂಗು–ಪಟ್ಟಾಂಗದಲ್ಲಿ
ಆರಾಮ ಮುಳುಗಿ ಆನಂದದಲ್ಲಿ

ನಮ್ಮ ಕವಿಗಳು ? ಎಲ್ಲಿದ್ದಾರೆ ?
ಯಾರದೋ ಹ್ಯಾಟು–ಬೂಟುಗಳಲ್ಲಿ
ಕಾಲ ಗಮನಿಸದ ದಾಟುಗಳಲ್ಲಿ
ಅಕೆಡಮಿಕ್ ಭೋಜನ ಕೂಟಗಳಲ್ಲಿ

ಎರಡು ಕವಿತೆಗಳು

ಆನಂದ ಝುಂಝುರವಾಡ

1. ತಾರೆ ಮತ್ತು ವೃತ್ತಗಳು

ಆಕಾಶದಲ್ಲಿ ಅಸಂಖ್ಯ ತಾರೆಗಳು

ಒಂದೊಂದನ್ನೇ ಮಧ್ಯಬಿಂದುವನ್ನಾಗಿಸಿಕೊಂಡು
ವೃತ್ತಗಳ ಬಿಡಿಸುತ್ತ ಹೋದೆ
ಬಿಡಿ, ಬಿಡಿ ಪರೀಘಗಳು ಒಂದನ್ನೊಂದು ಛೇದಿಸಿದವಾದರೂ
ಹಿಡಿಯಲಿಲ್ಲ ಆಕಾರವನ್ನು ಇಡಿಯಾಗಿಯೇ
ಅಳೆಯಲು ಹೊರಟವ ನಾನು.   ಎಳೆದ ಭೂ-ಮಿತಿಯೂ ನನ್ನದೇ
ಈ
ಅಸಂಖ್ಯ ತಾರೆಗಳಲ್ಲಿ ಒಂದಾದರೂ
ಈ ಅನಂತ ಆಕಾಶದ ಮಧ್ಯ ಬಿಂದುವಾಗಿರಬಹುದೇ ?
ಅಥವ
ಆಕೃತಿಯ ಪರಿಪೂರ್ಣತೆಗೆ....
ಅಥವ
ಮೊನಚಾದ ಕಂಪಾಸು ಕಾಲೂರಿ ನಿಲ್ಲುವುದಕ್ಕೆ
ಯಾವುದೋ ಒಂದನ್ನು ನಾನೇ ಮಧ್ಯಬಿಂದುವೆಂದು ಭ್ರಮಿಸಿದೆನೆ ?

ಆಕಾಶದಲ್ಲಿ ಅಸಂಖ್ಯ ತಾರೆಗಳು....

ಎಳೆದ ವೃತ್ತಗಳು
ಬಣ್ಣ ಬಣ್ಣದ ಬಳೆಗಳಾಗಿ ಅಸ್ತವ್ಯಸ್ತ ಹರವಿಕೊಂಡವು
ತಾರೆಗಳೇನು ಮುಗಿಯಲಿಲ್ಲ
ಇಷ್ಟೇ ಅಲ್ಲ,
ಇಂದು ಇಲ್ಲಿದ್ದ ತಾರೆ, ನಾಳೆ ಅಲ್ಲಿರುತ್ತಿತ್ತು
ನನ್ನ ಲೆಕ್ಕಾಚಾರದಲ್ಲಿ ಅದನ್ನು ಮಧ್ಯಬಿಂದುವಾಗಿ ನಾನು
ಬಳಸಿದ್ದೇನೋ ? ಇಲ್ಲವೋ ?
ಪತ್ತೆಹಚ್ಚಲು ಏನಿದೆ ನನ್ನ ಬಳಿ ಗುರುತು
ಇಂದಿನವರೆಗೆ
ಎಷ್ಟೊಂದು ತಾರೆಗಳು ಹೊಸ ಹೊಸ ಮುಖವಾಡ ಹೊತ್ತು
ಎದುರು ಬಂದು ನಿಂತು
ಅಪ್ರಾಕೃತ ಆಕಾಶಕ್ಕೆ ತಾವೇ ಮಧ್ಯಬಿಂದುವಾಗಿ ನಿಲ್ಲುವ
ಹಸಿವನ್ನು ಹಿಂಗಿಸಿಕೊಂಡಿವೆಯೋ ಯಾರಿಗೆ ಗೊತ್ತು ?

ತಾರೆಗಳ ಜೊತೆಗೆ ಸೆಣೆಸಾಡಿ ಸೋತೆ ನಾನು
ನನ್ನ ಬಿಡಿ ಬಿಡಿ ವೃತ್ತಗಳನ್ನ ಜೋಡಿಸುತ್ತ ಕುಳಿತೆ
ಏನಾದರೂ ಮಾಡಿ ಸೃಷ್ಟಿಸಲು ಕಾದೆ ಒಂದು ಆಕೃತಿಯನ್ನು
ಹುಟ್ಟಿ–ಸಾಯುವ ಹಲವು ವಿನ್ಯಾಸಗಳ ಸಂಸಾರ ಸಾಕಾಗಿ
ಸನ್ಯಾಸದೆಡೆ ತುಡಿಯುತ್ತಲಿದೆ ಜೀವ
ಒಳಗೆ ಮೊರೆಯುತ್ತಿದೆ ಪ್ರಜ್ಞೆಯ ಕಡಲು

ಏಕೆ ತಾರೆಗಳು ಬಿಡಿ ಬಿಡಿಯಾಗಿ ಬಿದ್ದಿವೆ ಆಕಾಶದಲ್ಲಿ ?
ಏಕೆ ನಾನದನ್ನು ಇಡಿಯಾಗಿ ಹಿಡಿಯಲಾರೆ ಮಧ್ಯಬಿಂದುವಿನ
ಮೇಲೆ ನಿಂತು ವೃತ್ತದಲ್ಲಿ ?
ಚೂಪಾದ ತ್ರಿಜ್ಯದ ತುದಿಗಳು ಕಾದ ಕಣ್ಣಲ್ಲಿ ಚುಚ್ಚುತ್ತಲೇ ಇವೆ

2. ಕವಿತೆ

ಕವಿತೆ ಎಂದರೆ ಕವಿ ನಿರ್ಮಿಸಿದ ಮಯಸಭೆಯಲ್ಲ
ವಿನಯದಲಿ ಬಾಗಿದರೆ ಯಾವ ಎದೆ ತೆರೆಯುವುದಿಲ್ಲ ?
ಬೀಗಿ ನಡೆವವರು ಎಡವಿ ಬಿದ್ದರೆ ಆ ತಪ್ಪು ಕವಿಯ-
ದೆನುವಂತಿಲ್ಲ. ಒಪ್ಪಂದದಲಿ ಒಳಗೊಳಗೇ
ವ್ಯಾಜ್ಯಗಳ ಮುಗಿಸಿಕೊಂಡವರು, ಕಬ್ಬಿಣದ ಗೇಟು ತೆರೆದು
ಹೊರ ಬಂದಾರು ಸಾವಿರ ಮುಳ್ಳುಗಳ ನಡುವೆಯೂ ತನ್ನದೇ
ದಾರಿ ಹಿಡಿದು, ಕೊನೆಮುಟ್ಟಿ ಅರಳುವ ಮೃದು-ಪಕಳೆ-
ಯಂತರಳಿ ಕಂಪನುಂಡಾರು.

ಪ್ರಜ್ಞೆಯ ಪ್ರಣಾಳದಲಿ ತುಳುಕುತಿದೆ ಬಣ್ಣ ಬಣ್ಣದ ದ್ರವ
ಅನುಭವದ ಕಂಪನಗಳನ್ನು ಬಿಂಬಿಸುತ್ತಿದೆ ಜೀವ
ಒಳಗಿಳಿಬಿಟ್ಟ ದೀಪ ಆರುವದೋ ? ಉಜ್ವಲವಾಗಿ
ಉರಿಯುವದೋ ? ನಿಗೂಢವಾಗಿದೆ ಗಾಳಿ-ಬೆಳಕಿನ ಸಂಬಂಧ
ಮೀಟರಿನ ಮುಳ್ಳು ಹೊಯ್ದಾಡಿ, ಹಳ್ಳ-ನಾಲೆ-ನದಿ-ಸರಿವುಗಳ
ಹಾದು, ತೆಗ್ಗು-ದಿನ್ನೆಗಳಲ್ಲಿ ಮುಗ್ಗರಿಸಿ, ಅಂತೂ ಅವಸರಕ್ಕೆ
ಒದಗುವದೇ ವಿವೇಕ-ಪಾಕ.

ರಸ-ದೀಕ್ಷಿತರು ಘನಿಹನಿಯೂ ಅನ್ವೇಷಿಸಲಿ ಹೊಸ ಹೊಸ
ರಸ-ವಿದ್ಯೆಗಳ ಪುಟ-ಬೆಂಕಿಗೆ ಅದಿರು ಎದುರಾಡುವದೆ ?
ವಿಕಿರಣಗೊಳದಿರಲಿ ಅಣು-ಸ್ಥಾವರದ ಜಂಗಮ-ಶಕ್ತಿ
ಸುಟ್ಟು ಹೋಗದಿರಲಿ ಪುರಾತನರು ತೆಗೆದಿಟ್ಟ ಪ್ರಾಚೀನ
ಸಂಸ್ಕೃತಿಯ ನೀಲ-ನಕ್ಷೆ.

ಖುರಪುಟದ ಕುದುರೆಯನ್ನು ಕಟ್ಟೀತು ಆಶ್ರಮದ ಮುಗ್ಧ-ಪ್ರೀತಿ
ಧರ್ಮ-ನೀತಿ. ಅಗಲಿದ ಸಂಬಂಧಗಳ ಒಂದುಗೂಡಿಸುವಂತಿರಲಿ
ಎಲ್ಲ ಯುದ್ಧಗಳ ಪರಿ-ಸಮಾಪ್ತಿ.

ಜುಲೈ-ಆಗಸ್ಟ್ ೧೯೮೦/೩೧

ಸೂತಕ

ಒಂಟಿ ಬೇಸರದಲ್ಲಿ
ಊರ ಹೊರ ಅಂಚಿನ ಗುಡ್ಡಕ್ಕೆ ಹೊರಟಿದ್ದೆ
ಬೇಸಗೆಯ ಸಂಜೆ
ಸೂರ್ಯನುರಿಯುತ್ತಿದ್ದ ದಿಗಂತದಲ್ಲಿ.

ಅಷ್ಟು ದೂರಕ್ಕೇ ಮಲಗಿದೊಂದು ನಾಯಿ
ಸೆಳೆದಿತ್ತು ಗಮನ. ಜೊತೆಯಾದ ಸಮಾಧಾನ.
ಪೊಟ್ಟಣದ ಪುರಿ ತೆಗೆದು ಚೂಚೂ ಎಂದೆ ಗೆಳೆತನಕ್ಕೆ
ಮಿಸುಕಿದ್ದರೆ ಸರಿಯೆ ಬಡ್ಡಿಮಗನದು.

ಇಳಿ ಹೊತ್ತಲ್ಲೆಂಥ ನಿದ್ದೆ ಇದಕ್ಕೆ
ಮೈಗಳ್ಳ ಸೂಳೆಮಗಂದು
ಲಾಯಕ್ಕು ಸರಕಾರಿ ಚಾಕರಿಗೆ ಎಂದು
ನನ್ನ ಜೋಕಿಗೆ ನಾನೆ ನಕ್ಕೆ.

ನಿದ್ದೆಯಲ್ಲಿ ನಾಯಿ ನೆನೆವುದಂತೆ
ಜನ್ಮಾಂತರದ ಕಥೆ,
ಭವಿಷ್ಯ. ಎದ್ದಕೂಡಲೆ ಮರೆವು
ಎಂಥ ಚೋದ್ಯ !

ಸ್ವಲ್ಪ ದೂರಕ್ಕೆ ನಿಂತು ಪುಟ್ಟಕಲ್ಲೆತ್ತಿ
ಎಸೆದೆ ಪೆಟ್ಟಾಗದಂತೆ.
ಕಿಮಕ್ ಎಂದಿದ್ದರೆ ಸರಿಯೆ ?
ಅದರ ನಿರ್ಲಕ್ಷ್ಯಕ್ಕೆ ರೋಸಿ ಹತ್ತಿರ ಹೋದೆ.

ಕಟವಾಯಲ್ಲಿ ನೊರೆಯುಕ್ಕಿ ಒಣಗುತ್ತಿತ್ತು,
ವಿಷಪ್ರಾಶನದ ಮರಣ. ಯಾವ ಪಾಪಾತ್ಮನ ಕಾರ್ಯ
ಎಂಥ ಮುದ್ದು ನಾಯಿಗಿಂತ ದುರ್ಮರಣ
ತಂದವನ ಕೈಸೇದಿಹೋಗ, ಶಪಿಸುತ್ತ ನಿಂತೆ.

ಮಲಗಿ ಕಾಣುವ ಭವಿಷ್ಯ ಎದ್ದಾದ ಮೇಲೂ
ನೆನಪಿಗಿದ್ದರೆ ವಿಷವಿಕ್ಕಿದವನ ಕೈ ಕಚ್ಚುತಿತ್ತೆ,
ವಿಷವನ್ನು ತಿನ್ನದೆ ಬದುಕುತಿತ್ತೆ
ಅದರ ತಲೆ ಬಳಿ ಯೋಚಿಸುತ್ತ ಕುಳಿತೆ.

ಯಾವನೋ ಕುಡಿದು ಅಡ್ಡಾದಿಡ್ಡಿ ಕಾಲು
ದಾರಿಯುಸಳೆಯುತ್ತ ಹಾಡುತ್ತಾ ನಡೆದಿದ್ದ
'ಯವರಿಕಿ ವಾರೇ ಯಮುನಾ ತೀರೇ'
(ಅವರಿಗೆ ಅವರೇ ಯಮುನಾ ತೀರೇ)

ನಾಯಿ ಸಾವಿನ ಸೂತಕದಲ್ಲಿ ಮನೆಗೆ ಬಂದೆ
ಸಾವಿನ ಸೂತಕದ ನೋವು
ತೀವ್ರವಾಗುತ್ತ ಎದೆಯಲ್ಲಿ
ಕೈ ಕಾಲೂ ತೊಳೆಯದೆ ಮಲಗಿದೆ.

ಅರೆ ಎಚ್ಚರದ ನಿದ್ದೆಯಲ್ಲೊಂದು ಕನಸು–
ಮನೆ ಬಾಗಿಲಲ್ಲಿ ಬಂದು ನಿಂತಿದೆ ನಾಯಿ
ನೆತ್ತಿಯಲೊಂದು ಬುತ್ತಿಗಂಟು
ಮೇಲೊಂದು ಕಾಗೆ ಕೂತು ಕೂಗುತ್ತಿದೆ ಕಾವ್ ಕಾವ್
ಹಿನ್ನೆಲೆಯಲ್ಲಿ ಕುಡುಕನ ಹಾಡು.

ಎರಡು ಕೈಯೆತ್ತಿ ಗಾಳಿಯಲ್ಲಾಡಿಸಿ ಕೂಗಿದೆ
ಉಷ್‌ವುಷ್, ಹಾರಲಿಲ್ಲ ಕಾಗೆ.
ನಾಯಿ ತೊಲಗಿದರೆ ಕಾಗೆಯೂ ತೊಲಗಲೆಂದು
ಅದಲಿಸಿದೆ ಹಚಾಹಚಾ. ನಾಯಿ
ಬಾಗಿಲು ಬಿಟ್ಟು ಹೋಗಲಿಲ್ಲ
ಕೋಳಿ ಕೂಗಲಿ ಎಂದು ಕಾಯುತ್ತಾ....

— ಸ. ರಘುನಾಥ

ಅಮ್ಮ - ನಿನ್ನ ಮಗಳೇ ಬರೆದ ಕವಿತೆ !

ಬೆಟ್ಟದಿಂದಿಳಿವ ಬೆಳ್ನೊರೆಯ ನಗೆಯ ಅಮ್ಮ
ನಿನಗೆಷ್ಟು ಆಸ್ಥೆಯಿತ್ತು !
ಹಿತ್ತಲಿನ ಕರಿಬೇವು, ಕೊತ್ತಂಬರಿಗೆ ನೀರೆರೆದು
ಕೊಟ್ಟಿಗೆಯ ಕರುವಿಗೆ ಅಂಬಲಿ ಊಡಿಸುವುದಕ್ಕೆ,
ಮೂಲೆ ಮೂಲೆಯ ಗುಡಿಸಿ ತೊಂಡಂಗಿ ಬಡಿದು
ಹೆತ್ತ ಹನ್ನೊಂದಕ್ಕೆ ನೀರೆರೆದು ತಾಲಿಪಿಟ್ಟು ತಟ್ಟೆ
ತಿನ್ನಿಸುವುದಕ್ಕೆ.
ನಿನಗೆಷ್ಟು ಆಸ್ಥೆಯಿತ್ತು !

೨)
ಅಮ್ಮಾ, ನೋವಿಂದ ನೀ ಕಲಿತ ಪಾಠಗಳ ಕಲಿಸೆ
ಕಣ್ಣೋಟದಲ್ಲೆ ಕಂದನ ಬೇಕು-ಬೇಡಗಳಿರಿವುದ ತಿಳಿಸೆ

ಈ ಪುಟ್ಟ ಚಿಣ್ಣನ ಸಾಕುವುದು ಹೇಗೊ ಏನೊ
ನೀರೆರೆದರೆ ಕಣ್ಣಲ್ಲಿ ಸೀಗೆ ಹೋಗುವುದೇನೊ !

ಸಾಂಬ್ರಾಣಿ ಹೊಗೆಯಲ್ಲಿ ಉಸಿರುಕಟ್ಟೀತೆ
ಕಡಗದ ಭಾರಕ್ಕೆ ಪಾದಸೋತೀತೆ

ಅಮ್ಮ ನಾನೇ-ನೀ ಹೆತ್ತಹತ್ತನೆಯ ಮಗಳು ಜಾಣೆ
ಹೆತ್ತ ಒಂದಕ್ಕೆ ಏಕಿಷ್ಟು ಕಷ್ಟವೋ ಕಾಣೆ !

೩)
ಅಮ್ಮ, ನೀನೆನಗೆ ಜರಿಯಂಚಿನ ರೇಷ್ಮೆ ಸೀರೆ ಕೊಡಲಿಲ್ಲ-
ರೇಷ್ಮೆ ನಯದ ಕೂದಲ ಹೊರತಾಗಿ.
ಕೊರಳ ಬಳಸಲು ಕಂಠಹಾರ ಕೊಡಲಿಲ್ಲ-
ನವಿಲ ನರ್ತನದ ಕೊರಳ ಹೊರತಾಗಿ-
ತೆಂಗು ಚಿಗುರಿಸಲೆಂದು ಅಂಗೈಯಗಲದ ಹಿತ್ತಲ
ಮನೆಗೂ ಧಾರೆಯೆರೆದು ಕೊಡಲಿಲ್ಲ-

ಬಿತ್ತಿದಷ್ಟೂ ಬೆಳೆವ, ಚಿಗುರೊಡೆವ, ಮಿಡಿವ
ಈ ಬಸಿರ ಹೊರತಾಗಿ.

—ಎಂ. ಆರ್. ಕಮಲ

ವಿಜ್ಞಾನದ ಅಧ್ಯಾತ್ಮ

⊕ ಮೂಲ: ಫ್ರಿತೋ ಕಾಪ್ರಾ
ಸಂಗ್ರಹಾನುವಾದ: **ಸ. ಉಷಾ**

ಭೌತ ವಿಜ್ಞಾನಿ Fritoz Kapra ನ ಸುಪ್ರಸಿದ್ಧ ಪುಸ್ತಕ Tao of Physics ನ Knowing and Seeing ಎಂಬ ಅಧ್ಯಾಯದ ಅನುವಾದವನ್ನಿಲ್ಲಿ ಸಂಗ್ರಹಿಸಿ ಕೊಡುತ್ತಿದ್ದೇವೆ. ವಿಜ್ಞಾನ ಮತ್ತು ಧರ್ಮಗಳ ನಡುವಣ ದ್ವಂದ್ವ ಯುದ್ಧವನ್ನು ಕಾಣುತ್ತಿರುವ ಈ ದಿನಗಳಲ್ಲಿ, ಈ ಲೇಖನ ವಿಜ್ಞಾನ ಮತ್ತು ಧರ್ಮಗಳೆರಡೂ ಹೇಗೆ ಒಂದೇ ಸತ್ಯದ ಕಡೆ ಗಮಿಸುತ್ತಿರುವ ಎರಡು ಮಾನಸಿಕ ಶಕ್ತಿಗಳಾಗಿವೆ ಎಂಬುದರ ಬಗ್ಗೆ ಬೆಳಕು ಚೆಲ್ಲುತ್ತದೆ. ಪುಸ್ತಕದ ಎರಡನೇ ಮುದ್ರಣದ ಲೇಖಕನ ಮುನ್ನುಡಿಯ ಕೆಲವು ಮಾತುಗಳನ್ನು ಲೇಖನದಲ್ಲಿ ಬಳಸಿಕೊಳ್ಳಲಾಗಿದೆ. ಸಂ.]

ಐದು ವರ್ಷಗಳ ಹಿಂದೆ ನನಗೊಂದು ಸುಂದರ ಅನುಭವವಾಯಿತು. ಅದು ನನ್ನನ್ನು ಈ ಪುಸ್ತಕ ಬರೆಯುವ ಹಾದಿಗೆ ಹಚ್ಚಿತು. ಒಂದು ಬೇಸಿಗೆಯ ಮಧ್ಯಾಹ್ನದಲ್ಲಿ ನಾನು ಸಮುದ್ರದ ಬದಿಯಲ್ಲಿ ಕುಳಿತಿದ್ದಾಗ. ಅಲೆಗಳು ಉರುಳುವುದನ್ನು ನೋಡುತ್ತಾ, ನನ್ನ ಉಸಿರಾಟದ ಲಯವನ್ನು ನಾನೇ ಅನುಭವಿಸುತ್ತಾ ಇದ್ದ ನನಗೆ ನನ್ನ ಸುತ್ತಲಿನ ಇಡೀ ಪರಿಸರ ಒಂದು ಬೃಹತ್ ನರ್ತನದಲ್ಲಿ ತಲ್ಲೀನವಾದಂತೆನಿಸಿತು. ಒಬ್ಬ ಭೌತವಿಜ್ಞಾನಿಯಾಗಿ Hi Energy Physicsನಲ್ಲಿ ಮಾಡಿದ ಸಂಶೋಧನೆಯಿಂದ ತಿಳಿದಿದ್ದ ಕೆಲವು ವೈಜ್ಞಾನಿಕ ಸತ್ಯಗಳು ಆ ಕ್ಷಣದಲ್ಲಿ ಜೀವ ಪಡೆದುವು.

ನಾನು ಬಾಹ್ಯಾಕಾಶದಿಂದ ಶಕ್ತಿಯ ಮೊತ್ತವು ಧರೆಗಿಳಿಯುವುದನ್ನು 'ಕಂಡೆ'. ಅದರಲ್ಲಿ ಕಣಗಳು ಲಯಬದ್ಧ ಮಿಡಿತಗಳಲ್ಲಿ ಸೃಷ್ಟಿಯಾಗುತ್ತಿದ್ದವು, ನಾಶವಾಗುತ್ತಿದ್ದವು. ಮೂಲವಸ್ತುಗಳಲ್ಲಿರುವ ಕಣಗಳು ನನ್ನ ದೇಹದಲ್ಲಿರುವ ಕಣಗಳೂ ಸಹ ವಿಶ್ವದ ಆ ಶಕ್ತಿನೃತ್ಯದಲ್ಲಿ ಭಾಗಿಯಾಗುವುದನ್ನು ನಾನು 'ಕಂಡೆ'. ಆ ಕ್ಷಣದಲ್ಲಿ ಅದು ಶಿವತಾಂಡವವೆಂದು ನನಗೆ ತಿಳಿಯಿತು.

ತಾತ್ವಿಕ ಭೌತಶಾಸ್ತ್ರದಲ್ಲಿ ಅನೇಕ ವರ್ಷಗಳ ಪರಿಶ್ರಮ ಮತ್ತು ಸಂಶೋಧನೆಯ ಹಿನ್ನೆಲೆಯಿದ್ದ ನನಗೆ ಪೌರ್ವಾತ್ಯ ಅನುಭಾವಿ ಪಂಥದೊಡನೆ ತಾತ್ವಿಕ ಭೌತಶಾಸ್ತ್ರವು

ಹೊಂದಿದ್ದ ಸಾಮ್ಯವು ಕುತೂಹಲಕಾರಿಯಾಗಿತ್ತು. ರೆಷ್‌ನ್ ಪಂಥದ ಅನೇಕ ಅಂಶಗಳು ಕ್ವಾಂಟಂ ತತ್ವದ (Quantum Field Theory) ಅನೇಕ ಸಂಕೀರ್ಣ ಅಂಶಗಳ ನೆನಪು ತರುವಂತಿದ್ದವು. ಪ್ರಾರಂಭದಲ್ಲೇನೋ ಈ ಎರಡೂ ಅಂಶಗಳನ್ನು ಹೋಲಿಸಿ ನೋಡುವುದು ಒಂದು ಬೌದ್ಧಿಕ ವ್ಯಾಯಾಮದಂತೆನಿಸುತ್ತಿತ್ತು. ಎಷ್ಟೋ ವರ್ಷಗಳ ಬೌದ್ಧಿಕ ಚಿಂತನೆ ವಿಶ್ಲೇಷಣೆಗಳ ನಂತರ ಅದು "ಘಟಿಸಿತು". ಆಗ ನಾನು ಅಕ್ಷರಶಃ ಕಣ್ಣೀರುಗರೆಯುತ್ತಿದ್ದೆ. ಆ ನಂತರ ನನಗೆ ಮೇಲೆ ಹೇಳಿದ ಶಿವತಾಂಡವದ ಅನುಭವವಾಯಿತು. ಇಂಥ ಇನ್ನೂ ಅನೇಕ ಅನುಭವಗಳು ನನಗೆ ಆಧುನಿಕ ಭೌತ ಶಾಸ್ತ್ರದಿಂದ ಪ್ರಪಂಚವನ್ನು ನೋಡುವ ಒಂದು ಅಖಂಡ ದರ್ಶನವು ಹೊಮ್ಮಲು ಸಾಧ್ಯವಿದೆಯೆಂಬುದನ್ನು ಮತ್ತು ಆ ದರ್ಶನವು ಪ್ರಾಚೀನ ಪೌರ್ವಾತ್ಯ ಜ್ಞಾನ ದೊಡನೆ ಸಮರಸ ಹೊಂದುವಂತಿದೆಯೆಂಬುದನ್ನು ಮನವರಿಕೆ ಮಾಡಿಕೊಟ್ಟವು. ನನ್ನ ಓದುಗರಲ್ಲಿ ಭೌತವಿಜ್ಞಾನಿಗಳೂ ಭೌತತತ್ವಶಾಸ್ತ್ರದಲ್ಲಿ ಆಸಕ್ತರೂ ಇದ್ದರೆ ಅಂಥವರು ಪೌರ್ವಾತ್ಯ ತತ್ವಜ್ಞಾನವು ಒಂದು ಸುಂದರ ಚೌಕಟ್ಟನ್ನು ಭೌತಿಕ ಪ್ರಪಂಚಕ್ಕೆ ಒದಗಿಸಿಕೊಡುತ್ತದೆಂಬುದನ್ನು ಇಲ್ಲಿ ಗುರ್ತಿಸಬಹುದು.

2

ಪೌರ್ವಾತ್ಯ ಅನುಭಾವ ಮತ್ತು ಆಧುನಿಕ ಭೌತಶಾಸ್ತ್ರಕ್ಕೆ ಇರುವ ಸಮಾನಾಂಶ ಗಳನ್ನು ಅಧ್ಯಯನ ಮಾಡುವ ಮೊದಲು ಎದುರಿಸಬೇಕಾದ ಮುಖ್ಯಪ್ರಶ್ನೆ ವಿಜ್ಞಾನ ವನ್ನು ಅನುಭಾವದೊಡನೆ ಹೋಲಿಸುವುದು ಹೇಗೆ ಸಾಧ್ಯ ಎಂಬುದು. ವಿಜ್ಞಾನವು ವಿಚಾರಕ್ಕೆ, ಗಣಿತಕ್ಕೆ, ಬುದ್ಧಿಗೆ ಸಂಬಂಧಿಸಿದುದು ; ಆಧ್ಯಾತ್ಮವು ಧ್ಯಾನಕ್ಕೆ ಸಂಬಂಧಿಸಿದುದು.

ಜ್ಞಾನವೆಂದರೇನು ? ಜ್ಞಾನವೆನ್ನುವಾಗ ಬೌದ್ಧ ಸನ್ಯಾಸಿಯ ಜ್ಞಾನಕ್ಕೂ, ಆಕ್ಸ್‌ಫರ್ಡ್ ಅಥವಾ ಬರ್ಕ್‌ಲೇಯಿಂದ ಬಂದ ಭೌತವಿಜ್ಞಾನಿಯ ಜ್ಞಾನಕ್ಕೂ ಅರ್ಥ ಒಂದೇ ? ಒಂದು ಕಡೆ ಸೂತ್ರಗಳು ಮತ್ತು ತತ್ವಗಳು, ಇನ್ನೊಂದು ಕಡೆ ಪುರಾಣ ಕಲ್ಪನೆಗಳು, ತಾತ್ವಿಕ ವಿವೇಚನೆಗಳು, ಧಾರ್ಮಿಕ ಕೃತಿಗಳು. ಈ ಜ್ಞಾನದ ಸ್ವರೂಪ ಮತ್ತು ಭಾಷೆಯನ್ನು ಸ್ಪಷ್ಟಗೊಳಿಸುವುದೇ ಈ ಅಧ್ಯಾಯದ ಉದ್ದೇಶ.

ಮನುಷ್ಯನ ಮನಸ್ಸಿಗೆ ಎರಡು ಬಗೆಯ ತಿಳುವಳಿಕೆಯನ್ನು ಪಡೆದುಕೊಳ್ಳುವ ಶಕ್ತಿಯಿದೆ. ಒಂದು ಬೌದ್ಧಿಕತೆ, ವೈಚಾರಿಕತೆ ; ಇನ್ನೊಂದು ಅಂತಸ್ಫುರಣ (Intuition), ಈ ಎರಡು ತಿಳಿವುಗಳನ್ನು ಕ್ರಮವಾಗಿ ವಿಜ್ಞಾನ ಮತ್ತು ಧರ್ಮಗಳಿಗೆ ಸಂಬಂಧಿಸಿದವೆಂದು ಗುರ್ತಿಸಲಾಗಿದೆ. ಪಾಶ್ಚಿಮಾತ್ಯ ಪ್ರಪಂಚದಲ್ಲಿ ವೈಚಾರಿಕತೆಗೆ

ಇರುವಷ್ಟು ಗೌರವ ಅಂತಃಸ್ಫುರಣಕ್ಕೆ ಇಲ್ಲ. ಆದರೆ ಸಾಂಪ್ರದಾಯಿಕ ಪೌರ್ವಾತ್ಯ ಮನೋಧರ್ಮವು ಇದಕ್ಕೆ ತದ್ವಿರುದ್ಧವಾಗಿದೆ. ಒಂದೇ ವಿಷಯವನ್ನು ಕುರಿತ ಎರಡು ವಿಭಿನ್ನ ಹೇಳಿಕೆಗಳು ಈ ವಿಭಿನ್ನ ಮನೋಧರ್ಮಗಳನ್ನು ಪ್ರತಿಬಿಂಬಿಸುತ್ತವೆ:

ಗ್ರೀಸ್‌ನಲ್ಲಿ ಸಾಕ್ರಟೀಸ್ "ನನಗೇನೂ ತಿಳಿಯದು ಎಂದು ನನಗೆ ತಿಳಿದಿದೆ" ಎನ್ನುತ್ತಾನೆ. ಚೈನಾದಲ್ಲಿ ಲಾವೋತ್ಸು "ತಿಳಿದಿದೆ ಎಂಬುದನ್ನು ತಿಳಿಯದಿರುವುದೇ ಅತ್ಯುತ್ತಮವಾದುದು" ಎನ್ನುತ್ತಾನೆ.

ಈ ಎರಡು ಬಗೆಯ ಜ್ಞಾನಗಳಿಗೆ ಪೌರ್ವಾತ್ಯರು ಕೊಟ್ಟಿರುವ ಹೆಸರುಗಳು ಸಹ ಅವುಗಳ ಸ್ವರೂಪ-ಸ್ಥಾನಗಳನ್ನು ನಿರ್ದೇಶಿಸುವಂತಿವೆ. ಉಪನಿಷತ್ತುಗಳಲ್ಲಿ ವೈಜ್ಞಾನಿಕ ಜ್ಞಾನ ಅಂದರೆ ಶಾಸ್ತ್ರಾದಿಗಳನ್ನು Lower knowledge ಎಂದೂ, ಧಾರ್ಮಿಕ ಜ್ಞಾನವನ್ನು Higher knowledge ಎಂದೂ ಕರೆಯಲಾಗಿದೆ. ಬುದ್ಧನ ತತ್ವ ಸಾಪೇಕ್ಷಜ್ಞಾನ ಮತ್ತು ಸಮ್ಯಗ್ ಜ್ಞಾನದ ಬಗ್ಗೆ ಹೇಳುತ್ತದೆ. ಚೀನೀ ತತ್ವಶಾಸ್ತ್ರ ವೈಚಾರಿಕತೆ ಮತ್ತು ಅಂತಸ್ಫುರಣ ಪರಸ್ಪರ ಪೂರಕವಾದವು ಎಂದು ಹೇಳುತ್ತದೆ: ಇನ್ ಮತ್ತು ಯಾಂಗ್ ಎಂಬ ಎರಡು ಪರಸ್ಪರ ಪೂರಕ ಕಲ್ಪನೆಗಳನ್ನುಳ್ಳ ತಾವೋಯಿಸಂ ಮತ್ತು ಶಾಸ್ತ್ರೀಯ ಕನ್‌ಫ್ಯೂಷಿಯನಿಸಂ-ಈ ಎರಡು ಬೇರೆ ಬೇರೆ ಜ್ಞಾನ ಮಾರ್ಗಗಳನ್ನು ಪ್ರತಿನಿಧಿಸುವ ತಾತ್ವಿಕ ಪರಂಪರೆಗಳಾಗಿವೆ.

ವೈಚಾರಿಕ ಜ್ಞಾನವು ನಮ್ಮ ದೈನಂದಿನ ಪರಿಸರದಲ್ಲಿ ವಸ್ತು-ಘಟನೆಗಳ ಮೂಲಕ ನಾವು ಪಡೆಯುವ ಅನುಭವದಿಂದ ದೊರೆಯುತ್ತದೆ. ಅದು ಬುದ್ಧಿಯ ಸಾಮ್ರಾಜ್ಯಕ್ಕೆ ಸೇರಿದ್ದು: ಚಿಂತಿಸಿ, ವಿಭಜಿಸಿ, ಹೋಲಿಸಿ, ಅಳೆದು. ತೂಗಿ ವರ್ಗೀಕರಿಸಿ ಬೆಲೆಕಟ್ಟುವುದು ಅದರ ಕೆಲಸ. ಹೀಗೆ ಬೌದ್ಧಿಕ ತರತಮಗಳ ಪ್ರಪಂಚ ಸೃಷ್ಟಿಸಲ್ಪಡುತ್ತದೆ. ಈ ತರ ತಮಗಳ ಪ್ರಪಂಚದಲ್ಲಿ ಪರಸ್ಪರ ವಿರುದ್ಧವಾದ ಅಂಶಗಳು ಸಂಬಂಧ ಮತ್ತು ಹೋಲಿಕೆಯ ಮೂಲಕ ಅಸ್ತಿತ್ವದಲ್ಲಿರುತ್ತವೆ. ಆದ್ದರಿಂದಲೇ ಈ ಬಗೆಯ ಜ್ಞಾನವನ್ನು ಬೌದ್ಧರು ಸಾಪೇಕ್ಷ ಜ್ಞಾನ ಎಂದು ಕರೆಯುತ್ತಾರೆ.

ರೂಪ ರಚನೆ ಮತ್ತು ಪ್ರಕ್ರಿಯೆಗಳ ಅನಂತ ವೈವಿಧ್ಯವನ್ನು, ಅವುಗಳ ಎಲ್ಲ ವೈವಿಧ್ಯವನ್ನು ಗಮನಿಸಿ ವರ್ಗೀಕರಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಅಮೂರ್ತತೆಯು ಈ ಜ್ಞಾನದ ಮುಖ್ಯ ಲಕ್ಷಣ. ಈ ಜ್ಞಾನವು ನಮ್ಮ ಆಲೋಚನೆ ಮತ್ತು ಭಾಷೆಗಳ ಮುದ್ರೆಯನ್ನುಳ್ಳ ಅಮೂರ್ತ ಕಲ್ಪನೆ ಮತ್ತು ಸಂಕೇತಗಳ ವಾಸ್ತವತೆಯ ಬೌದ್ಧಿಕ ನಕ್ಷೆಯಾಗಿದೆ. ಇದನ್ನು ಅಕ್ಷರಗಳ ಮತ್ತು ಸಾಲುಗಳ ರೂಪದಲ್ಲಿ ಜೋಡಿಸುತ್ತೇವೆ. (Sequential and Linear Thinking).

ಇದಕ್ಕೆ ಪ್ರತಿಯಾಗಿ ಈ ಭಾಷೆಯಿಂದ ಸಂಕೇತಿಸಲ್ಪಡುವ ವಿವರಿಸುವ ಪ್ರಪಂಚವು ಅಗಣಿತ ವೈವಿಧ್ಯಗಳು ಹಾಗೂ ಸಂಕೀರ್ಣತೆಗಳನ್ನು ಉಳ್ಳದ್ದಾಗಿದೆ. ಅಗಣಿತ ಆಯಾಮಗಳ ಈ ಪ್ರಪಂಚದಲ್ಲಿ ಸರಳರೇಖೆಗಳಿಲ್ಲ. ನಿಯತ ಆಕಾರಗಳಿಲ್ಲ, ಘಟನೆಗಳು ಕ್ರಮಬದ್ಧವಾಗಿ ಘಟಿಸುವುದಿಲ್ಲ. ಆಧುನಿಕ ಭೌತಶಾಸ್ತ್ರವು ನಮಗೆ ತಿಳಿಸುವಂತೆ ಈ ಪ್ರಪಂಚದಲ್ಲಿ ಖಾಲಿಜಾಗವೂ ವಕ್ರವಾಗಿದೆ. ಈ ಸತ್ಯವನ್ನು ಸಂಪೂರ್ಣವಾಗಿ ವಿವರಿಸಲು, ಅರ್ಥಮಾಡಿಕೊಳ್ಳಲು ಸಂಕೇತದ ಸಂಕೇತವಾದ, ಅಮೂರ್ತ ವ್ಯವಸ್ಥೆಯಾದ ಭಾಷೆಯಿಂದಾಗಲೀ, ಭಾಷೆಯನ್ನೇ ಅನುಕರಿಸುವ ನಮ್ಮ ಚಿಂತನದಿಂದಾಗಲೀ ಸಾಧ್ಯವಿಲ್ಲ. ಈ ಪ್ರಪಂಚದ ಬಗ್ಗೆ ಸಾಲುಗಳ, ಕ್ರಮಬದ್ಧ ರೀತಿಯಲ್ಲಿ ಚಿಂತಿಸುವಾಗ, ಭೂಮಿಯ ಬಾಗಿದ ಮುಖವನ್ನು ಚಪ್ಪಟೆಯಾದ ನಕ್ಷೆಗಳ ಮೂಲಕ ಚಿತ್ರಿಸಲು ಒದ್ದಾಡುವ ಕಾರ್ಟೋಗ್ರಾಫರನ ಸ್ಥಿತಿಯೇ ನಮ್ಮದೂ ಆಗುತ್ತದೆ. ಈ ರೀತಿಯ ಕ್ರಿಯೆಯಿಂದ ನಾವು ಸತ್ಯದ ಒಂದು ಅಂದಾಜನ್ನು ಮಾತ್ರ ಪಡೆಯಬಲ್ಲೆವು. ಆದ್ದರಿಂದ ಎಲ್ಲ ವೈಚಾರಿಕ ತಿಳುವಳಿಕೆಯೂ ಒಂದು ಮಿತಿಗೊಳಪಟ್ಟಿದೆ. ಇಂತಹ ವೈಚಾರಿಕತೆಯೇ ವಿಜ್ಞಾನದ ತಳಹದಿಯಾಗಿದೆ. ವೈಚಾರಿಕತೆಯಂತೆಯೇ ವಿಜ್ಞಾನವೂ ಅಳೆದು ಸುರಿದು ವರ್ಗೀಕರಿಸಿ ವಿಶ್ಲೇಷಿಸುತ್ತದೆ. ಈ ವಿಧಾನಗಳಿಂದ ಪಡೆದುಕೊಂಡ ಜ್ಞಾನದ ಮಿತಿ ಈಗಾಗಲೇ ಆಧುನಿಕ ವಿಜ್ಞಾನದಲ್ಲೂ ಕಂಡುಬರುತ್ತಿದೆ. ವೆರ್ನರ್ ಹೈಜೆನ್‌ಬರ್ಗ್ ಹೇಳುವಂತೆ 'ಪ್ರತಿ ಪದ ಅಥವಾ ಪರಿಕಲ್ಪನೆ ಸ್ಪಷ್ಟವಾಗಿರುವಂತೆ ಕಂಡರೂ ಒಂದು ಪರಿಮಿತ ಅನ್ವಯಿಕತೆಯನ್ನು ಮಾತ್ರ ಪಡೆದಿರುತ್ತದೆ'.

ಈ ರೀತಿ ಪರಿಕಲ್ಪನಾ ಮೂಲವಾದ ರೂಢಜ್ಞಾನಕ್ಕೆ ಇರುವ ಮಿತಿಗಳು ಮತ್ತು ಸಾಪೇಕ್ಷತೆಯ ಬಗ್ಗೆ ಎಚ್ಚರವಾಗಿರುವುದು ಅನೇಕರಿಗೆ ಬಹಳ ಕಷ್ಟವಾಗುತ್ತದೆ. ಇದರಿಂದ ಏನಾಗುತ್ತದೆಂದರೆ, ಸತ್ಯ ಮತ್ತು ವಾಸ್ತವಿಕತೆಗಳ ಪ್ರಾತಿನಿಧಿಕ ನಿರೂಪಣೆಯನ್ನು ಗ್ರಹಿಸುವುದು ಹೆಚ್ಚು ಸುಲಭವಾದ್ದರಿಂದ, ನಾವು ಸಂಕೇತ ಮತ್ತು ಸತ್ಯಗಳನ್ನು ಬೆರಸಿ ಗೊಂದಲಗೊಂಡು ಸತ್ಯಕ್ಕೆ ಬದಲಾಗಿ ಸಂಕೇತವನ್ನು ಒಪ್ಪಿಕೊಂಡು ಬಿಡುತ್ತೇವೆ. ಈ ಗೊಂದಲಗಳಿಂದ ನಮ್ಮನ್ನು ಪಾರುಮಾಡುವುದು ಪೌರ್ವಾತ್ಯ ಆಧ್ಯಾತ್ಮಿಕತೆಯ ಮುಖ್ಯ ಗುರಿಗಳಲ್ಲೊಂದು.

ಭಾಷೆಯನ್ನು ಸತ್ಯವನ್ನು ತಿಳಿಯುವ ಸಾಧನವಾಗಿ ಮಾತ್ರ ಗ್ರಹಿಸುವ ಬಗ್ಗೆ ಝೆನ್ ಬೌದ್ಧರು ಹೀಗೆ ಹೇಳುತ್ತಾರೆ ಚಂದ್ರನೆಡೆಗೆ ಬೆರಳು ತೋರಿಸಲು ಬೆರಳು ಬೇಕು, ಆದರೆ ಒಮ್ಮೆ ಚಂದ್ರನನ್ನು ನೋಡಿ ಗುರ್ತಿಸಿದ ಮೇಲೆ ಬೆರಳಿನ ಬಗ್ಗೆ ನಾವು ತಲೆಕೆಡಿಸಿಕೊಳ್ಳಬೇಕಿಲ್ಲ.

ತಾವೋವಾದಿ ಋಷಿ ಚುವಾಂಗ್ ತ್ಸು ಬರೆಯುತ್ತಾನೆ: "ಮೀನು ಹಿಡಿಯಲು ಬುಟ್ಟಿಗಳನ್ನು ಬಳಸುತ್ತೇವೆ. ಆದರೆ ಮೀನು ಹಿಡಿದ ಮೇಲೆ ಜನ ಬುಟ್ಟಿಗಳನ್ನು ಮರೆತುಬಿಡುತ್ತಾರೆ. ಮೊಲ ಹಿಡಿಯಲು ಬಲೆಗಳನ್ನು ಬಳಸುತ್ತಾರೆ, ಆದರೆ ಮೊಲ ಹಿಡಿದ ಮೇಲೆ ಜನ ಬಲೆಗಳನ್ನು ಮರೆತುಬಿಡುತ್ತಾರೆ. ಭಾವನೆಗಳನ್ನು ತಿಳಿಸಲೂ ಮಾತುಗಳನ್ನು ಬಳಸುತ್ತೇವೆ, ಆದರೆ ಭಾವನೆಗಳನ್ನು ಅರಿತ ಮೇಲೆ ಜನ ಮಾತುಗಳನ್ನು ಮರೆಯುತ್ತಾರೆ".*

"ನಕ್ಷೆಯು ಭೂಪ್ರದೇಶವಲ್ಲ" ಎಂಬ ತನ್ನ ಪ್ರಸಿದ್ಧ ಘೋಷವಾಕ್ಯದಲ್ಲಿ ವಾಕ್ಯ ವಿಜ್ಞಾನಿ ಅಲ್‌ಫ್ರೆಡ್ ಕೋರ್ಸ್‌ಬಿಸ್ಕಿ ಇದೇ ಭಾವನೆಯನ್ನು ಹೇಳಲು ಪ್ರಯತ್ನಿಸುತ್ತಾನೆ. ಪೌರ್ವಾತ್ಯ ಅನುಭಾವಿಗಳ ಕಾಳಜಿ ಇರುವುದು ಸತ್ಯದ ನೇರ ಅನುಭವಗಳನ್ನು ಅನುಭವವಾಗಿಯೇ ಗ್ರಹಿಸುವುದರಲ್ಲಿ; ಅನುಭವವು ಕೇವಲ ಬೌದ್ಧಿಕ ಗ್ರಹಿಕೆಯಲ್ಲ, ಐಂದ್ರಿಯಕವೂ ಹೌದು.

ಉಪನಿಷತ್ತುಗಳಲ್ಲಿ"ಯಾವುದು ಶಬ್ದವಲ್ಲವೋ, ಸ್ಪರ್ಶವಲ್ಲವೋ, ರೂಪವಲ್ಲವೋ, ಅಕ್ಷಯವೋ, ರುಚಿರಹಿತವೋ, ಶಾಶ್ವತವೋ, ವಾಸನಾರಹಿತವೋ, ಅನಾದಿಯೋ, ಅನಂತವೋ, ಅತ್ಯತಿಷ್ಠದ್ದಶಾಂಗುಲವೋ (Higher than the Highest) ಅಚಲವೋ ಅಂಥದನ್ನು ಪಡೆಯುವುದರಿಂದ ಮಾನವನು ಮೃತ್ಯುವಿನಿಂದ ಮುಕ್ತನಾಗುತ್ತಾನೆ" ಎಂದು ಹೇಳಿದೆ. (ಕಠೋಪನಿಷತ್ತು)

ಇಂಥ ಅನುಭವದಿಂದ ಬರುವ ಜ್ಞಾನವನ್ನೇ ಬೌದ್ಧರು ಸಮ್ಯಕ್ ಜ್ಞಾನ (Absolute Knowledge) ಎಂದು ಕರೆಯುತ್ತಾರೆ ಏಕೆಂದರೆ ಈ ಜ್ಞಾನವು ತರತಮದ ಮೇಲಾಗಲೀ ಅಮೂರ್ತದ ಮೇಲಾಗಲೀ, ವರ್ಗೀಕರಣದ ಮೇಲಾಗಲೀ ನಿಂತಿಲ್ಲ. ಬೌದ್ಧರ ಪ್ರಕಾರ ಜ್ಞಾನವು ವಿಭಜನಗೊಳ್ಳದ ತರತಮರಹಿತವಾದ ಅಖಂಡ ಸತ್ಯ. ಈ ಸತ್ಯದ ಸಂಪೂರ್ಣವಾದ ಅರಿವು ಪೌರ್ವಾತ್ಯ ಅನುಭಾವದ ತಿರುಳು ಮತ್ತು ಎಲ್ಲ ಅನುಭಾವದ ವಿಶಿಷ್ಟ ಅಂಶವಾಗಿದೆ.

ಪೌರ್ವಾತ್ಯ ಅನುಭಾವಿಗಳು ಆತ್ಯಂತಿಕ ಸತ್ಯವು ಬುದ್ಧಿಗಾಗಲೀ, ತರ್ಕಕ್ಕಾಗಲೀ ನಿಲುಕದು ಎಂಬ ಅಂಶವನ್ನು ಒತ್ತಿ ಒತ್ತಿ ಹೇಳುತ್ತಾರೆ. ಅದನ್ನು ಪದಗಳಿಂದ

---

* ಹೋಲಿಸಿ: ಹಣ್ಣು ಬಿಟ್ಟ ಬಳಿಕ ಮರವನಾರು ತರಿದರೇನು
ಹೆಣ್ಣ ಬಿಟ್ಟ ಬಳಿಕ ಆಕೆಯನಾರು ಕೂಡಿಕೊಂಡರೇನು
ಚೆನ್ನಮಲ್ಲಿಕಾರ್ಜುನನರಿದ ಬಳಿಕ ಆ ಕಾಯವ ನಾಯಿ ತಿಂದರೇನು ?
ನೀರು ಕುಡಿದರೇನು ? —ಮಹದೇವಿಯಕ್ಕ.

ವಿವರಿಸಲು ಅಸಾಧ್ಯ, ಏಕೆಂದರೆ ಅದು ಇಂದ್ರಿಯ ಗ್ರಾಹ್ಯವಾದುದಲ್ಲ, ಬುದ್ಧಿ ಗಮ್ಯವಾದುದಲ್ಲ. ಭಾವನೆಗೆ ಕಲ್ಪನೆಗೆ ನಿಲುಕುವಂಥದಲ್ಲ ಇದನ್ನೇ ಉಪನಿಷತ್ತುಗಳು

ಅಲ್ಲಿ ಕಣ್ಣು ಹೋಗದು
ಮಾತು ಹೋಗದು ಮನ ಹೋಗದು
ನಾವು ಅರಿಯೆವು, ನಾವು ತಿಳಿಯೆವು
ಅದನ್ನು ಹೇಗೆ ಕಲಿಸುವುದೆಂದು. (ಕೇನೋಪನಿಷತ್ತು)

ಈ ಅತ್ಯಂತಿಕ ಸತ್ಯವನ್ನು ತಾವೋ ಎಂದೂ ಕರೆಯುವ ಲಾವೋತ್ಸು ಇದೇ ವಿಷಯವನ್ನು 'ತಾವೋ ತೆ ಚಿಂಗ್'ದ ಪ್ರಾರಂಭದ ಸಾಲಿನಲ್ಲಿ ಹೇಳುತ್ತಾನೆ: "ಮಾತಿನಿಂದ ವ್ಯಕ್ತಪಡಿಸಬಹುದಾದ ತಾವೋ ಶಾಶ್ವತ ತಾವೋ ಅಲ್ಲ".

ಈ ಮಾತು ನಮಗೆ ವೃತ್ತಪತ್ರಿಕೆಗಳನ್ನು ನೋಡಿದರೆ ಸುವಿದಿತವಾಗುತ್ತದೆ. ಕಳೆದ ಎರಡು ಸಾವಿರ ವರ್ಷಗಳಲ್ಲಿ ಮನುಕುಲವೇನೂ ಹೆಚ್ಚಿನ ತಿಳುವಳಿಕೆಯನ್ನು ಪಡೆದುಕೊಂಡಿಲ್ಲ. ವೈಚಾರಿಕತೆ ವೃದ್ಧಿಸಿದ್ದರೂ ಎಲ್ಲ ತಿಳುವಳಿಕೆಯನ್ನು ಕೇವಲ ಮಾತಿನ ಮೂಲಕ ಸಂವಹನಗೊಳಿಸುವುದು ಅಸಾಧ್ಯವೇ ಆಗಿದೆ. ಚುವಾಂಗ್ ತ್ಸು ಹೇಳುವಂತೆ **"ಅದರ ಬಗ್ಗೆ** ಹೇಳುವುದು ಸಾಧ್ಯವಿದ್ದಿದ್ದರೆ ಪ್ರತಿಯೊಬ್ಬನೂ ತನ್ನ ಸೋದರನಿಗೆ ಹೇಳಿರುತ್ತಿದ್ದ".

ಹೀಗೆ ಸಮ್ಯಗ್ ಜ್ಞಾನವು ಸಂಪೂರ್ಣವಾಗಿ ಅಬೌದ್ಧಿಕವಾದ ಸತ್ಯದ ಅನುಭವವಾಗಿದೆ. ಅಸಾಧಾರಣವಾದ ಪ್ರಜ್ಞೆಯ ಸ್ಥಿತಿಯಲ್ಲಿ ಹುಟ್ಟುವ-ಧ್ಯಾನಲೀನ-ಅನುಭಾವಿಕ ಅನುಭವ ಈ ಸ್ಥಿತಿಯ ರಚನೆಯಲ್ಲಿದೆ ಎಂಬುದನ್ನು ಪೌರ್ವಾತ್ಯ ಮತ್ತು ಪಾಶ್ಚಾತ್ಯ ಅನುಭಾವಿಗಳಷ್ಟೇ ಅಲ್ಲ ಮನಶ್ಶಾಸ್ತ್ರೀಯ ಸಂಶೋಧನೆ ಕೂಡಾ ದೃಢಪಡಿಸುತ್ತದೆ. ವಿಲಿಯಂ ಜೇಮ್ಸ್‌ನ ಮಾತಿನಲ್ಲಿ "ನಮ್ಮ ಸಾಮಾನ್ಯವಾದ ಎಚ್ಚತ್ತ ಪ್ರಜ್ಞೆಯನ್ನು ನಾವು ವೈಚಾರಿಕ ಪ್ರಜ್ಞೆ ಎಂದು ಕರೆಯಬಹುದು. ಅತ್ಯಂತ ತೆಳುವಾದ ಆವರಣವೊಂದರ ಹಿಂದೆ ಅತ್ಯಂತ ಶಕ್ತಿಪೂರ್ಣವೂ ಇದಕ್ಕಿಂತ ಸಂಪೂರ್ಣ ಭಿನ್ನವೂ ಆದ ಪ್ರಜ್ಞೆಯೊಂದಿದೆ".

ಭೌತಶಾಸ್ತ್ರಗಳಿಗೆ ಕೇವಲ ವೈಜಾರಿಕ ಜ್ಞಾನದ ಬಗ್ಗೆ ಅನುಭಾವಿಗಳಿಗೆ ಕೇವಲ ಅಂತಸ್ಫೂರ್ತ ಜ್ಞಾನದ ಬಗ್ಗೆ ಮಾತ್ರ ಕಾಳಜಿ ಇರುವುದಾದರೂ ಈ ಎರಡು ಕ್ಷೇತ್ರಗಳಲ್ಲಿ ಎರಡು ಬಗೆಯ ಜ್ಞಾನಗಳೂ ಸಾಧ್ಯವಾಗುತ್ತವೆ. ಅನುಭಾವದಲ್ಲಾಗಲೀ ಭೌತವಿಜ್ಞಾನದಲ್ಲಾಗಲೀ ಜ್ಞಾನವನ್ನು ಪಡೆವ, ಅಭಿವ್ಯಕ್ತಿಸುವ ರೀತಿಯನ್ನು ನಾವು ಪರಿಶೋಧಿಸಿದರೆ ಈ ವಿಷಯ ಸ್ಪಷ್ಟವಾಗುತ್ತದೆ. ಭೌತವಿಜ್ಞಾನದಲ್ಲಿ ವೈಜ್ಞಾನಿಕ

ಸಂಶೋಧನೆಯು ಮೂಲಕ ಜ್ಞಾನವನ್ನು ಪಡೆಯಲಾಗುತ್ತದೆ. ಮತ್ತು ಅದರಲ್ಲಿ ಮೂರು ಹಂತಗಳನ್ನು ಕಾಣಬಹುದು. ಮೊದಲ ಹಂತ ವಿವರಿಸಬೇಕಾಗಿರುವ ವೈಜ್ಞಾನಿಕ ಪ್ರಕ್ರಿಯೆಯ ಕುರಿತು ಪ್ರಾಯೋಗಿಕ ಸಾಕ್ಷ್ಯದ ಸಂಗ್ರಹ. ಎರಡನೇ ಹಂತ ಪ್ರಾಯೋಗಿಕ ಫಲಿತಾಂಶಗಳನ್ನು ಸಂಕೇತ ಭಾಷೆಯಲ್ಲಿ ಸಂಗ್ರಹಿಸಿ ನಿಖರವಾದ ಸಮಂಜಸವಾದ ರೀತಿಯಲ್ಲಿ ಆ ಸಂಕೇತಗಳನ್ನು ಪರಸ್ಪರ ಸಂಬಂಧಿಸುವಂತೆ ನಿಯೋಜಿಸುವುದು. ಆಗ ಒಂದು ಗಣಿತಶಾಸ್ತ್ರೀಯ ಮಾದರಿ (Mathematical Model) ಸಿದ್ಧಗೊಳ್ಳುತ್ತದೆ. ಅದು ಹೆಚ್ಚು ವ್ಯಾಪ್ತಿಯನ್ನುಳ್ಳದ್ದಾಗಿದ್ದರೆ ಸಿದ್ಧಾಂತವೆನ್ನಲಾಗುವುದು. ಆ ಸಿದ್ಧಾಂತವನ್ನು ನಂತರ ಅದರ ಎಲ್ಲ ಪರಿಣಾಮಗಳನ್ನು ಪರೀಕ್ಷಿಸಲು ನಿಯೋಜಿಸಿದ ಮುಂದಿನ ಪ್ರಯೋಗಗಳ ಫಲಿತಾಂಶಗಳನ್ನು ಊಹಿಸಲು (Predict) ಬಳಸಲಾಗುವುದು. ವಿಜ್ಞಾನಿಗಳು ತಮ್ಮ ಫಲಿತಾಂಶಗಳನ್ನು ಜನಸಾಮಾನ್ಯರಿಗೆ ಅರ್ಥವಾಗುವಂತೆ ವಿವರಿಸಬೇಕಾಗಿರುವುದರಿಂದ ಕೊನೆಯಲ್ಲಿ ಮೂರನೆ ಹಂತವಾಗಿ ಇದನ್ನು ಸಾಮಾನ್ಯ ಭಾಷೆಯಲ್ಲಿ ಹೇಳಬೇಕಾಗುವುದು. ಸಾಮಾನ್ಯ ಭಾಷೆಯಲ್ಲಿ ಅವರ ಸೈದ್ಧಾಂತಿಕ ಗಣಿತವನ್ನು ವಿವರಿಸುವ ಭಾಷಿಕ ಮಾದರಿಯನ್ನು ತಯಾರಿಸಿ- ಕೊಳ್ಳುವುದು ಭೌತವಿಜ್ಞಾನಿಗಳಿಗೆ ಸಹಾ ಸಂಶೋಧನೆಯ ಅಂತಿಮ ಹಂತವಾಗಿ- ರುವುದರ ಜೊತೆಗೆ ಅವರು ಪಡೆದ ತಿಳುವಳಿಕೆಗೆ ಒರೆಗಲ್ಲು ಆಗಿರುತ್ತದೆ.

ಈ ಮೂರು ಹಂತಗಳು ಆಚರಣೆಯಲ್ಲಿ ಪ್ರತ್ಯೇಕವಾಗಿ, ಅದೇ ಕ್ರಮದಲ್ಲೇ ಹಂತಹಂತವಾಗಿ ಘಟಿಸಬೇಕೆಂದೇನಿಲ್ಲ. ತತ್ವವು ಪ್ರಯೋಗ ಫಲಿತಾಂಶಗಳಿಗೆ ಹೊಂದದಿದ್ದಲ್ಲಿ ಭೌತವಿಜ್ಞಾನಿ ತತ್ವವನ್ನು ಫಲಿತಾಂಶಕ್ಕೆ ಹೊಂದುವಂತೆ ಸುಧಾರಿಸಬಹುದು. ಆಗಲೂ ತತ್ವವು ಫಲಿತಾಂಶದಿಂದ ಭಿನ್ನವೇ ಆಗಿದ್ದಲ್ಲಿ ತತ್ವವನ್ನು ತೊರೆಯಲೂ ಬಹುದು. ಈ ವಿಧಾನವನ್ನು ವೈಜ್ಞಾನಿಕ ವಿಧಾನ ಎಂದು ಕರೆಯುತ್ತಾರೆ. ಇದರಲ್ಲಿ ಎಲ್ಲ ತತ್ವಗಳೂ ಪ್ರಯೋಗಾಧಾರಿತವಾಗಿವೆ. ಇದಕ್ಕೆ ಪೂರಕವಾದ ಅನೇಕ ಅಂಶಗಳನ್ನು ಪೌರ್ವಾತ್ಯ ತತ್ವವಿಜ್ಞಾನ ಗ್ರೀಕ್ ತತ್ವಜ್ಞಾನ- ಗಳಲ್ಲಿ ಕಾಣಬಹುದು.

ವೈಚಾರಿಕ ಜ್ಞಾನ ಮತ್ತು ಚಟುವಟಿಕೆಗಳು ವೈಜ್ಞಾನಿಕ ಸಂಶೋಧನೆಯ ಬಹುಮುಖ್ಯ ಅಂಶ, ಆದರೆ ಸರ್ವಸ್ವವಲ್ಲ. ಸಂಶೋಧನೆಯ ವೈಚಾರಿಕ ಅಂಶವು ಅಂತಃಸ್ಫುರಣದಿಂದ ಬೆಳಗದಿದ್ದರೆ ನಿಷ್ಫಲವಾಗುತ್ತದೆ. ವಿಜ್ಞಾನಿಗಳಿಗೆ ಸೃಷ್ಟ್ಯಾತ್ಮಕ ಪ್ರೇರಣೆಗಳನ್ನು ನೀಡಿ ಅವರನ್ನು ಸೃಜನಶೀಲರನ್ನಾಗಿ ಮಾಡುವುದು ಈ ಅಂತಃಸ್ಫುರಣ. ಈ ಒಳತಿಳುವು ಹಠಾತ್ತಾಗಿ ಮತ್ತು ಆಕಸ್ಮಿಕವಾಗಿ ಹುಟ್ಟುತ್ತದೆ; ಪಟ್ಟಾಗಿ ಕುಳಿತು ಓದಿ, ಬರೆದು, ತಿಣುಕಿ ಧ್ಯಾನಿಸುವಾಗ ಅಲ್ಲ. ಕಾಡಿನದ್ದಾರಿಗಳಲ್ಲಿ

ನಡೆಯುವಾಗ, ಸ್ನಾನದ ತೊಟ್ಟಿಯಲ್ಲಿ, ಸಮುದ್ರ ತೀರದ ಮರಳಿನ ಮೇಲೆ ವಿಶ್ರಮಿಸುವಾಗ ಒಳತಿಳಿವು ಎಚ್ಚತ್ತು ಹಠಾತ್ ಹೊಳಹುಗಳಾಗಿ ಬೆಳಗಿ ಸಂಶೋಧನೆಯ ಆನಂದ ವೃದ್ಧಿಸುತ್ತದೆ.

ಹೀಗೇ ಅಂತಃಸ್ಫುರಣವೂ ಗಣಿತ ಮಾದರಿಯ ಚೌಕಟ್ಟಿನಲ್ಲಿ ಒಡಮೂಡದೆ ಸಾಮಾನ್ಯ ಭಾಷೆಯಲ್ಲಿ ನಿರೂಪಿತವಾಗದೆ ಹೊಳಹಿನ ರೂಪದಲ್ಲೇ ಇದ್ದಲ್ಲಿ ವಿಜ್ಞಾನಕ್ಕೆ ಅದರಿಂದ ಏನೂ ಪ್ರಯೋಜನವಿಲ್ಲ. ನಿಜ, ಅಮೂರ್ತತೆಯೇ ಈ ಚೌಕಟ್ಟಿನ ವಿಶಿಷ್ಟತೆ. ಇಲ್ಲಿನ ಪರಿಕಲ್ಪನೆ, ಸಂಕೇತಗಳನ್ನು ನಾವು ವೈಜ್ಞಾನಿಕ ವಿಶ್ಲೇಷಣೆಗೊಳಪಡಿಸದೆ ಚಿಕ್ಕಂದಿನಿಂದಲೂ ಒಪ್ಪಿಕೊಂಡು ಪ್ರಜ್ಞೆಯಲ್ಲಿ ಶೇಖರಿಸಿಕೊಳ್ಳುತ್ತ ಬಂದಿದ್ದೇವೆ. ಅಲ್ಲದೆ ಇದರ ನಿರೂಪಣೆಗಾಗಿ ನಾವು ಬಳಸುವ ಭಾಷೆಯಲ್ಲಿ ಪದಗಳ ಅರ್ಥಗಳು ಖಚಿತವಾಗಿ ಮಿತಿಗೊಳಪಟ್ಟಿಲ್ಲ. ಅನೇಕಾರ್ಥಗಳನ್ನು ಹೊಂದಿದ ಈ ಪದಗಳು ಕೇವಲ ಅಸ್ಪಷ್ಟವಾಗಿ ನಮ್ಮ ಮನಸ್ಸಿನ ಮೂಲಕ ಹಾದುಹೋಗುತ್ತವೆ ಮತ್ತು ಒಂದು ಪದವನ್ನು ಕೇಳಿದಾಗ ಆ ಅಸ್ಪಷ್ಟವಾದ ಅರ್ಥ ನಮ್ಮ ಸುಪ್ತಪ್ರಜ್ಞೆಯಲ್ಲಿ ಉಳಿದಿರುತ್ತದೆ. ಭಾಷೆಯ ಈ ಅಸ್ಪಷ್ಟತೆ ಅನೇಕಾರ್ಥಗಳನ್ನು ಹೊಮ್ಮಿಸುವ ಶಕ್ತಿ ಕವಿಗಳಿಗೆ ಅವಶ್ಯಕ, ಪ್ರಿಯ. ಆದರೆ ಖಚಿತ ಫಲಿತಾಂಶ ಖಚಿತ ಅಭಿವ್ಯಕ್ತಿ ಖಚಿತ ಅರ್ಥದ ಭಾಷಾರಚನೆಯನ್ನು ಸಾಧಿಸಲು ಹೊರಡುವ ವಿಜ್ಞಾನಿಗೆ ಅಪ್ರಯೋಜಕ. ಆದ್ದರಿಂದ ವಿಜ್ಞಾನವು ತರ್ಕದ ನಿಯಮಗಳಿಗೆ ಭಾಷೆಯನ್ನೊಗ್ಗಿಸಿ ಭಾಷೆಯನ್ನು ಇನ್ನೂ ಅಸ್ಪಷ್ಟವಾಗಿಸುತ್ತದೆ. ಇದರ ಶಿಖರಸ್ಥಿತಿಯನ್ನು ನಾವು ಗಣಿತದಲ್ಲಿ ನೋಡಬಹುದು. ಗಣಿತದಲ್ಲಿ ಪದಗಳ ಬದಲಾಗಿ ಸಂಕೇತಗಳನ್ನು ಬಳಸಿ ಆ ಸಂಕೇತಗಳ ಅಂತಸ್ಸಂಬಂಧ, ವ್ಯವಹಾರಗಳನ್ನು ಬಹುಖಚಿತವಾಗಿ ನಿಯಮಿತವಾಗಿ ವಿವರಿಸಲಾಗಿದೆ. ಈ ವಿಧಾನದಿಂದ ವಿಜ್ಞಾನಿಗಳು ಸಾಮಾನ್ಯವಾಗಿ ಅನೇಕ ಪುಟಗಳು ಬೇಕಾಗುವ ವಿಷಯಗಳನ್ನು ಒಂದೇ ಸೂತ್ರದಲ್ಲಿ ಸಂಕೇತಗಳ ಒಂದೇ ಒಂದು ಸಾಲಿನಲ್ಲಿ ಕ್ರೋಢೀಕರಿಸಿ ಹೇಳಬಲ್ಲರು.

ಗಣಿತಶಾಸ್ತ್ರವು ಕೇವಲ ಅಮೂರ್ತವಾದ ಕ್ರೋಢೀಕೃತ ಭಾಷೆ ಎಂಬ ಅಭಿಪ್ರಾಯವನ್ನು ಎಲ್ಲರೂ ಒಪ್ಪುವುದಿಲ್ಲ. ಅನೇಕ ಗಣಿತ ಶಾಸ್ತ್ರಜ್ಞರು ಗಣಿತವು ಕೇವಲ ಪ್ರಕೃತಿಯ ಸ್ವರೂಪವನ್ನು ವಿವರಿಸುವ ಭಾಷೆಯಲ್ಲ; ಅದು ಪ್ರಕೃತಿಯಲ್ಲೇ ಅಂತರ್ನಿಹಿತವಾಗಿದೆ ಎಂದು ನಂಬುತ್ತಾರೆ. ಈ ನಂಬುಗೆಯನ್ನು ಮೊದಲು ಪ್ರತಿಪಾದಿಸಿದವನು ಪೈಥಾಗೊರಾಸ್. ಎಲ್ಲ ವಸ್ತುಗಳೂ ಸಂಖ್ಯೆಗಳೇ ಎಂಬುದು ಅವನ ಪ್ರಸಿದ್ಧ ಹೇಳಿಕೆ. ಅವನು ಬೆಳಸಿದ ವಿಶಿಷ್ಟ ಗಣಿತ ಪದ್ಧತಿ ಪೈಥಾಗೊರಾಸನ ತತ್ವಜ್ಞಾನ ಎನಿಸಿಕೊಂಡಿತು. ಪೈಥಾಗೊರಾಸ್ ಆಧ್ಯಾತ್ಮದ ಸಾಮ್ರಾಜ್ಯಕ್ಕೆ ತಾರ್ಕಿಕ

ವಿಚಾರವನ್ನು ಪ್ರವೇಶಪಡಿಸಿದ. ಬರ್ಟ್ರ್ಯಾಂಡ್ ರಸೆಲ್ಲನ ಪ್ರಕಾರ ಈ ಬೆಳವಣಿಗೆ ಪಾಶ್ಚಿಮಾತ್ಯ ಧಾರ್ಮಿಕ ತತ್ವಜ್ಞಾನದ ಒಂದು ನಿರ್ಣಾಯಕ ಘಟ್ಟವಾಗಿದೆ.

"ಪೈಥಾಗೊರಾಸನಿಂದ ಆರಂಭಗೊಂಡ ವಿಜ್ಞಾನ ಮತ್ತು ದೈವಶಾಸ್ತ್ರಗಳ ಬೆಸುಗೆ (ಗಣಿತ ಶಾಸ್ತ್ರ ಮತ್ತು ಧಾರ್ಮಿಕತೆ) ಗ್ರೀಸ್‌ನಲ್ಲಿ ಧಾರ್ಮಿಕ ತತ್ವ ಜ್ಞಾನಕ್ಕೆ ಒಂದು ವಿಶಿಷ್ಟ ಸ್ವರೂಪವನ್ನು ಕೊಟ್ಟಿತು. ಮಧ್ಯಯುಗದಲ್ಲಿ ಮತ್ತು ಆಧುನಿಕ ಯುಗದಲ್ಲಿ ಕೂಡ ಕ್ಯಾಂಟ್‌ನವರೆಗೆ ಪ್ಲೇಟೋ, ಸೆಂಟ್ ಅಗಸ್ಟೀನ್ ಥಾಮಸ್ ಅಕ್ವಿನಾಸ್, ಡೆಕಾರ್ಟೆ, ಸ್ಪಿನೋಜಾ ಮತ್ತು ಲೀಬ್ನಿಜ್ ಈ ಎಲ್ಲ ತತ್ವಜ್ಞಾನ ಗಳಲ್ಲಿ ಧಾರ್ಮಿಕತೆ ಮತ್ತು ವೈಚಾರಿಕತೆಗಳ ಸಮ್ಮಿಲನವನ್ನು ಕಾಣಬಹುದು. ಪೈಥಾಗೊರಾಸನಿಂದ ಆರಂಭಗೊಂಡ ಮನುಷ್ಯನ ಕಾಲಾತೀತವಾದ ನೈತಿಕ ಆಶೋತ್ತರಗಳ ತಾರ್ಕಿಕ ಮೆಚ್ಚುಗೆ ಯೂರೋಪಿನ ಬೌದ್ಧಿಕ ಧಾರ್ಮಿಕ ಚಿಂತನವನ್ನು ಏಷ್ಯಾದ ಹೆಚ್ಚು ನೇರವಾದ ಧಾರ್ಮಿಕ ಚಿಂತನದಿಂದ ಸಾಕಷ್ಟು ಸ್ಪಷ್ಟವಾಗಿ ಬೇರೆಮಾಡಿದೆ".*

ರಸೆಲ್ ಹೇಳಿದ 'ಹೆಚ್ಚು ನೇರವಾದ ಏಷ್ಯಾದ ಧಾರ್ಮಿಕ ಚಿಂತನ'ವು ಪೈಥಾಗೊರಾಸನಿಗೆ ಸಮಾನಾಂತರವಾಗಿ ಯೋಚಿಸುವುದಿಲ್ಲ. ಪೌರ್ವಾತ್ಯ ತತ್ವಜ್ಞಾನಿಗೆ ಗಣಿತ ಶಾಸ್ತ್ರವು ತತ್ವಜ್ಞಾನದ ಒಂದು ಅತಿ ಸೂಕ್ಷ್ಮ ಹಾಗೂ ಸಮರ್ಥ ಅಂಗವಷ್ಟೇ. ಅದೇ ಸತ್ಯದ ರೂಪವಲ್ಲ. ಅನುಭಾವಿಗೆ ಸತ್ಯವು ಸಂಪೂರ್ಣವಾಗಿ ಅನಿರ್ವಚನೀಯ ಮತ್ತು ಅಖಂಡ. ವೈಜ್ಞಾನಿಕ ವಿಧಾನ ದಕ್ಕಿಸಿಕೊಡುವ ಅಮೂರ್ತತೆ ಬಹಳ ಸಮರ್ಥವೂ ಶಕ್ತಿಶಾಲಿಯೂ ಆಗಿದೆ. ಆದರೆ ಅದಕ್ಕೆ ತೆರಬೇಕಾದ ಬೆಲೆಯೂ ಅಷ್ಟೇ ದೊಡ್ಡದು. ಬಳಕೆಯ ಭಾಷೆಗೆ ಇರುವ ಸ್ಥಿತಿಸ್ಥಾಪಕ ಶಕ್ತಿಯನ್ನು ಅದು ನಾಶಮಾಡಿ ಹಾಕುತ್ತದೆ. ಬಳಕೆಯ ಭಾಷೆಯು ಎಷ್ಟೇ ಪೇಲವವಾಗಿಯಾದರೂ ಅನುಭವದ ಏರಿಳಿವುಗಳನ್ನು ಗುರುತಿಸಬಲ್ಲ ಸ್ಥಿತಿಸ್ಥಾಪಕ ಗುಣಗಳನ್ನು ಹೊಂದಿದೆ. ಅದನ್ನು ಖಚಿತಗೊಳಿಸಲು ನಿರ್ದಿಷ್ಟಗೊಳಿಸಲು ಹೊರಟಾಗ ಸ್ಥಿತಿಸ್ಥಾಪಕತೆ ನಾಶವಾಗುತ್ತದೆ. ಆದ್ದರಿಂದಲೇ ನಾವು ಗಣಿತದ ತಾತ್ವಿಕ ಮಾದರಿಗಳನ್ನು ಮಾಮೂಲು ಭಾಷೆಯಲ್ಲಿ ಮತ್ತೆ ವಿವರಿಸಬೇಕಾಗುತ್ತದೆ.

3

ವಿಜ್ಞಾನದಲ್ಲಿ ಒಳತಿಳಿವಿನ ಒಂದಂಶವಿರುವಂತೆ ಪೌರ್ವಾತ್ಯ ಅನುಭಾವ ಪಂಥದಲ್ಲಿ ವೈಚಾರಿಕವಾದ ತರ್ಕದ ಒಂದಂಶವೂ ಇದೆ. ಆದರೆ ಈ ಎರಡೂ ಶಿಸ್ತುಗಳಲ್ಲಿ ವೈಚಾರಿಕತೆಗೆ ಕೊಡುವ ಒತ್ತು ಮಾತ್ರ ಬೇರೆ ಬೇರೆಯಾಗಿದೆ. ಹಿಂದೂ

---

* History of Western Philosophy. —*Bertrand Russel*

ವೇದಾಂತ ಬೌದ್ಧರ ಮಾಧ್ಯಮಿಕ ಇವೆಲ್ಲ ಅತ್ಯಂತ ಹೆಚ್ಚಿನ ಮಟ್ಟದ ಬೌದ್ಧಿಕ ಜ್ಞಾನವನ್ನು ಹೇಳುವ ಅರಿವಿನ ಶಾಖೆಗಳು. ಆದರೆ ತಾವೋವಾದ ತರ್ಕ ಮತ್ತು ವಿಚಾರವನ್ನು ಅನುಮಾನದಿಂದಲೇ ನೋಡುತ್ತದೆ. ಝೆನ್ ಪಂಥವು ಬೌದ್ಧಧರ್ಮ ದಿಂದಲೇ ಹೊರಟರೂ ತಾವೋದಿಂದ ತುಂಬ ಪ್ರಭಾವಿತವಾಗಿದೆ. ತಾನು"ಪದಗಳಿಲ್ಲದೆ ವಿವರಣೆ ಇಲ್ಲದೆ, ಬೋಧನೆಯಿಲ್ಲದೆ, ಜ್ಞಾನವಿಲ್ಲದೆ, ಇರುವುದರ" ಬಗ್ಗೆ ತಾವೋ ವಾದ ಹೆಮ್ಮೆ ಪಡುತ್ತದೆ. ತಾವೋವಾದಕ್ಕೆ ಬೆಳಕನ್ನು ಪಡೆದುಕೊಳ್ಳುವುದು, ಅನುಭವಿಸುವುದು ಮುಖ್ಯ. ಆ ಅನುಭವದ ವಿಶ್ಲೇಷಣೆ ವಿವರಣೆಗಳಲ್ಲಿ ಅದಕ್ಕೆ ಆಸಕ್ತಿ ಕಡಿಮೆ. ಒಂದು ಪ್ರಸಿದ್ಧ ಝೆನ್ ಹೇಳಿಕೆ– "ನೀನು ಅನುಭವದ ಬಗ್ಗೆ ನುಡಿದ ಕ್ಷಣದಲ್ಲೇ ಅದನ್ನು ಕಳೆದುಕೊಳ್ಳುತ್ತೀಯ".

ಅನುಭವದ ವಿಶ್ಲೇಷಣೆ ವಿವರಣೆಗಳ ಬಗ್ಗೆ ಉಳಿದ ಆಧ್ಯಾತ್ಮಿಕ ಶಾಖೆಗಳು ಇಷ್ಟು ಅತಿಗೆ ಹೋಗುವುದಿಲ್ಲವಾದರೂ ಅವುಗಳ ಅಂತರ್ಯದಲ್ಲಿರುವುದೂ ನೇರವಾದ ಆಧ್ಯಾತ್ಮಿಕ ಅನುಭವವೇ. ಅತ್ಯಂತ ಸೂಕ್ಷ್ಮವಾದ ಬೌದ್ಧಿಕ ಚರ್ಚೆಯಲ್ಲಿ ತೊಡಗಿರುವ ಅನುಭಾವಿಗಳು ಸಹಾ ತಮ್ಮ ಜ್ಞಾನದ ಸ್ರೋತವು ಬುದ್ಧಿಯೆಂದು ತಿಳಿಯುವುದಿಲ್ಲ. ಕೇವಲ ಅನುಭಾವದ ವೈಯುಕ್ತಿಕ ಅನುಭವದ ವಿಶ್ಲೇಷಣೆ ವಿವರಣೆಗಾಗಿ ಬುದ್ಧಿಯನ್ನು ಬಳಸುತ್ತಾರೆ. ಎಲ್ಲ ಜ್ಞಾನಕ್ಕೂ ಈ ಅನುಭವವೇ ಭದ್ರ ಬುನಾದಿಯಾಗಿದೆ. ಇದು ಪೌರ್ವಾತ್ಯ ಆಧ್ಯಾತ್ಮಕ್ಕೆ ಒಂದು ದೃಢ ಪ್ರಯೋಗಾಧಾರಿತ ಲಕ್ಷಣವನ್ನು ಕೊಡುತ್ತದೆ. ಡಿ. ಟಿ. ಸುಜುಕಿ ಬೌದ್ಧಧರ್ಮದ ಬಗ್ಗೆ ಬರೆಯುತ್ತ "ವೈಯುಕ್ತಿಕ ಅನುಭವವೇ ಬೌದ್ಧತತ್ವಜ್ಞಾನದ ತಳಹದಿ. ಆ ಅರ್ಥದಲ್ಲಿ ಬೌದ್ಧಧರ್ಮವು ಮೂಲಭೂತವಾಗಿ ಪ್ರಯೋಗಾಧಾರಿತವಾದದ್ದು ಅನುಭವ ಪ್ರಮಾಣವನ್ನುಳ್ಳದ್ದು" ಎನ್ನುತ್ತಾರೆ.

ಜೋಸೆಫ್ ನೀಡ್‌ಹ್ಯಾಂ ತನ್ನ ಕೃತಿ "ಚೈನಾದಲ್ಲಿ ವಿಜ್ಞಾನ ಮತ್ತು ನಾಗರಿಕತೆ" ಯಲ್ಲಿ ತಾವೋವಾದಿಗಳ ಪ್ರಯೋಗಾಧಾರಿತ ಮನೋಧರ್ಮವನ್ನು ಗುರುತಿಸಿ ಇದು ಹೇಗೆ ಚೀನಾದ ವಿಜ್ಞಾನ ಹಾಗೂ ತಂತ್ರಜ್ಞಾನಗಳ ತಳಹದಿಯಾಯಿತೆಂದು ವಿವರಿಸುತ್ತಾನೆ. ಆತನ ಮಾತುಗಳಲ್ಲೇ ಹೇಳವುದಾದರೆ"ಆರಂಭದ ತಾವೋ ತತ್ವಜ್ಞರು ಕಾಡುಗಳಿಗೆ ಪರ್ವತಪ್ರದೇಶಗಳಿಗೆ ಒಳಸರಿದು, ಪ್ರಕೃತಿಯ ಸ್ವರೂಪವನ್ನು ಅದರ ಅನಂತ ಅವತಾರಗಳನ್ನು ಕುರಿತು ಚಿಂತಿಸಿದರು". ಇದೇ ಭಾವನೆ ಝೆನ್ ಕವಿತೆಗಳಲ್ಲಿ ಪ್ರತಿಬಿಂಬಿಸಿದೆ: "ಬುದ್ಧತ್ವವನ್ನು ಅರಿಯಬೇಕೆನ್ನುವವರು ಪ್ರಕೃತಿಯನ್ನು ಪ್ರಕೃತಿಯ ಸಾಧಾರಣ ಅಂಶಗಳನ್ನು ಅರಿಯಬೇಕು".

ಜ್ಞಾನಕ್ಕೆ ಅನುಭವವೇ ಗಟ್ಟಿಯಾದ ತಳಹದಿಯೆನ್ನುವ ಪೌರ್ವಾತ್ಯ ತತ್ವಜ್ಞಾನವು ಪ್ರಯೋಗವೇ ಜ್ಞಾನಕ್ಕೆ ತಳಹದಿಯೆನ್ನುವ ವಿಜ್ಞಾನದ ಧೋರಣೆಗೆ ಸಂವಾದಿಯಾಗಿದೆ. ಆಧ್ಯಾತ್ಮಿಕ ಅನುಭವದ ಸ್ವರೂಪದಿಂದ ಈ ಹೋಲಿಕೆ ಮತ್ತಷ್ಟು ಬಲಗೊಳ್ಳುತ್ತದೆ. ಪೌರ್ವಾತ್ಯ ಪರಂಪರೆಯಲ್ಲಿ ಆಧ್ಯಾತ್ಮಿಕ ಅನುಭವವು ಬುದ್ಧಿಯ ಪರಿಧಿಯನ್ನು ಮೀರಿದ್ದು ತನ್ನೊಳಗನ್ನು ತಾನೆ ಅವಲೋಕಿಸುವುದರಿಂದ ಬರುವಂಥದು.

ತಾವೋವಾದದಲ್ಲಿ ತಾವೋ ದೇವಾಲಯಗಳ ಹೆಸರೇ ಈ ಸ್ವರೂಪವನ್ನು ತಿಳಿಸುವಂತಿದೆ. ಕ್ವಾನ್ (Kuan) ಎಂದರೆ ಮೂಲತಃ ನೋಡು ಎಂದರ್ಥ. ಚಾನ್ ಬೌದ್ಧರಲ್ಲಿ (ಝೆನ್‌ನ ಚೀನೀರೂಪ) ಜ್ಞಾನವನ್ನು ಕೆಲವೊಮ್ಮೆ "ತಾವೋ ದರ್ಶನ" ಎಂದೂ ಕರೆಯುವುದುಂಟು. ಅರಿವಿನ ತಳಹದಿಯೇ ದೃಷ್ಟಿ ಎಂದು ಎಲ್ಲ ಬೌದ್ಧ ಚಿಂತನಗಳೂ ಹೇಳುತ್ತವೆ. ಬುದ್ಧನು ಸಾಕ್ಷಾತ್ಕಾರಕ್ಕೆ ಹೇಳುವ ಅಷ್ಟಪಥಗಳಲ್ಲಿ ಮೊದಲಿನದೇ ಒಳ್ಳೆಯ ದೃಷ್ಟಿ, ಆನಂತರ ಒಳ್ಳೆಯ ತಿಳುವಳಿಕೆ. ಡಿ.ಟಿ. ಸುಜುಕಿ ಆ ಬಗ್ಗೆ ಬರೆಯುತ್ತಾರೆ: 'ಬೌದ್ಧರ ತತ್ವಜ್ಞಾನದಲ್ಲಿ ದೃಷ್ಟಿ ಅಥವಾ ನೋಡುವುದು ಬಹುಮುಖ್ಯ ಪಾತ್ರ ವಹಿಸುತ್ತದೆ. ದೃಷ್ಟಿಯೇ ಅರಿವಿನ ತಳಹದಿ. ಬುದ್ಧನ ಹೇಳಿಕೆಗಳಲ್ಲಿ ನೋಡುವುದು ಅರಿಯುವುದು ಎರಡೂ ಅಭಿನ್ನವಾಗಿದೆ. ಬುದ್ಧನ ತತ್ವಜ್ಞಾನವು ಅಂತಿಮವಾಗಿ ಸತ್ಯವನ್ನು ಅದು ಇರುವಂತೆಯೇ ಕಾಣುವುದನ್ನು ತೋರುತ್ತದೆ'. ನೋಡುವುದು ಎಂದರೆ ಬೆಳಕನ್ನು ಅನುಭವಿಸುವುದು.

ಇಂಥದೇ ಮಾತೊಂದನ್ನು ಯಾಕಿ ಅನುಭಾವಿ ಡಾನ್ ಜುವಾನ್ ಹೇಳುತ್ತಾನೆ: "ನೋಡುವುದರಿಂದಲೇ ಜ್ಞಾನಿಯಾದವನು ಅರಿಯುವುದು". ಆಧ್ಯಾತ್ಮದ ಪರಿಭಾಷೆಯಲ್ಲಿ ನೋಡುವುದು ಎಂದರೆ ಇಂದ್ರಿಯಾನುಭವವನ್ನು ಮೀರುವ ಮಟ್ಟಕ್ಕೆ ಹೋಗುವ ಇಂದ್ರಿಯಾನುಭವವನ್ನೂ ಒಳಗೊಂಡ ಅನುಭವ. ಆಧ್ಯಾತ್ಮಿಕ ಅನುಭವವು ಕೇವಲ ಐಂದ್ರಿಯಕವಲ್ಲ. ಆದ್ದರಿಂದ ನೋಡುವುದರ ಮೇಲಿನ ಈ ಒತ್ತನ್ನು ತಪ್ಪಾಗಿ ಭಾವಿಸಿ ತೀರಾ ವಾಚ್ಯವಾಗಿ ತಿಳಿಯಬಾರದು.

4

ತೀರಾ ಭಿನ್ನವಾದ ಎರಡು ಪ್ರಾಯೋಗಿಕ ಪ್ರಕ್ರಿಯೆಗಳನ್ನು ಹೊಂದಿರುವ ಆಧ್ಯಾತ್ಮ ಮತ್ತು ವಿಜ್ಞಾನಗಳು ತತ್ವದಲ್ಲಿ ತೋರುವ ಹೋಲಿಕೆ ಆಶ್ಚರ್ಯಕರವಾದುದು. ವಿಜ್ಞಾನಿಗಳು ತಮ್ಮ ಜ್ಞಾನವನ್ನು ಅತಿ ಸೂಕ್ಷ್ಮವಾದ ಪ್ರಯೋಗ ಉಪಕರಣಗಳ ಸಾಮೂಹಿಕ ಪ್ರಯತ್ನದ ಮೂಲಕ ಪಡೆದರೆ ಅನುಭಾವಿಗಳು ಯಾವ ಉಪಕರಣಗಳೂ ಇಲ್ಲದೆ ಕೇವಲ ಅಂತರ್ಮುಖತೆ, ಜ್ಞಾನ, ಚಿಂತನ, ಅಂತರಂಗ ವೀಕ್ಷಣೆಗಳ ಮೂಲಕ ಪಡೆಯುತ್ತಾರೆ. ವೈಜ್ಞಾನಿಕ ಪ್ರಯೋಗಗಳನ್ನು

ಯಾರು ಯಾವಾಗ ಬೇಕಾದರೂ ಪುನರಾವರ್ತಿಸಬಹುದು. ಆದರೆ ಆಧ್ಯಾತ್ಮಿಕ ಅನುಭವಗಳು ಕೆಲವೇ ವ್ಯಕ್ತಿಗಳಿಗೆ ಕೆಲವು ವಿಶೇಷ ಸಂದರ್ಭಗಳಲ್ಲಿ ಮಾತ್ರ ಉಂಟಾಗುವಂಥವು. ಈ ಭಿನ್ನತೆಗಳು ಕೇವಲ ದೃಷ್ಟಿಕೋನದ ಭಿನ್ನತೆಗಳು ಮಾತ್ರ. ಇವು ಅನುಭವದ ನೈಜತೆಯಲ್ಲಾಗಲೀ ಸಂಕೀರ್ಣತೆಯಲ್ಲಾಗಲೀ ಭಿನ್ನವಲ್ಲ.

ಆಧುನಿಕ ಪರಮಾಣು ಭೌತಶಾಸ್ತ್ರದಲ್ಲಿ ಯಾವುದಾದರೊಂದು ಪ್ರಯೋಗವನ್ನು ಪುನರಾವರ್ತಿಸಬೇಕೆಂದು ಬಯಸುವವನು ಅನೇಕ ವರ್ಷಗಳ ತರಬೇತಿ ಮತ್ತು ವಿಶಿಷ್ಟ ಅರ್ಹತೆಗಳನ್ನು ಹೊಂದಿದವನಾಗಿದ್ದಾಗ ಮಾತ್ರ ಪ್ರಯೋಗಗಳ ಮೂಲಕ ಕೆಲವು ವಿಶಿಷ್ಟ ಪ್ರಶ್ನೆಗಳನ್ನು ಕೇಳಲು ಹಾಗೂ ಪಡೆದ ಉತ್ತರವನ್ನು ಅರಿಯಲು ಸಾಧ್ಯ. ಆಧ್ಯಾತ್ಮದಲ್ಲಿ ಸಹಾ ಒಂದು ವಿಶಿಷ್ಟವಾದ ಅನುಭವವನ್ನು ಪಡೆಯಲು ಒಬ್ಬ ಅನುಭವಿಯಾದ ಗುರುವಿನ ಕೈಕೆಳಗೆ ಸುರಿತಿರಬೇಕಾಗುತ್ತದೆ. ಈ ತರಬೇತಿ ಅನುಭವವನ್ನು ಕೊಡುವುದಷ್ಟೇ ಅಲ್ಲದೆ ಅವನ್ನು ಪುನರಾವರ್ತಿಸಬಹುದಾದ ಅವಕಾಶಗಳನ್ನು ಕೊಡುತ್ತದೆ. ಅನುಭವದ ಈ ಪುನರಾವರ್ತನೆ ಎಲ್ಲ ಆಧ್ಯಾತ್ಮಿಕ ಅನುಭವಕ್ಕೂ ಅಗತ್ಯವಾದುದು ಮತ್ತು ಅನುಭವವನ್ನು ಸಾಧಿಸುವುದರ ಗುರಿಯೂ ಆಗಿದೆ.

ಆದ್ದರಿಂದ ಆಧ್ಯಾತ್ಮಿಕ ಅನುಭವವು ಭೌತಶಾಸ್ತ್ರದ ಆಧುನಿಕ ಪ್ರಯೋಗಕ್ಕಿಂತ ವಿಶಿಷ್ಟವಾದದ್ದೇನಲ್ಲ ಮತ್ತು ಅಷ್ಟೇ ಸೂಕ್ಷ್ಮವಾದದ್ದು. ಈ ಸೂಕ್ಷ್ಮತೆಯ ರೀತಿ ಬೇರೆ. ಭೌತವಿಜ್ಞಾನಿಯ ಸೂಕ್ಷ್ಮ ಉಪಕರಣಗಳಿಗೆ ಪ್ರತಿಯಾಗಿ ಅನುಭಾವಿಯ ಧ್ಯಾನಾಂತರ್ಗತ ಪ್ರಜ್ಞೆ ಇದೆ. ಸಾಮಾನ್ಯ ಮನುಷ್ಯನಿಗೆ ನಿಲುಕದಂತ ಪ್ರಕೃತಿಯನ್ನು ನಿರೀಕ್ಷಿಸುವ ವಿಧಾನಗಳನ್ನು ವಿಜ್ಞಾನಿ ಅನುಭಾವಿ ಇಬ್ಬರೂ ಬೆಳೆಸಿಕೊಂಡಿದ್ದಾರೆ. ಅತ್ಯಾಧುನಿಕ ವಿಜ್ಞಾನ ಪತ್ರಿಕೆಯೊಂದರ ಪುಟಗಳು ಮತ್ತು ಟಿಬೆಟಿಯನ್ ಮಂಡಲ–ಎರಡೂ ವಿಶ್ವದ ಸ್ವರೂಪವನ್ನು ಕುರಿತ ಶೋಧನೆಯ ದಾಖಲೆಗಳು.

ಅಪೂರ್ವವಾದ ಆಧ್ಯಾತ್ಮಿಕ ಅನುಭವಗಳು ಪೂರ್ವಸಿದ್ಧತೆಯಿಲ್ಲದೇ ಘಟಿಸುವುದಿಲ್ಲವಾದರೂ ನಮ್ಮೆಲ್ಲರ ಬದುಕಿನಲ್ಲೂ ಅಂತಸ್ಫುರಣಕ್ಕೆ ಸಂಬಂಧಿಸಿದ ಸಣ್ಣಪುಟ್ಟ ಘಟನೆಗಳು ನಡೆಯುತ್ತಿರುತ್ತವೆ. ಮರೆತ ವಿಷಯ ನೆನಪಿಗೆ ಬರುವುದು, ಚಟಾಕಿಗಳ ಆನಂದವನ್ನು ಕ್ಷಣಾರ್ಧದಲ್ಲಿ ಅನುಭವಿಸುವುದು ಇವೆಲ್ಲ ವಿವರಣೆಯನ್ನು ಮೀರಿದ ಒಳತಿಳಿವಿನ ಕ್ಷಣಗಳು. ಬೌದ್ಧಧರ್ಮ ಈ ಪ್ರಕ್ರಿಯೆಗೆ ಸಂಬಂಧಿಸಿದಂತೆ ನಮ್ಮ ಸ್ವಭಾವ ಬುದ್ಧತ್ವವನ್ನು ಪಡೆದಿರುವಂಥದು–ಅದನ್ನು ನಾವು ಮರೆತಿದ್ದೇವಷ್ಟೇ–ಎನ್ನುತ್ತ ತನ್ನ ಅಭ್ಯಾಸಿಗಳನ್ನು ತಮ್ಮ ನಿಜರೂಪವನ್ನು ಕಂಡುಕೊಳ್ಳುವಂತೆ ಹೇಳುತ್ತದೆ.

ದೈನಂದಿನ ಜೀವನದಲ್ಲಿ ಸೀಮಿತ ಅವಧಿಯಲ್ಲಿ ಸೀಮಿತ ಸಂಖ್ಯೆಯಲ್ಲಿ ಇರುವ ಈ ಅಂತಸ್ಫುರಣಗಳು ಆಧ್ಯಾತ್ಮಿಕ ಅನುಭವದಲ್ಲಿ ದೀರ್ಘಾವಧಿಯವರೆಗೆ ಲಂಬಿಸುತ್ತವೆ. ಈ ನಿರಂತರ ಪ್ರಜ್ಞೆಯ ಸ್ಥಿತಿಗೆ ಮನಸ್ಸನ್ನು ಸಿದ್ಧ ಮಾಡುವುದೇ ಪೌರ್ವಾತ್ಯ ಅಧ್ಯಾತ್ಮದ ಎಲ್ಲ ಶಾಖೆಗಳ ಉದ್ದೇಶ. ಭಾರತ, ಚೀನಾ ಮತ್ತು ಜಪಾನುಗಳ ದೀರ್ಘವಾದ ಸಾಂಸ್ಕೃತಿಕ ಇತಿಹಾಸದಲ್ಲಿ ಧಾರ್ಮಿಕ ಆಚರಣೆಗಳು, ಪದ್ಧತಿಗಳು ಕಲಾಪ್ರಕಾರಗಳ ಮಟ್ಟಕ್ಕೆ ಬೆಳೆದು ಈ ಗುರಿಯನ್ನು ಸಾಧಿಸಿವೆ. ಇದನ್ನು ಆ ಪದದ ವಿಶಾಲಾರ್ಥದಲ್ಲಿ ಧ್ಯಾನವೆಂದು ಕರೆಯಬಹುದು.

5

ಧ್ಯಾನದ ತಂತ್ರಗಳ ಮೂಲ ಉದ್ದೇಶ ಚಿಂತನಶೀಲವಾದ ಮನಸ್ಸನ್ನು ಮೌನದಲ್ಲಿ ಬಂಧಿಸಿ ಪ್ರಜ್ಞೆಯನ್ನು ವೈಚಾರಿಕ ಸ್ತರದಿಂದ ಅಂತಃಸ್ಫುರಣದ ಸ್ತರಕ್ಕೆ ವರ್ಗಾಯಿಸುವುದು. ಹೀಗೆ ವೈಚಾರಿಕ ಮನವನ್ನು ನಿಶ್ಚಲಗೊಳಿಸುವ ಕ್ರಿಯೆ ಮನಸ್ಸನ್ನು ಒಂದು ನಿರ್ದಿಷ್ಟ ಅಂಶದ ಮೇಲೆ ಕೇಂದ್ರೀಕರಿಸುವುದರಿಂದ ಸಾಧ್ಯವಾಗುತ್ತದೆ. ಅದು ಉಸಿರಾಟವಾಗಬಹುದು, ಮಂತ್ರವಾಗಬಹುದು ಅಥವಾ ಮಂಡಲವಾಗಬಹುದು. ಇನ್ನು ಕೆಲವು ಶಾಖೆಗಳಲ್ಲಿ ಚಿಂತನದ ಅವಶ್ಯಕತೆಯಿಲ್ಲದ ದೈಹಿಕ ಚಲನವಲನಗಳಿಗೆ ಹೆಚ್ಚಿನ ಮಹತ್ವ. ಹಿಂದೂ ಯೋಗ ಮತ್ತು ತಾವೋಗಳ ತಾಯ್–ಚಿ–ಚುವಾನ್ ಇದನ್ನು ಮಾಡುತ್ತವೆ. ಲಯದ ಮೇಲೆ ಅವು ಕೊಡುವ ಒತ್ತು ಅದರಿಂದ ಉಂಟಾಗುವ ಶಾಂತ ಭಾವನೆ ಧ್ಯಾನಕ್ಕೆ ಸಮಾನ ವಾದುದಾಗಿದೆ. ಕೆಲವು ಕ್ರೀಡೆಗಳೂ ಕೂಡ ಈ ಭಾವನೆಯನ್ನು ಉದ್ದೀಪಿಸುತ್ತವೆ. ವೈಯುಕ್ತಿಕವಾಗಿ ಸ್ಕೀಯಿಂಗ್ ನನಗೆ ಇಂಥ ಒಂದು ಲಾಭದಾಯಕ ಅನುಭವವಾಗಿದೆ.

ಭಾರತೀಯ ಕಲಾಪ್ರಕಾರಗಳು ಕೂಡ ಧ್ಯಾನದ ರೂಪಗಳೇ ಆಗಿವೆ. ಅವು ಕಲಾವಿದನ ಅಂತರಂಗದ ಭಾವನೆಗಳನ್ನು ವ್ಯಕ್ತಪಡಿಸುವುದಕ್ಕಿಂತ ಹೆಚ್ಚಾಗಿ ಆತ್ಮ ಸಾಕ್ಷಾತ್ಕಾರವನ್ನು ಅಂತಃಸ್ಫುರಣದ ಪ್ರಜ್ಞೆಯ ಮೂಲಕ ಸಾಧಿಸುವ ಮಾರ್ಗಗಳಾಗಿವೆ. ಉದಾಹರಣೆಗೆ ಭಾರತೀಯ ಸಂಗೀತವನ್ನು, ಸಂಗೀತದ ಕುರಿತು ಟಿಪ್ಪಣಿಗಳನ್ನು ಓದುವುದರ ಮೂಲಕ ಕಲಿಯಲಾಗುವುದಿಲ್ಲ. ಗುರುವು ಹಾಡುವುದನ್ನು ಕೇಳಿ ಕೇಳಿ ಸಂಗೀತದ ಬಗೆಗಿನ ಭಾವನೆಯನ್ನು ಬೆಳೆಸಿಕೊಳ್ಳುವುದರ ಮೂಲಕವೇ ಕಲಿಯಬೇಕು. ಜಪಾನೀಯರ ಟೀ ಸಮಾರಂಭಗಳು ನಿಧಾನವಾದ ರಿಚಿಯಲಿಸ್ಟಿಕ್ ಚಲನವಲನಗಳಿಂದ ಕೂಡಿದೆ. ಚೀನೀಯರ ಕ್ಯಾಲಿಗ್ರಫಿ ಬರೆಯಲು ಹಸ್ತದ ಚುರುಕುತನ ಅಗತ್ಯ. ಈ ಕೌಶಲಗಳೆಲ್ಲ ಪೌರ್ವಾತ್ಯ ಪ್ರಪಂಚದಲ್ಲಿ ಧ್ಯಾನಕ್ಕೆ ಸಂಬಂಧಿಸಿದ ಪ್ರಜ್ಞೆಯನ್ನು ಬೆಳೆಸಿಕೊಳ್ಳುವಂಥವೇ ಆಗಿವೆ.

ಹೆಚ್ಚಿನ ಜನರಿಗೆ, ವಿಶೇಷವಾಗಿ ಬುದ್ಧಿಜೀವಿಗಳಿಗೆ ಈ ರೀತಿಯ ಪ್ರಜ್ಞೆಯು ಒಂದು ಹೊಸ ಅನುಭವವಾಗಿದೆ. ವಿಜ್ಞಾನಿಗಳಿಗೆ ಈ ರೀತಿಯ ನೇರವಾದ ಅಂತಸ್ಫುರಣದ ಅನುಭವವಿರುತ್ತದೆ. ಏಕೆಂದರೆ ಪ್ರತಿಯೊಂದು ಹೊಸ ಸಂಶೋಧನೆಯೂ ಭಾಷೆಯನ್ನು ಮೀರಿದ ಒಂದು ಕ್ಷಣದ ಹೊಳಹಿನಲ್ಲಿ ಹುಟ್ಟುತ್ತದೆ. ಇವು ಮನಸ್ಸು ಆಲೋಚನೆ ಕಲ್ಪನೆಗಳ ತಿಳುವಳಿಕೆಯಿಂದ ತುಂಬಿದಾಗಿನ ಸಂಕ್ಷಿಪ್ತ ಕ್ಷಣಗಳಷ್ಟೇ. ಇದಕ್ಕೆ ಪ್ರತಿಯಾಗಿ ಧ್ಯಾನದಲ್ಲಿ ಎಲ್ಲ ಆಲೋಚನೆ ಕಲ್ಪನೆಗಳಿಂದ ಮುಕ್ತವಾದ ಮನಸ್ಸು ತನ್ನ ಅಂತಃಸ್ಫುರಣದ ಮೂಲಕ ದೀರ್ಘಕಾಲಾವಧಿಯವರೆಗೆ ಕೆಲಸ ಮಾಡಲು ಸಿದ್ಧವಾಗಿರುತ್ತದೆ. ಈ ವೈರುಧ್ಯವನ್ನು ಕುರಿತು ಲಾವೋತ್ಸು ಹೇಳುತ್ತಾನೆ: "ಜ್ಞಾನವನ್ನು ಪಡೆಯ ಹೊರಟವನು ದಿನದಿನವೂ ವೃದ್ಧಿಸುತ್ತಾನೆ. ತಾವೋ ಪಡೆಯ ಹೊರಟವನು ದಿನದಿನವೂ ಕ್ಷಯಿಸುತ್ತಾನೆ".ಬುದ್ಧಿಯು ಶಾಂತವಾದಾಗ ಅಂತಃಪ್ರಜ್ಞೆಯು ಜಾಗೃತಗೊಳ್ಳುತ್ತದೆ. ಇಡಿಯ ವಾತಾವರಣವನ್ನು ಆಲೋಚನೆ ಮತ್ತು ಕಲ್ಪನೆಗಳ ಆವರಣದಿಂದ ಮುಕ್ತವಾಗಿ ಅನುಭವಿಸತೊಡಗುತ್ತದೆ. ಚುವಾಂಗ್–ತ್ಸುನ ಮಾತಿನಲ್ಲಿ "ಯೋಗಿಯ ಪ್ರಶಾಂತ ಮನಸ್ಸು ಸ್ವರ್ಗ ಮರ್ತ್ಯಗಳ ಕನ್ನಡಿ; ಎಲ್ಲ ವಸ್ತುಗಳ ದರ್ಪಣ". ತನ್ನ ಪರಿಸರದ ಜೊತೆಗಿನ ಅವಿನಾಭಾವ ಸಂಬಂಧ ಈ ಧ್ಯಾನಲೀನ ಸ್ಥಿತಿಯ ಮುಖ್ಯ ಲಕ್ಷಣ. ಭೇದರಾಹಿತ್ಯದ ಅಖಂಡ ಏಕತೆಯಲ್ಲಿ ಎಲ್ಲ ರೂಪದ ಭಿನ್ನತೆಗಳು, ಭೇದಗಳು ಅಳಿದ ಸ್ಥಿತಿ ಅದು.

ಆಳವಾದ ಧ್ಯಾನದ ಸ್ಥಿತಿಯಲ್ಲಿ ಮನಸ್ಸು ಸಂಪೂರ್ಣ ಎಚ್ಚರದಲ್ಲಿರುತ್ತದೆ. ಐಂದ್ರಿಯಕವಲ್ಲದ ಸತ್ಯದ ಜೊತೆಗೆ ಅದು ಎಲ್ಲ ಶಬ್ದ ದೃಶ್ಯಗಳನ್ನು ಪರಿಸರದ ಎಲ್ಲ ಅಂಶಗಳನ್ನು ಹೀರಿಕೊಳ್ಳುತ್ತಿರುತ್ತದೆ. ಆದರೆ ಆ ಐಂದ್ರಿಯಕ ಅನುಭವಗಳನ್ನು ವಿಶ್ಲೇಷಿಸಲು ವಿವರಿಸಲು ತೊಡಗುವುದಿಲ್ಲ; ಅವುಗಳಿಂದ ಧ್ಯಾನದ ಪಲ್ಲಟವಾಗಗೊಡುವುದಿಲ್ಲ. ಈ ರೀತಿಯ ಮನಸ್ಥಿತಿಯನ್ನು ಯೋಧನ ಮನಃಸ್ಥಿತಿಗೆ ಹೋಲಿಸಬಹುದು. ಯೋಧ ಒಂದೂ ಕ್ಷಣವಾದರೂ ಲಕ್ಷ್ಯದಿಂದ ತನ್ನ ಮನಸ್ಸನ್ನು ವಿಚಲಗೊಳಿಸದೇ ತನ್ನ ಸುತ್ತ ಮುತ್ತ ನಡೆಯುತ್ತಿರುವುದನ್ನು ಗ್ರಹಿಸುತ್ತಿರುತ್ತಾನೆ. ಝೆನ್ ಗುರು ಯೆಶುತಾನಿ ತೋಶಿ ತನ್ನ ಶಿಕಾನ್–ತಾಜಾದ (ಶಿಕಾನ್ ತಾಜಾ ಎಂದರೆ ಝೆನ್ ಧ್ಯಾನದ ಸಾಧನೆ) ವಿವರಣೆ ಕೊಡಲು ಈ ಪ್ರತಿಮೆಯನ್ನು ಬಳಸುತ್ತಾನೆ: "ಶಿಕಾನ್‌ತಾಜಾವು ಕೇಂದ್ರೀಕೃತಗೊಂಡ ಪ್ರಜ್ಞೆಯ ಅತ್ಯುನ್ನತ ಸ್ಥಿತಿಯಾಗಿದೆ. ಅಲ್ಲಿ ಮನಸ್ಸಿಗೆ ಅವಸರವಿಲ್ಲ, ಆಂತಕವಿಲ್ಲ; ಹಾಗೆಂದು ಶಿಥಿಲತೆಯೂ ಇಲ್ಲ. ಅದು ಸಾವನ್ನು ಎದುರಿಸುತ್ತಿರುವ ಮನುಷ್ಯನೊಬ್ಬನ ಸ್ಥಿತಿಯಾಗಿದೆ. ಪ್ರಾಚೀನ ಜಪಾನಿನಲ್ಲಿ ನಡೆಯುತ್ತಿದ್ದಂಥ ಖಡ್ಗ ಯುದ್ಧದಲ್ಲಿ ನೀವು ನಿರತರಾಗಿದ್ದೀರೆಂದು ಕಲ್ಪಿಸಿಕೊಳ್ಳಿ.

ನೀವು ಸಿದ್ಧರಾಗಿದ್ದೀರಿ, ಎಚ್ಚರದಿಂದಿದ್ದೀರಿ, ಎದುರಾಳಿಯನ್ನು ನೋಡುತ್ತಿದ್ದೀರಿ. ನೀವು ನಿಮ್ಮ ಮನದ ಕಟ್ಟುನಿಟ್ಟಾದ ಕಾವಲನ್ನು ಸಡಿಲಿಸಿದರೂ ನಿಮ್ಮನ್ನು ತುಂಡು ಹೊಯ್ಯಲಾಗುವುದು. ಖಡ್ಗಯುದ್ಧವನ್ನು ನೋಡಲು ಜನ ನೆರೆದಿದ್ದಾರೆ, ನೀವು ಕುರುಡರಲ್ಲವಾದ್ದರಿಂದ ಅವರನ್ನು ಕಣ್ಣಕೊನೆಯಿಂದ ನೋಡುತ್ತೀರಿ. ನೀವು ಕಿವುಡರಲ್ಲವಾದ್ದರಿಂದ ಅವರ ಕೋಲಾಹಲವನ್ನು ಕೇಳುತ್ತೀರಿ. ಆದರ ಈ ಐಂದ್ರಿಯಕ ಅನುಭವಗಳಿಂದ ನಿಮ್ಮ ಮನಸ್ಸು ಒಂದು ಕ್ಷಣವಾದರೂ ವಿಚಲಿತಗೊಂಡಿಲ್ಲ".

ಹೀಗೆ ಯೋಧ ಮತ್ತು ಧ್ಯಾನದಲ್ಲಿರುವವನ ಮನಃಸ್ಥಿತಿಯಲ್ಲಿ ಇರುವ ಹೋಲಿಕೆಯಿಂದ ಪೌರ್ವಾತ್ಯ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಜೀವನದಲ್ಲಿ ಯೋಧನ ಪ್ರತಿಮೆಗೆ ಒಂದು ಮಹತ್ವದ ಸ್ಥಾನವಿದೆ. ಭಾರತದ ಪ್ರಮುಖ ಧಾರ್ಮಿಕ ಗ್ರಂಥ ಗೀತೆಯು ಹುಟ್ಟಿದ್ದು ರಣರಂಗದಲ್ಲಿ. ಚೀನಾ ಮತ್ತು ಜಪಾನಿನ ಸಾಂಸ್ಕೃತಿಕ ಚರಿತ್ರೆಯಲ್ಲಿ ಯುದ್ಧ ಕಲೆಗಳಿಗೆ ಮಹತ್ವದ ಸ್ಥಾನವಿದೆ. ಜಪಾನಿನಲ್ಲಿ ಸಮುರಾಯಿ ಯುದ್ಧ ಕಲೆಯುಮೇಲೆ ಝೆನ್‌ನ ಪ್ರಭಾವ "ಬುಶಿಡೋ"ಗೆ ಜನ್ಮ ಕೊಟ್ಟಿದೆ. "ಬುಶಿಡೋ'' ಎಂದರೆ 'ಯೋಧನರೀತಿ' ಎಂದರ್ಥ. ಇದು ಖಡ್ಗವಿದ್ಯೆಯ ಕಲೆ. ಇಲ್ಲಿ ಯೋಧನ ಆಧ್ಯಾತ್ಮಿಕ ಅಂತಸ್ಫುರಣಗಳು ಅತ್ಯುಚ್ಚ ಪರಿಪೂರ್ಣತೆಯ ಮಟ್ಟಕ್ಕೆ ಹೋಗುತ್ತವೆ. ಚೀನಾದಲ್ಲಿ ಅತ್ಯುಚ್ಚ ಯುದ್ಧಕಲೆಯೆಂದು ಪರಿಗಣಿಸಲಾದ ತಾವೋಗಳ ತಾಯ್-ಚಿ-ಚುಆನ್ ಲಯಬದ್ಧವಾದ ಸಾವಧಾನವಾದ 'ಯೌಗಿಕ' ಚಲನವಲನಗಳನ್ನು, ಯೋಧನ ಎಚ್ಚರದ ಮನಃಸ್ಥಿತಿಯೊಡನೆ ಒಂದು ವಿಶಿಷ್ಟ ರೀತಿಯಲ್ಲಿ ಮಿಲನಗೊಳಿಸಿದೆ.

ಪೌರ್ವಾತ್ಯ ಅಧ್ಯಾತ್ಮವು ಸತ್ಯದ ಸ್ವರೂಪವನ್ನು ಕುರಿತ ನೇರವಾದ ಒಳಹೊಳಹುಗಳ ಮೇಲೆ ಆಧಾರಗೊಂಡಿದೆ. ಭೌತಶಾಸ್ತ್ರವು ಸಹಜ ಪ್ರಕ್ರಿಯೆಗಳ ಕುರಿತು ವೈಜ್ಞಾನಿಕ ಪ್ರಯೋಗಗಳ ಮೇಲೆ ಆಧಾರ ಪಟ್ಟಿದೆ. ಈ ಎರಡೂ ಕ್ಷೇತ್ರಗಳಲ್ಲಿ ಪ್ರಯೋಗಗಳನ್ನು ಆಮೇಲೆ ವಿವರಿಸಿ, ವಿಶ್ಲೇಷಿಸಿ ಭಾಷೆಯಲ್ಲಿ ಬೋಧಿಸಲಾಗುವುದು. ಪದಗಳು ಯಾವಾಗಲೂ ಸತ್ಯದ ಅಮೂರ್ತ ಸರಾಸರಿ ಚಿತ್ರವಾಗಿರುವುದರಿಂದ ವೈಜ್ಞಾನಿಕ ಪ್ರಯೋಗದ ಅಥವಾ ಆಧ್ಯಾತ್ಮಿಕ ಅನುಭವದ ವಿವರಣೆಗಳು ಅಪೂರ್ಣ ಮತ್ತು ಅಂದಾಜು ಸತ್ಯಗಳಾಗಿರುತ್ತವೆ. ಆಧುನಿಕ ಭೌತವಿಜ್ಞಾನಿಗಳೂ ಮತ್ತು ಪೌರ್ವಾತ್ಯ ಅನುಭಾವಿಗಳೂ ಈ ಅಂಶವನ್ನು ಅರಿತಿದ್ದಾರೆ,

ಭೌತಶಾಸ್ತ್ರದಲ್ಲಿ ಭೌತಶಾಸ್ತ್ರದ ಶಾಬ್ದಿಕ ಮಾದರಿಗಳು (Verbal Models) ಸತ್ಯದ ಅಂದಾಜು ಮಾತ್ರ ಎಂಬ ಅಂಶ ಆಧುನಿಕ ಸಂಶೋಧನೆಗೆ ತಳಹದಿಯಾಗಿದೆ.

ವಿಶ್ಲೇಷಣೆ ಮತ್ತು ತರ್ಕಬದ್ಧ ಆಲೋಚನೆಯ ವಿಧಾನಗಳು ಸಂಪೂರ್ಣ ಸತ್ಯದ ಸಹಜ ಪ್ರಕ್ರಿಯೆಯನ್ನು ಒಂದೇ ಬಾರಿಗೆ ವಿವರಿಸಲಾರದೆಂಬುದು ಭೌತವಿಜ್ಞಾನಿಗಳಿಗೂ ತಿಳಿದ ಸತ್ಯವಾಗಿದೆ. ಆದ್ದರಿಂದ ಅವರು ಆ ಸಹಜ ಪ್ರಕ್ರಿಯೆಯ ಆಂಶಿಕ ವಿವರಗಳನ್ನು ಪ್ರತ್ಯೇಕಿಸಿ, ಮಾದರಿಗಳನ್ನು ಕೊಟ್ಟು ವಿವರಿಸಲು ಯತ್ನಿಸುತ್ತಾರೆ. ಆ ಮಾದರಿ ಆಗ ಪರಿಸ್ಥಿತಿಯ ಸಂಪೂರ್ಣ ಚಿತ್ರವನ್ನು ಕೊಡುವಲ್ಲಿ ವಿಫಲವಾಗುತ್ತದೆ.

ಉದಾಹರಣೆಗೆ ನ್ಯೂಟನ್ನನ "ಶಾಸ್ತ್ರೀಯ" ಚಲನಶಾಸ್ತ್ರ ಎಲ್ಲ ಸಹಜ ಪ್ರಕ್ರಿಯೆಗಳಿಗೂ ಉತ್ತರವನ್ನೀಯುತ್ತದೆಯೆಂದು ಹಿಂದೆ ಭಾವಿಸಲಾಗಿತ್ತು. ವಿದ್ಯುಚ್ಛಕ್ತಿ ಮತ್ತು ಕಾಂತತ್ವವನ್ನು ಕಂಡುಹಿಡಿದ ಮೇಲೆ ನ್ಯೂಟೋನಿಯನ್ ಮೆಕ್ಯಾನಿಕ್ಸ್ ಅಧಿಕ ಕಣಗಳ ಮೊತ್ತವನ್ನು ಹೊಂದಿರುವ ಬೆಳಕಿನ ವೇಗಕ್ಕೆ ಹೋಲಿಸಿದಂತೆ ತುಂಬಾ ಕಡಿಮೆ ವೇಗವನ್ನು ಹೊಂದಿದ ವಸ್ತುಗಳಿಗೆ ಮಾತ್ರ ಅನ್ವಯವಾಗುತ್ತದೆಂದು ಈ ದಿನ ನಮಗೆ ತಿಳಿದಿದೆ. ಕ್ವಾಂಟಂ ಸಿದ್ಧಾಂತ ಮತ್ತು ಸಾಪೇಕ್ಷ ಸಿದ್ಧಾಂತಗಳು ಇಲ್ಲಿ ವಿವರಿಸಲಾಗದ ಅನೇಕ ಪರಿಣಾಮಗಳನ್ನು ವಿವರಿಸುತ್ತವೆ. ಇದರರ್ಥ ಎಲ್ಲ ನಿಯಮಗಳೂ ಒಂದು ಸೀಮಿತ ವರ್ಗದ ಪ್ರಕ್ರಿಯೆಗಳನ್ನು ಮಾತ್ರ ವಿವರಿಸಬಲ್ಲವು. ಆ ಕ್ಷೇತ್ರದಿಂದಾಚೆಗೆ ಅವು ಪ್ರಕೃತಿಯ ತೃಪ್ತಿಕರವಾದ ವಿವರಣೆಯನ್ನು ನೀಡುವುದಿಲ್ಲ. ಆಗ ಹಳೆಯ ಮಾದರಿಗಳ ಸ್ಥಾನದಲ್ಲಿ ಹೊಸ ಮಾದರಿಗಳನ್ನು ತರಬೇಕಾಗುತ್ತದೆ ಅಥವಾ ಅವುಗಳನ್ನು ಎಲ್ಲ ವಿಷಯಗಳನ್ನೊಳಗೊಳ್ಳುವಂತೆ ಸುಧಾರಿಸಬೇಕಾಗುತ್ತದೆ.

ಪೌರ್ವಾತ್ಯ ಅನುಭಾವಿಗಳು ಕೂಡ ಸತ್ಯದ ಶಾಬ್ದಿಕ ವಿವರಣೆಗಳು ನಿಖರವಲ್ಲವೆಂದೂ ಅಪೂರ್ಣವೆಂದೂ ತಿಳಿದಿದ್ದರು. ಸತ್ಯದ ನೇರವಾದ ಅನುಭವವು ಆಲೋಚನೆ ಮತ್ತು ಭಾಷೆಯ ಪರಿಧಿಯನ್ನು ಮೀರಿದುದಾಗಿದೆ.

ಎಲ್ಲ ಅನುಭಾವವೂ ಇಂತಹ ನೇರವಾದ ಅನುಭವದ ಮೇಲೆ ನಿಂತಿರುವುದಾದ್ದರಿಂದ ಪ್ರತಿಯೊಂದು ಭಾಷಿಕ ನಿರೂಪಣೆಯೂ ಆಂಶಿಕ ಸತ್ಯಮಾತ್ರ. ಭೌತಶಾಸ್ತ್ರದಲ್ಲಿ ತತ್ವದ ಮಿತಿಗಳನ್ನು ತತ್ವವನ್ನು ಹಂತಹಂತವಾಗಿ ಸುಧಾರಿಸುವುದರ ಮೂಲಕ, ಅಭಿವೃದ್ಧಿ ಪಡಿಸುವುದರ ಮೂಲಕ ನಿವಾರಿಸಲಾಗುವುದು. ಈ ಸಮಸ್ಯೆಯನ್ನು ಪೌರ್ವಾತ್ಯ ಅನುಭಾವಿಗಳು ಹೇಗೆ ನಿವಾರಿಸುವರು ?

7

ಅನುಭಾವಿಗಳಿಗೆ ಆಸಕ್ತಿ ಇರುವುದು ಅನುಭವ ಕುರಿತೇ ಹೊರತು, ಅನುಭವದ ವಿವರಣೆಯ ಕುರಿತು ಅಲ್ಲ. ಹೀಗಾಗಿ ಆಧ್ಯಾತ್ಮವನ್ನು ಶಬ್ದಗಳಲ್ಲಿ ಅಚ್ಚು

ಕಟ್ಟಾಗಿ ನಿರೂಪಿಸುವ ಕಲ್ಪನೆಯೇ ಪೌರ್ವಾತ್ಯ ಚಿಂತನದಲ್ಲಿ ಏಳುವುದಿಲ್ಲ. ಅವರು ತಮ್ಮ ಅನುಭವವನ್ನು ಅರ್ಥಮಾಡಿಸಲು ಹೊರಟಾಗ ಶಬ್ದದ ಮಿತಿ ಎದುರಾದರೂ, ಅದನ್ನು ಕುರಿತು ವ್ಯವಹರಿಸಲು ಬೇರೆ ಬೇರೆ ವಿಭಿನ್ನ ಮಾರ್ಗಗಳನ್ನು ರೂಢಿಸಿದ್ದಾರೆ.

ಭಾರತೀಯ ಅಧ್ಯಾತ್ಮ, ವಿಶೇಷವಾಗಿ ಹಿಂದೂ ಧರ್ಮ ತನ್ನ ಹೇಳಿಕೆಗಳನ್ನು ಪುರಾಣ ಪ್ರತಿಮೆಗಳಲ್ಲಿ ಅಲಂಕರಿಸುತ್ತದೆ. ರೂಪಕ ಸಂಕೇತ ಕಾವ್ಯಪ್ರತಿಮೆ ಹೋಲಿಕೆಗಳನ್ನು ಬಳಸಿಕೊಳ್ಳುತ್ತದೆ. ಆಧ್ಯಾತ್ಮಿಕ ಪರಿಭಾಷೆಯಲ್ಲಿ ತರ್ಕ ಮತ್ತು ಸಾಮಾನ್ಯ ಜ್ಞಾನದ ಮಿತಿಯಿಲ್ಲ. ಅದರ ತುಂಬ ವೈರುಧ್ಯದ ಹೇಳಿಕೆಗಳು, ಕಲ್ಪನೆಯ ಮಾಂತ್ರಿಕತೆ, ಸೂಚ್ಯಾರ್ಥದ ಶ್ರೀಮಂತಿಕೆಗಳಿವೆ. ಅದು ಎಂದೂ ಶುಷ್ಕ ನಿಷ್ಕ್ರಿಯತೆಯಲ್ಲಿ ತನ್ನನ್ನು ಮಿತಿಗೊಳಿಸಿಕೊಳ್ಳುವುದಿಲ್ಲ. ಹೀಗಿರುವ ಅಧ್ಯಾತ್ಮದ ಪರಿಭಾಷೆ ವಾಸ್ತವ ಭಾಷೆಗಿಂತ ಉತ್ತಮವಾಗಿ ಆಧ್ಯಾತ್ಮಿಕ ಅನುಭವವನ್ನು ನಿರೂಪಿಸಬಲ್ಲುದು. ಆನಂದ ಕುಮಾರಸ್ವಾಮಿಯವರ ಪ್ರಕಾರ ಪುರಾಣ ಪ್ರತಿಮೆಯು ಆತ್ಯಂತಿಕ ಸತ್ಯಕ್ಕೆ ಹತ್ತಿರವಾದ ಶಬ್ದಗಳಲ್ಲಿ ಹೇಳಬಹುದಾದ ದಾರಿ.

ಶ್ರೀಮಂತವಾದ ಭಾರತೀಯ ಕಲ್ಪನೆಯು ಅನೇಕ ದೇವ ದೇವತೆಗಳನ್ನು ನಿರ್ಮಿಸಿದೆ. ಅವರ ಅವತಾರಗಳು, ಸಾಹಸಗಳು, ಅದ್ಭುತ ಕಲ್ಪನಾಮಯ ಕಥೆಗಳಿಗೆ ವಸ್ತುಗಳಾಗಿವೆ. ಮಹಾಕಾವ್ಯಗಳಲ್ಲಿ ಸಂಗ್ರಹಿಸಲ್ಪಟ್ಟಿವೆ. ಆಳವಾದ ಒಳತಿಳಿವು ಇರುವ ಹಿಂದುವಿಗೆ ಈ ದೇವರುಗಳು ಮನಸ್ಸಿನ ಕಲ್ಪನೆಗಳೆಂದೂ, ಸತ್ಯದ ಅನೇಕ ಮುಖಗಳನ್ನು ಪ್ರತಿನಿಧಿಸುವ ಪೌರಾಣಿಕ ಪ್ರತಿಮೆಗಳೆಂದೂ ತಿಳಿದಿರುತ್ತದೆ. ಇದರ ಜೊತೆಗೇ ಆತನಿಗೆ ಈ ದೇವ ದೇವತೆಗಳ ಸೃಷ್ಟಿ, ಕಥೆಗಳನ್ನು ಹೆಚ್ಚು ಆಕರ್ಷಕವಾಗಿ ಹೇಳುವುದಕ್ಕೋಸ್ಕರ ಆಗಿಲ್ಲವೆಂದು ತಿಳಿದಿದೆ. ಇವು ಆಧ್ಯಾತ್ಮಿಕ ಅನುಭವದಲ್ಲಿ ಬೇರುಬಿಟ್ಟ ಒಂದು ತತ್ವವನ್ನು, ಧರ್ಮವನ್ನು ತಿಳಿಸುವ ವಾಹಕಗಳಷ್ಟೇ.

ಚೀನೀ ಮತ್ತು ಜಪಾನೀ ಅನುಭಾವಿಗಳ ಮಾರ್ಗ ಸತ್ಯದ ಸ್ವಯಂ ವಿರೋಧಿ ಸ್ವಭಾವವನ್ನು ಅದರ ಉತ್ಕಟ ಸ್ಥಿತಿಗೆ ಕೊಂಡೊಯ್ಯುವುದರ ಮೂಲಕ ಭಾಷೆಯ ಸಮಸ್ಯೆಯನ್ನು ಬಗೆಹರಿಸುತ್ತದೆ. ಈ ತಂತ್ರ ಚೀನೀ ಮತ್ತು ಜಪಾನೀ ಬೌದ್ಧಧರ್ಮದಲ್ಲಿ ಪರಿಣಾಮಕಾರಿಯಾಗಿ ಬೆಳೆದು, ಝೆನ್‌ನಲ್ಲಿ ತನ್ನ ಶಿಖರವನ್ನು ಮುಟ್ಟಿತು. ಕೋನ್ ಎಂದು ಕರೆಯಲ್ಪಡುವ ಮಂಡಿಗೆಗಳು ಝೆನ್ ಗುರುಗಳಿಗೆ ತಮ್ಮ ಜ್ಞಾನದ ಸಂವಹನಕ್ಕೆ ಸಹಕಾರಿಯಾದವು. ಈ ಕೋನ್‌ಗಳು ಆಧುನಿಕ

ಭೌತ ವಿಜ್ಞಾನದ ಹಲವಾರು ಸೂತ್ರಗಳಿಗೆ ಸಂವಾದಿಯಾಗಿರುವುದನ್ನು ವಿಜ್ಞಾನಿಗಳು ಗುರುತಿಸಿದ್ದಾರೆ.

ಕವಿತೆಯ ಒಂದು ವಿಶೇಷ ಪ್ರಕಾರ ಜಪಾನಿನಲ್ಲಿ ತಾತ್ವಿಕ ವಿಚಾರಗಳನ್ನು ವ್ಯಕ್ತಪಡಿಸಲು ಬಳಕೆಯಾಗುತ್ತದೆ. ಅದು ಝೆನ್ ಗುರುಗಳು ನೇರವಾಗಿ ಸತ್ಯದ ಕಡೆಗೆ ಬೆರಳು ತೋರಲು ಆವಿಷ್ಕರಿಸಿರುವುದು. ಫುಕೆತ್ಸು ಎನ್‌ಶೋ ಎಂಬ ಬೌದ್ಧ ಗುರುವನ್ನು ಒಬ್ಬ ಶಿಷ್ಯ "ಮಾತು ಮತ್ತು ಮೌನ ಎರಡೂ ಬಳಕೆಗೆ ಬಾರದಾದಾಗ ತಪ್ಪಿಲ್ಲದೆ ಬಾಳುವುದು ಹೇಗೆ ? ಎಂದು ಕೇಳಿದಾಗ ಆತ ಹೇಳಿದನಂತೆ–

ನಾನು ಯಾವಾಗಲೂ ವಸಂತದಲ್ಲಿ
ತುಂಬಿದುದ್ಯಾನವನ್ನು ನೆನೆಯುತ್ತೇನೆ–
ಆ ಚಕ್ರವಾಕದ ಕರೆ
ಪರಿಮಳದ ಪುಷ್ಪಗಳ ರಾಶಿ.

ಈ ಬಗೆಯ ಆಧಾತ್ಮಿಕ ಕವಿತೆ ಹೈಕುವಿನಲ್ಲಿ ತನ್ನ ಪರಿಪೂರ್ಣತೆಯನ್ನು ಪಡೆಯಿತು. ಹೈಕು ಕೇವಲ ಹದಿನೇಳು ಪದಗಳ ಜಪಾನೀ ಸಾಂಪ್ರದಾಯಿಕ ಕವಿತೆ. ಅದರ ಮೇಲೆ ಝೆನ್ ಬೌದ್ಧಧರ್ಮದ ತೀವ್ರವಾದ ಪ್ರಭಾವವಿದೆ. ಜೀವನದ ಸ್ವರೂಪವನ್ನು ಆಳವಾಗಿ ಪ್ರವೇಶಿಸುವ ಈ ಒಳನೋಟಗಳು ಭಾಷಾಂತರದಲ್ಲೂ ಒಡಮೂಡುತ್ತವೆ.

ಉದುರುವೆಲೆಗಳು
ಒಂದರ ಮೇಲೊಂದು ಬೀಳುತ್ತವೆ;
ಮಳೆ ಮಳೆಯನ್ನು ರಾಚುತ್ತಿದೆ.

8

ವಿಜ್ಞಾನ ಮತ್ತು ಅಧ್ಯಾತ್ಮದ ನಡುವಿನ ಸಮಾನಾಂತರ ರೇಖೆ ಇಲ್ಲಿದೆ– ಭಾಷೆಯ ಮಿತಿಗಳನ್ನು ವಿಜ್ಞಾನಿಗಳೂ ತತ್ವಜ್ಞಾನಿಗಳೂ ಬಲ್ಲರು. ಭೌತಶಾಸ್ತ್ರದ ಶಾಬ್ದಿಕ ಮಾದರಿಗಳು ಹಾಗೂ ಪೌರ್ವಾತ್ಯ ಪುರಾಣ ಪ್ರತಿಮೆಗಳು ಸಮಾನಾಂತರ ವ್ಯವಸ್ಥೆಗಳು. ಹಿಂದೂವಿಗೆ ಶಿವತಾಂಡವದಿಂದ ತಿಳಿಯುವ ಸತ್ಯಗಳು ಕ್ವಾಂಟಂ ಫೀಲ್ಡ್ ಥಿಯರಿಯಿಂದ ಭೌತವಿಜ್ಞಾನಿಗೆ ತಿಳಿಯುವಂಥವೇ ಆಗಿವೆ. ಆ ನರ್ತಿಸುವ ನಟರಾಜ ಮತ್ತು ಈ ಭೌತತತ್ವ ಎರಡೂ ಮನಸ್ಸಿನ ಸೃಷ್ಟಿಗಳೇ. ಎರಡೂ, ಸತ್ಯದ ಬಗ್ಗೆ ಕರ್ತೃವಿನ ಒಳತಿಳಿವನ್ನು ವಿವರಿಸಲು ಇರುವ ಎರಡು ಮಾದರಿಗಳು.

ಹೈಜೆನ್‌ಬರ್ಗ್‌ನ ಕ್ವಾಂಟಂ ಥಿಯರಿ ಸ್ಪಷ್ಟವಾಗಿ ವೈಜ್ಞಾನಿಕ ವಸ್ತುನಿಷ್ಠತೆಯ ಕಾಲ ಮುಗಿಯಿತೆಂಬುದನ್ನು ತೋರುತ್ತದೆ. ಆಧುನಿಕ ಭೌತಶಾಸ್ತ್ರವೂ ಕೂಡ ಮೌಲ್ಯ ಮುಕ್ತ (Value Free) ವಿಜ್ಞಾನದ ಕಲ್ಪನೆಯನ್ನು ಒಪ್ಪುತ್ತಿಲ್ಲ. ವಿಜ್ಞಾನಿಗಳು ತಮ್ಮ ತಮ್ಮ ಸಂಶೋಧನೆಗಳಿಗೆ ಬೌದ್ಧಿಕವಾಗಿ, ಅಷ್ಟೇ ಅಲ್ಲದೆ ನೈತಿಕವಾಗಿಯೂ ಜವಾಬ್ದಾರರಾಗಿರುತ್ತಾರೆ. ಈ ನೈತಿಕ ಜವಾಬ್ದಾರಿಯ ದೃಷ್ಟಿಯಿಂದ ವಿಜ್ಞಾನ ಮತ್ತು ಆಧ್ಯಾತ್ಮಕ್ಕೆ ಇರುವ ಸಂಬಂಧ ಕೇವಲ ಆಸಕ್ತಿ ಕೆರಳಿಸುವ ಮಟ್ಟಕ್ಕೆ ಸೀಮಿತವಾಗಿ ಉಳಿಯುವುದಿಲ್ಲ. ಆಧುನಿಕ ಭೌತಶಾಸ್ತ್ರದ ಸಂಶೋಧನೆಗಳು ಎರಡು ಸಂಪೂರ್ಣ ವಿಭಿನ್ನ ಪಥಗಳಲ್ಲಿ ನಮ್ಮನ್ನು ಕೊಂಡೊಯ್ಯಬಹುದು–ಬುದ್ಧನ ಕಡೆಗೆ ಅಥವಾ ಬಾಂಬಿನ ಕಡೆಗೆ. ತಾನು ಯಾವ ದಾರಿ ಹಿಡಿಯಬೇಕೆಂಬುದು ವಿಜ್ಞಾನಿಯ ಆಯ್ಕೆಗೆ ಬಿಟ್ಟದ್ದಾಗಿದೆ. ಆದರೆ ವಿಜ್ಞಾನಿ–ತಂತ್ರಜ್ಞಾನಿಗಳಲ್ಲಿ ಅರ್ಧದಷ್ಟು ಜನ, ಸೈನ್ಯಶಕ್ತಿಯನ್ನು ವೃದ್ಧಿಸುವ ಯೋಜನೆಗಳಲ್ಲಿ ಕೆಲಸ ಮಾಡುತ್ತ–ಮನುಷ್ಯನ ಸೃಷ್ಟಿಶೀಲತೆ ಮತ್ತು ಕಲ್ಪನಾ ಕೌಶಲಗಳನ್ನು ಹಿಂದೆಂದಿಗಿಂತಲೂ ಹೆಚ್ಚು ಸೂಕ್ಷ್ಮತಮವಾದ ಪರಿಣಾಮಕಾರಿಯಾದ ವಿನಾಶಕಾರಿ ಸಾಧನಗಳನ್ನು ಸೃಷ್ಟಿಸಲು ಹೊರಟಿರುವಾಗ ಬುದ್ಧನ ಪಥದೆಡೆಗೆ ಸಾಗಬೇಕೆಂದು ಬಯಸುವುದು ಸಾಧ್ಯವಾಗಲಾರದು. ಅಣು ವಿಜ್ಞಾನದ ಹೊಸ ಸಂಶೋಧನೆಗಳು ಸಹ ಏಳು ವರ್ಷಗಳ ಹಿಂದೆ ನಾನು ಬರೆದಿರುವ ಈ ಪುಸ್ತಕದ ಸತ್ಯಗಳನ್ನು ಬದಲಿಸುವ ಬದಲು ಸಮರ್ಥಿಸಿವೆ ಎಂದೇ ನನಗನಿಸುತ್ತದೆ. ಇದರಿಂದ ನನ್ನ ಶ್ರದ್ಧೆ ಬಲಗೊಂಡಿದೆ. ಹುಟ್ಟು, ಸಾವು, ಬದುಕು, ಮನಸ್ಸು, ಪ್ರಜ್ಞೆ ಮತ್ತು ವಿಕಾಸ–ಈ ಕಲ್ಪನೆಗಳ ನಡುವಿರುವ ಅರ್ಥಸಾಂಗತ್ಯ ವಿಜ್ಞಾನಕ್ಕೆ ಅನುಭಾವವು ಒಂದು ಗಟ್ಟಿಯಾದ ತಾತ್ವಿಕ ಹಿನ್ನೆಲೆಯನ್ನೊದಗಿಸುತ್ತದೆಂಬ ನನ್ನ ಶ್ರದ್ಧೆಗೆ ಇಂಬು ಕೊಡುತ್ತದೆ. ●

ಯಾವ ದಾರಿಯೇ ಆಗಲಿ ಕೇವಲ ದಾರಿಯಾಗಿರುತ್ತದೆ–ಸ್ವಂತಕ್ಕಾಗಲೀ, ಬೇರೆಯವರಿಗಾಗಲೀ, ನಿನ್ನ ಹೃದಯವು ಈ ದಾರಿಯನ್ನು ತೊರೆಯಬೇಕೆಂದು ಹೇಳಿದರೆ ಹಾಗೆ ಮಾಡುವುದರಲ್ಲಿ ಯಾವ ಹಾನಿಯೂ ಇಲ್ಲ. ಪ್ರತಿಯೊಂದು ಪಥವನ್ನೂ ಹತ್ತಿರದಿಂದ ಪ್ರಜ್ಞಾಪೂರ್ವಕವಾಗಿ ನೋಡು, ನಿನಗೆ ಅವಶ್ಯವೆನ್ನಿಸುವಷ್ಟು ಪರೀಕ್ಷಿಸು, ಅನಂತರ ನಿನ್ನನ್ನೇ ನೀನು ಒಂದು ಪ್ರಶ್ನೆ ಕೇಳಿಕೋ–ಈ ಪಥಕ್ಕೆ ಒಂದು ಹೃದಯವಿದೆಯೇ ? ಇದ್ದರೆ ಅದು ಸತ್ಪಥ. ಇಲ್ಲದಿದ್ದರೆ ನಿಷ್ಫಲ ಪಥ.

—ಕಾರ್ಲೊಸ್ ಕಾಸ್ಟೆನೇಡಾ

(ಡಾನ್ ಯುವಾನನ ಬೋಧನೆಗಳಿಂದ)

ಜುಲೈ–ಆಗಸ್ಟ್, ೧೯೮೦/೫೩

ನನ್ನ ನೆನಪುಗಳು

ಆನಂದ ಕಂದ

ನನ್ನ ವಿಷಮಜ್ವರದ ಕುತ್ತು

೧೯೧೪ರ ಆಗಸ್ಟ್ ಬಂದಿತು. ಸೆಪ್ಟೆಂಬರದಲ್ಲಿ ನಮ್ಮ ಬಲರಾಮಣ್ಣ ಮುಲ್ಕಿ ಪರೀಕ್ಷೆಗಾಗಿ ಬೆಳಗಾವಿಗೆ ಹೋಗುವವನಿದ್ದ. ಆದರೆ ಅರ್ಜಿಯನ್ನು ಕಳಿಸುವುದು ತಡವಾಗಿದ್ದುದರಿಂದ ಪರೀಕ್ಷೆಗೆ ಕೂಡಲು ಒಪ್ಪಿಗೆ ಸರಕಾರದಿಂದ ಸಿಗಲಿಲ್ಲ. ಅದಕ್ಕಾಗಿ ಆತನು ಹಾಗೆಯೇ ಬೆಳಗಾವಿಗೆ ಹೋಗಿ ಪ್ರಯತ್ನಮಾಡಿ ನಿರಾಶನಾಗಿ ಬಂದ. ಆಗ ಮುಲ್ಕಿ ಪರೀಕ್ಷೆಯು ಸೆಪ್ಟೆಂಬರ್ ತಿಂಗಳಲ್ಲಿ ನಡೆಯುತ್ತಿತ್ತು. ಸರಕಾರದಿಂದ ನಡೆಯುವ ಪರೀಕ್ಷೆ ಇದಾದುದರಿಂದ ಬೇಗನೆ ಒಂದು ಮಾಸ್ತರಿಕೆಯೋ, ತಾಲ್ಲೂಕು ಕಛೇರಿಯಲ್ಲಿ ಕಾರಕೂನನೋ ಆಗಬಹುದಾಗಿದ್ದಿತು. ಆದರೆ ಅದು ಸಾಧ್ಯವಾಗಲಿಲ್ಲ. ಸೆಪ್ಟೆಂಬರ್ ತಿಂಗಳ ಕೊನೆಯ ಭಾಗದಲ್ಲಿ ನಾವೆಲ್ಲರೂ ಹಣಮಣ್ಣನನ್ನು ಅಲ್ಲಿಯೇ ಬಿಟ್ಟು ಬೆಟಗೇರಿಗೆ ಹೋಗಬೇಕಾಯಿತು. ಏಕೆಂದರೆ ಅಕ್ಟೋಬರ್‌ನಲ್ಲಿ ನವರಾತ್ರಿಯ ಹಬ್ಬವಿತ್ತು. ಆ ಹಬ್ಬವೆಂದರೆ ನಮ್ಮ ಕುಲಧರ್ಮದ ಹಬ್ಬ. ದೊಡ್ಡ ದೇವರನ್ನು ತೆಗೆಯಬೇಕು. ಘಟಸ್ಥಾಪನೆಯಾಗಿ ನಾಲ್ಕು ಎಣ್ಣೆಯ ನಂದಾದೀಪಗಳನ್ನು, ಎರಡು ತುಪ್ಪದ ನಂದಾದೀಪಗಳನ್ನು ದೇವರ ಮುಂದೆ ಇರಿಸಬೇಕಾಗಿತ್ತು. ಯಾರಾದರೂ ಪುರೋಹಿತರು ಬಂದು ಪೂಜೆ ಮಾಡುವರು. ನಮ್ಮ ಕುಲದೈವತ ತಿರುಪತಿ ವೆಂಕಟೇಶ ಮತ್ತು ಸನ್ನತಿಯ ಚಂದಲಾಪರಮೇಶ್ವರಿಯ ಪೂಜೆ ನಡೆಯಬೇಕು. ನಿತ್ಯವೂ ಅವರಿಗೆ ಹೂರಣದ ಆರತಿಯೂ ಆಗಬೇಕು. ಮನೆಯ ಇಬ್ಬರು ಹಿರಿಯ ಹೆಂಗಸರು ಉಪವಾಸ ಮಾಡಬೇಕಾಗುತ್ತಿತ್ತು. ಇದೆಲ್ಲವನ್ನೂ ಬಿಡಲು ಸಾಧ್ಯವಿರದ ಸಾಂಪ್ರದಾಯಿಕ ಭಾವನೆಯು ನಮ್ಮ ತಾಯಿಗೆ ಬೆಟಗೇರಿಗೆ ಹೋಗಬೇಕೆಂದೇ ಎನಿಸಿತು. ಆದುದರಿಂದ ನಾವೆಲ್ಲರೂ ಬೆಟಗೇರಿಗೆ ಹೋದೆವು.

ಆಶ್ವಿನ ಶುದ್ಧ ಪ್ರತಿಪದೆಯಿಂದ ದಸರೆಯವರೆಗೂ ನವರಾತ್ರಿಯ ಮಹೋತ್ಸವ ನಡೆಯುವುದು. ಐದು ದಿನ ಯಥಾಸ್ಥಿತವಾಗಿ ಪೂಜೆ-ಪುರಸ್ಕಾರಗಳು ನಡೆದುವು. ನಾನು ಬೆಳಗ್ಗಿನಲ್ಲಿ ಬೇಗನೆ ಎದ್ದು ಕಾಡಿಗೆ ಹೋಗಿ ಅನೇಕ ಕಾಡು ಹೂವು, ತುಳಸಿ-ಪತ್ರೆಗಳನ್ನು ತಂಬಿಗೆ ತುಂಬಿ, ತುಂಬಿ ತರುತ್ತಿದ್ದೆ. ಮನೆಯಲ್ಲಿರುವ ನೀಲಾಂಜನಗಳಿಗೆಲ್ಲ ತುಪ್ಪದ ಬತ್ತಿಯನ್ನು ಹಾಕುತ್ತಿದ್ದೆ. ಸಾಲು ದೀಪಗಳಿಗೆ ಎಣ್ಣೆಯ ಹೂಬತ್ತಿಯನ್ನು ಹಾಕಿ ಅಣಿಗೊಳಿಸುತ್ತಿದ್ದೆ. ನಮ್ಮ ಪುರೋಹಿತರು ಪೂಜೆಯ ಕೆಲಸ ಮಾಡುತ್ತಿದ್ದರು. ನಾನು ಆರತಿ ಎತ್ತುವ ಕಾರ್ಯವನ್ನು ಮಡಿಯಿಂದಲೇ ಮಾಡುತ್ತಿದ್ದೆ. ಯಥಾಕ್ರಮವಾಗಿ ನವರಾತ್ರಿಯ ಹಬ್ಬವು ನಡೆಯಿತು. ಆದರೆ ಆರನೇ ದಿನ ನಾನು ಜ್ವರದಿಂದ ಮಲಗಿಕೊಂಡೆ. ನವರಾತ್ರಿಯೇನೋ ಆಗುವಂತೆ ಮುಂದುವರಿದಿರಬಹುದು. ಜ್ವರದಿಂದ ಮಲಗಿದ ನನಗೆ ಮಹಾನವಮಿ-ದಸರೆಗಳು ಹೇಗೆ ಹೋದುವೆಂಬುದು ಗೊತ್ತಾಗಲಿಲ್ಲ. ಮೊದಲ ಮೂರು ದಿನ ಸಾಮಾನ್ಯ ಜ್ವರವೆಂದು ಅಲಕ್ಷ್ಯದಿಂದ ಮನೆಯವರು ಕಂಡರು. ನಾಲ್ಕನೆಯ ದಿನ ಜ್ವರವು ೧೦೪-೧೦೫ ಅಂಶಗಳಷ್ಟು ಏರಿ ಮೈಮೇಲಿನ ಎಚ್ಚರವನ್ನೇ ತಪ್ಪಿಸಿತು. ನಮ್ಮ ತಾಯಿ ಮಾಡುವ ಕಷಾಯದ ಚಿಕಿತ್ಸೆ, ಪಥ್ಯಗಳಿಂದಲೇ ನನ್ನ ಆರೈಕೆ ನಡೆಯಿತು. ಅಂದಿನಿಂದ ಹೊಟ್ಟೆಯಲ್ಲಿ ಅನ್ನವೇ ಹೋಗುತ್ತಿದ್ದಿಲ್ಲ. ಬರೀ ಭತ್ತದರಳಿನ ಗಂಜಿಯಿಂದಲೇ ನಾನು ಬದುಕಿ ಇರಬೇಕಾಯಿತು. ನವರಾತ್ರಿಯ ದಿನಗಳು ಕಳೆದುವಾದರೂ ನನ್ನ ಜ್ವರ ದಿನದಿನಕ್ಕೆ ಹೆಚ್ಚಾಗತೊಡಗಿದವು. ಮೈಮೇಲೆ ಎಚ್ಚರವೂ ಉಳಿಯಲಿಲ್ಲ. ಆಗ ನಮ್ಮ ತಾಯಿ ತುಂಬಾ ಗಾಬರಿಗೊಂಡರು. ಬಲ್ಲ ಜನರನ್ನು ಕರೆದುತಂದು ತೋರಿಸಿದರು. ಹಳ್ಳಿಯಲ್ಲಿ ಒಳ್ಳೆಯ ವೈದ್ಯಕ ಸಹಾಯವು ಎಲ್ಲಿಂದ ಸಿಕ್ಕಬೇಕು ? ಒಬ್ಬ ಹಳ್ಳಿಗ ಎಂತಹದೋ ಬಳ್ಳಿಯಿಂದ ಸಿಂಬೆಯನ್ನು ಮಾಡಿ ಜ್ವರಕ್ಕೆ ಪರಿಹಾರವೆಂದು ನನ್ನ ರಟ್ಟೆಯಲ್ಲಿ ಹಾಕಿದ. ಇನ್ನೊಬ್ಬನು ಕರಿಯ ದಾರದಲ್ಲಿ ಪೋಣಿಸಿದ ತಾಯಿತವನ್ನು ಇನ್ನೊಂದು ರಟ್ಟೆಗೆ ಕಟ್ಟಿದ, ವಿಭೂತಿಯನ್ನು ಮಂತ್ರಿಸಿ ಊದುವ ಮಾಂತ್ರಿಕನೂ ಬಂದು ಬಂದು ಹೋದರು. ಯಾವುದಕ್ಕೂ ನನ್ನ ಜ್ವರವು ಸಗ್ಗಲಿಲ್ಲ. ದಿನದಿನಕ್ಕೆ ಆ ಜ್ವರವು ನನ್ನನ್ನು ಅಸಮರ್ಥಗೊಳಿಸುತ್ತಲೇ ಹೋಯಿತು. ಭತ್ತದರಳಿನ ಅಂಬಲಿಯೂ ಬೇಡವೆಂದು ನಮ್ಮ ತಾಯಿ ಊರೊಳಗಿನ ಅನೇಕ ಜನ ಕೂಸಿನ ತಾಯಿಯರಿಂದ ಮೊಲೆ ಹಾಲನ್ನು ದೊರಕಿಸಿ, ಅದರಿಂದ ನನ್ನ ಹೊಟ್ಟೆ ಶಾಂತವಾಗಲು ನಮ್ಮ ತಾಯಿ ಹವಣಿಸಿದಳು. ಒಂದು ಕಾಜಿನ ಸೀಸೆಯ ತುಂಬ ಮೊಲೆ ಹಾಲು ನಮಗೆ ದೊರೆಯುತ್ತಿತ್ತು. ಹೆಂಗಸರು ಸಹಾನುಭೂತಿಯಿಂದ ತಮ್ಮ ಕೂಸಿಗೆ ಕಡಿಮೆಯಾದರೂ ಚಿಂತೆಯಿಲ್ಲವೆಂದು ನನಗೆ ಹಾಲನ್ನು ಹಿಂಡಿ ಹಿಂಡಿ **ಕೊಡುತ್ತಿದ್ದರಂತೆ.**

ನವರಾತ್ರಿ ಕಳೆದು ೧೩ ದಿನಗಳಾದ ಮೇಲೆ ದೀಪಾವಳಿ ಹಬ್ಬವು ಬಂದರೂ, ನಾನು ಜ್ವರದಿಂದ ಬಳಲುತ್ತ ಬಿದ್ದುಕೊಂಡಿದ್ದೆನಂತೆ. ಈ ವೇಳೆಯಲ್ಲಿ ಯಾರು ಯಾರು ಬಂದು ನೋಡಿ ಸಹಾನುಭೂತಿಯ ಮಾತನಾಡಿ ಹೋದರೋ ನನಗೆ ಗೊತ್ತಿಲ್ಲ. ಬೇರೆಯಾದ ಬಿಂಕದಿಂದ ಇದ್ದ ನಮ್ಮ ಉಡುಪಣ್ಣನು ಬಂದು ಮೈಮೇಲೆ ಕೈಯಾಡಿಸಿ ನನ್ನ ಸ್ಥಿತಿಯನ್ನು ನೋಡಿ ಕಂಬನಿಗರೆದು ಹೋದನಂತೆ. ಅವನ ಹೆಂಡತಿಯು ವಿಚಿತ್ರ ಸ್ವಭಾವದವಳಾದರೂ ನನ್ನನ್ನು ಅತಿಯಾಗಿ ಪ್ರೀತಿಸುತ್ತಿದ್ದುದರಿಂದ ಆಕೆಯೂ ಬಂದು ನನ್ನ ಪರಿಸ್ಥಿತಿಯನ್ನು ಕಣ್ಣಾರೆ ನೋಡಿದಳಂತೆ. ನಮ್ಮ ತಾಯಿಗೆ ನಾನು ಬದುಕಿ ಉಳಿವೆನೆಂಬ ಆಸೆಯೇ ಉಳಿದಿರಲಿಲ್ಲ. ಮೈಯಲ್ಲಿ ದಿನದಿನಕ್ಕೆ ಮಾಂಸವು ಇಲ್ಲವಾಯಿತು. ಅಸ್ಥಿಗಳು ಬಡಕಲಾಗಿ ಹೋದವು. ಕಣ್ಣ ಗುಡ್ಡೆಗಳ ಹೊಳಪು ಮಾಯವಾಗಿ ಅಲ್ಲಿ ಒಂದು ಬಗೆಯ ಬಿಳಿ ಬಣ್ಣವು ಬಂದಿದ್ದಿತಂತೆ. ಮೈ ಮೇಲೆ ನೊಣಗಳು ಕುಳಿತರೆ, ಅವುಗಳನ್ನು ಜಾಡಿಸುವುದಕ್ಕೂ ಸಾಮರ್ಥ್ಯವಿರಲಿಲ್ಲ. ಇಂತಹ ಸ್ಥಿತಿಯಲ್ಲಿ ಈಗಲೋ (ಆಗಲೋ) ಇನ್ನು ತಾಸಿಗೋ ಎಂದು ನಮ್ಮ ತಾಯಿ ನನ್ನ ಮರಣದ ದಾರಿಯನ್ನೇ ಕಾಯುತ್ತಿದ್ದಳು. ಮರಣ ಕಾಲದ ಪೂರ್ವ ಲಕ್ಷಣಗಳೆಲ್ಲವೂ ನನ್ನಲ್ಲಿ ಕಾಣುತ್ತಿದ್ದವು. ಆದರೂ ಮೈಯಲ್ಲಿ ಸುಡುತ್ತಿದ್ದ ಜ್ವರವು ಸ್ವಲ್ಪವೂ ಕಡಿಮೆಯಾಗಲಿಲ್ಲ. ಅಮಾವಾಸ್ಯೆಯ ದಿನವಂತೂ ರಾತ್ರಿಯನ್ನು ನಾನು ಕಳೆಯಲಾರೆನೆಂದು ಎಲ್ಲರಿಗೂ ಭಾವನೆಯಾಗಿದ್ದಿತಂತೆ. ಆದರಲ್ಲಿಯೂ ನಮ್ಮ ತಾಯಿಯ ಸಾಮಾಜಿಕ ಜಾಗೃತಿಯ ಭಾವನೆಯು ನೋಡುವಂತಹದಿದೆ. ಇದು ನನಗೆ ಆಮೇಲೆ ಗೊತ್ತಾದ ವಿಷಯ. ದೀಪಾವಳಿಯ ಪಾಡ್ಯದ ದಿವಸ ನಮ್ಮೂರ ರೈತನೊಬ್ಬನು ನಮ್ಮ ಹನುಮಂತ ದೇವರಿಗೆ ಬುತ್ತಿಯ ಪೂಜೆಯನ್ನು ಕಟ್ಟಿಸುವೆನೆಂದು ಹರಕೆ ಹೊತ್ತಿದ್ದನಂತೆ. ಬುತ್ತಿಯ ಪೂಜೆಯನ್ನು ಕಟ್ಟುವವರೆಂದರೆ ನಮ್ಮ ಜನರ ಹೊರತು ಬೇರೆ ಯಾರೂ ಇರಲಿಲ್ಲ. ಆಗ ಆ ರೈತ ನಮ್ಮ ತಾಯಿಯ ಬಳಿಗೆ ಬಂದು ದೀನವಾಣಿಯಿಂದ ನುಡಿದ—

"ಅವ್ವಾ ನಾನು ಹನುಮಂತ ದೇವರಿಗೆ ಬುತ್ತಿ ಪೂಜೆ ಕಟ್ಬೇಕಂತ ಬೇಡಿಕೊಂಡೀನಿ. ಆದರಂತೆ ಇಂದ ಬುತ್ತೀ ಪೂಜಿ ಕಟ್ಬೇಕಂದ್ರ ನಿಮ್ಮನ್ಯಾಗ ಭಾಳ ಅಡಚಣಿ ಅಂಬೋದು ನನ್ಗ ಗೊತ್ತಾಗೇತ್ರಿ. ಆದ್ರೂ ದೇವ್ರು ಕೆಲ್ಸ ನಾ ಏನ್ ಮಾಡ್ಬೇಕು, ನೀವ ಹೇಳ್ರಿ. ನೀವು ಬ್ಯಾಡಂತ ಹೇಳಿದ್ರ ನಾ ಬಿಡ್ತೀನಿ. ಮಾಡು ಅಂತ ಹೇಳಿದ್ರ ಬುತ್ತಿ ಪೂಜೆ ಮಾಡ್ತೀನಿ. ಇದಕ್ಕೆ ನಿಮ್ಮ ಮನೆಯವರ ಸಹಾಯ ಇರದಿದ್ರ ನಡೆಯೋದ್ಹ್ಯಾಂಗ" ಎಂದು. ಅವನು ಕೇಳಿದ ಮಾತಿಗೆ ನಮ್ಮ ತಾಯಿ ಒಂದೆರಡು ನಿಮಿಷ ಏನೂ ತಿಳಿಯದವಳಾಗಿ ಸುಮ್ಮನೆ ನಿಂತಳು. ಆಮೇಲೆ ಹೀಗೆ ಹೇಳಿದಳು "ಮನ್ಯಾಗ ನನ್ನ ೧೪ ವರ್ಷದ ಮಗ ಈಗೋ ಆಗೋ ಅನ್ನೂ ಪರಿಸ್ಥಿತಿ ಒಳಗ ಬಿದ್ದಾನ. ದೇವ್ರ ಕೆಲ್ಸ

ುತಿ. ಕೊಲ್ಲೋ ದೇವ್ರುಗಿಂತ ಕಾಯೋ ದೇವ್ರು ದೊಡ್ಡವ. ನಮ್ಮ ಜನರ ಸೇವೆ ಂದ ನನ್ನ ಮಗನಿಗೆ ಗುಣವಾದರೂ ಆದೀತು. ನಿನಗೆ ಬುತ್ತೀ ಪೂಜೆ ಕಟ್ಟುವ ಸದಲ್ಲಿ ನಮ್ಮ ಮಕ್ಕಳೆಲ್ಲರೂ ಬರುತ್ತಾರೆ. ಕರೆದುಕೊಂಡು ಹೋಗಬಹುದು" ಂದು.

ಅಂದು ನಮ್ಮ ರಾಘಣ್ಣ, ಬಲರಾಮಣ್ಣ, ಚಿಕ್ಕ ತಮ್ಮ ಗೋಪಾಲ ಇವರು ುತ್ತಿ ಪೂಜೆಯನ್ನು ಕಟ್ಟುವುದಕ್ಕಾಗಿ ಸ್ನಾನ ಮಾಡಿ ಹೋದರಂತೆ–ರಾಘಣ್ಣ, ಲರಾಮಣ್ಣ ಇಬ್ಬರೂ ಅನ್ನದಲ್ಲಿ ಮೊಸರನ್ನು ಸೇರಿಸಿ, ಪೂಜೆ ಕಟ್ಟಲು ಹದವಾಗು ಂತೆ ಮಿದಿದು, ಮಿದಿದು ಕೊಟ್ಟರಂತೆ. ೧೨ ವರ್ಷದ ಗೋಪಾಲ ಆ ಬುತ್ತಿಯನ್ನು ಳೆತ್ತರ ದೇವರ ಮೂರ್ತಿ ಇದ್ದ ಸ್ಥಳದಲ್ಲಿ ಉಬ್ಬು–ತಗ್ಗುಗಳು ಕಾಣದಂತೆ ಮೆತ್ತಿ, ಮಮಾಡಿ ಅದರ ಮೇಲೆ ಒಂದು ಚಿಕ್ಕದಾದ ಹನುಮಂತ ದೇವರ ಮೂರ್ತಿಯನ್ನು ರ್ಮಿಸಿದನಂತೆ. ಅದಕ್ಕೆ ಅರಿಶಿಣ, ಕುಂಕುಮ, ಇದ್ದಲಿಯ ಪುಡಿಗಳಿಂದ ಬಣ್ಣ ೊಟ್ಟು ಮೂರ್ತಿ ಎದ್ದು ಬರುವಂತೆ ಅವನು ರಚಿಸಿದನಂತೆ. ನೋಡಿದವರಿಗೆ ಆ ುತ್ತಿಯು ಮೂರ್ತಿ ಅಮೃತ ಶಿಲೆಯ ಮೂರ್ತಿಯಂತೆ ಕಾಣುತ್ತಿದ್ದಿತಂತೆ. ಊರ ಜನರೆಲ್ಲರೂ ಬಂದೂ ಬಂದು ನೋಡಿ ಅದನ್ನು ಹೊಗಳಿ ಹಾಡಿ ಹೋಗುತ್ತಿದ್ದರಂತೆ. ಇದ್ದುದರಲ್ಲಿಯೇ ಸ್ವಲ್ಪ ಬಿಡುವು ಮಾಡಿಕೊಂಡು ನಮ್ಮ ತಾಯಿಯು ಆ ಮೂರ್ತಿ ಯನ್ನು ನೋಡಿದಳಂತೆ. ಮಗನ ಕಲಾಕುಶಲತೆಗಾಗಿ ಸಂತೋಷಪಡಬೇಕೋ ಅಥವಾ ನಾನು ಮರಣಶಯ್ಯೆಯಲ್ಲಿ ಬಿದ್ದುಕೊಂಡುದನ್ನು ನೋಡಿ ಅಳಬೇಕೋ ? ಎಂಬುದು ಅವಳಿಗೆ ತಿಳಿಯದಂತೆ ಆಯಿತಂತೆ. ನಿಜವಾಗಿ ನೋಡಿದರೆ ನಮ್ಮ ತಾಯಿಯ ಕಂಬನಿ ೨೪ ತಾಸೂ ಹರಿದು ಹೊರಚೆಲ್ಲಬೇಕಾಗಿತ್ತು. ಆದರೆ ಅವಳು ಸಹನೆಯಿಂದ ಕಂಬನಿಗಳನ್ನು ಬಿಗಿಹಿಡಿದುಕೊಂಡಿದ್ದಳು. ಯಾರಾದರೂ ಹೊಸಬರು ಮನೆಗೆ ಬಂದಾಗ ಅವಳ ಕಂಬನಿಗಳು ಅವಳ ಸಹನೆಯನ್ನು ಮೀರಿ ಹೊರಹೊಮ್ಮು ತ್ತಿದ್ದವು. ಇದಾವುದು ನನಗೆ ಗೊತ್ತಿರಲಿಲ್ಲ. ಆಮೇಲೆ ಎಚ್ಚರ ಬಂದಾಗ ಅತ್ತು ಅತ್ತು ನನ್ನ ತಾಯಿ ನನಗೆ ತನಗಾದ ದುಃಖವನ್ನು ಸೂಚಿಸುತ್ತಿದ್ದಳು.

ಮರುದಿನವೇ ಯಾವನೋ ಒಬ್ಬ ಹಳ್ಳಿಯ ವೈದ್ಯನು ಬಂದು ಎಚ್ಚರವಿಲ್ಲದೆ ಬಿದ್ದ ನನ್ನ ದೇಹವನ್ನು ಹಿಡಿದು ನೋಡಿದನಂತೆ. ಜ್ವರಕ್ಕೆ ಬೆದರಿದನಂತೆ. ಆದರೂ ಅವನೊಂದು ಹಳ್ಳಿಯ ಮದ್ದನ್ನು ಹೇಳಿದನಂತೆ–"ಈಸ್ರಿ ಬಳ್ಳಿ ತಂದು ಅದನ್ನು ನೀರಿನೊಳಗೆ ಕುದಿಸಿ, ಕುದಿಯೋ ನೀರಿನಿಂದ ಮೈಗೆ ಉಗಿ ಕೊಟ್ರು ಈ ಜ್ವರಾ ಕಡಿಮೆ ಯಾಗಬಹುದು, ನೋಡ್ರಿ" ಎಂದು. ಅದೊಂದು ಪ್ರಯೋಗವನ್ನು ಮಾಡಬೇಕೆಂದು ನಮ್ಮ ತಾಯಿಯ ಹಂಬಲ. ಆಳೊಬ್ಬ ಸಮೀಪದ ಗುಡ್ಡದಲ್ಲಿ ಅದನ್ನು ಹುಡುಕಿ

ಈಸ್ರಿ ಬಳ್ಳಿಯನ್ನು ತೆಗೆದುಕೊಂಡು ಬಂದ. ಸಂಜೆಯ ಐದು ಗಂಟೆಯ ಸುಮಾರಿಗೆ ಆ ನೀರಿನ ಉಗಿಯನ್ನು ನನ್ನ ಮೈಗೆ ಕೊಟ್ಟರಂತೆ. ನನಗೆ ಕನಸಿನಲ್ಲಿ "ಯಾರೋ ನನ್ನ ಮೈಯನ್ನು ಸುಡುತ್ತಲಿದ್ದಾರೆ" ಎಂದೆನಿಸಿತು. ಅಂದೇ ರಾತ್ರಿಯ ಮೂರು ಗಂಟೆಯ ವೇಳೆ. ನನ್ನ ಮೈಗೆ ಬೆವರು ಬಂದಂತಾಯಿತು. ಅದರೊಂದಿಗೆ ಮೈಮೇಲೆ ಸ್ವಲ್ಪ ಅರಿವೂ ಬಂದಂತಾಗಿತ್ತು. "ಅವ್ವಾ, ನನ್ನ ಮೈಗೆ ಬೆವರು ಬಿದ್ದಾಂಗ ಆಗೇದ" ಎಂದು ಮೆದು ಧ್ವನಿಯಲ್ಲಿ ತಾಯಿಗೆ ಹೇಳಿದೆ. ಆಕೆಗೆ ನಿದ್ದೆಯೆಲ್ಲಿಯದು ? ನನ್ನ ಮೆದು ಧ್ವನಿಯನ್ನು ಕೇಳಿ ಹತ್ತಿರ ಬಂದು ಮೈಯನ್ನೆಲ್ಲ ಮುಟ್ಟಿ ನೋಡಿದಳು. ಮೈಗೆ ತುಂಬಾ ಬೆವರು ಬಂದಿತ್ತು. ಅದನ್ನು ಒಂದು ಒಗೆದ ಪಂಚೆಯಿಂದ ಒರೆಸಿದಳು. ಕುಡಿಯಲು ಸ್ವಲ್ಪ ಆಕಳ ಹಾಲನ್ನು ಕೊಟ್ಟಳು. ಮುಂದೆ ಅರ್ಧ ತಾಸಿನಲ್ಲಿಯೇ ನನ್ನ ಮೈಗೆ ಮತ್ತೆ ಬೆವರು. ತಾಯಿ ನೋಡಿ ಅದನ್ನು ಅರಿವೆಯಿಂದ ಒರೆಸಿದಳು. ಬೆವರು ಬಿಟ್ಟಂತೆಲ್ಲ, ನನ್ನ ಅರಿವು ಹೆಚ್ಚುತ್ತ ನಡೆಯಿತು. ಆದರೆ ಮೈಯಲ್ಲಿಯೇ ಮನೆಮಾಡಿದ ಅಶಕ್ತತೆ ಸ್ವಲ್ಪವೂ ಕಡಿಮೆ ಆಗಲಿಲ್ಲ.

ಮರುದಿನ ಬೆಳಗಿನಲ್ಲಿ ನೋಡಿದರೆ ನನ್ನ ಜ್ವರವೆಲ್ಲವೂ ಆರಿಹೋಗಿದ್ದಿತು. ಆದರೆ ಎದ್ದು ಕೂಡಲು ಬರದು. ನಡೆಯಲು ಕಾಲುಗಳಲ್ಲಿಯೂ ಶಕ್ತಿ ಇಲ್ಲ. ನಮ್ಮ ತಾಯಿಗೆ ಒಂದು ನಿಟ್ಟುಸಿರು ಬಿಡುವಂತಾಯಿತು. ಇದ್ದುದರಲ್ಲಿಯೇ ಆಕೆ ತನ್ನ ಸಮಾಧಾನವನ್ನು ಹೊರಹಾಕಿದಳು. ಜ್ವರವೆಲ್ಲವೂ ನಿಂತಮೇಲೆ ಮೂರು-ನಾಲ್ಕು ದಿನಗಳಿಗೆ ನನ್ನ ಕಣ್ಣು ನಿಚ್ಚಳವಾಗಿ ಕಾಣತೊಡಗಿದ್ದವು. ಮೈಮೇಲಿನ ಚರ್ಮ ಸುಟ್ಟ ಬದನೆಕಾಯಿಯಂತೆ ಆಗಿದ್ದಿತು. ತಲೆಯಲ್ಲಿಯ ಕರಿಯ ಕೂದಲು ಒಂದೊಂದಾಗಿ ಉದುರತೊಡಗಿದ್ದವು. ಎಲುವುಗಳೆಲ್ಲ ಎಣಿಸಲು ಬರುವಷ್ಟು ಮೈಯಿಂದ ನಾನು ಬಡಕನಾಗಿದ್ದೆ. ನನ್ನ ತಾಯಿಯ ಆರೈಕೆ ಇಲ್ಲದೆ ಹೋಗಿದ್ದರೆ ನಾನು ಅಷ್ಟೊಂದು ಬೇಗನೆ ಸುಧಾರಿಸುತ್ತಿರಲಿಲ್ಲ. ಆಗಾಗ ಅವಳು ಕೊಡುತ್ತಿದ್ದ ಪೌಷ್ಟಿಕಾನ್ನಗಳಿಂದ, ಹಾಲಿನಿಂದ ನನ್ನ ಮಾಂಸವು ಬೆಳೆಯುತ್ತ ನಡೆಯಿತು. ಅಂತೂ ನಾನು ವಿಷಮ ಜ್ವರದ ಕುತ್ತಿನಿಂದ ಪಾರಾಗಿ ಉಳಿದೆ. "ಕೊಲ್ಲುವ ದೇವರಿಗಿಂತಲೂ ಕಾಯುವ ದೇವರು ದೊಡ್ಡವನು" ಎಂಬ ನಮ್ಮ ತಾಯಿಯ ನಂಬುಗೆಯನ್ನು ನಾನು ನಂಬಿಕೊಂಡೆ. ಈ ವಿಷಮ-ಜ್ವರದ ಮೂಲಕ ಒಂದೆರಡು ತಿಂಗಳು ನನ್ನಿಂದ ಏನು ಮಾಡಲಿಕ್ಕೂ ಸಾಧ್ಯವಿರಲಿಲ್ಲ. ಆದರೂ ಪ್ರಯತ್ನ ಮಾಡಿ ನಡೆಯಬೇಕೆಂದು ಗೋಡೆಯನ್ನು ಹಿಡಿದು ನಡುಗುತ್ತಲೇ ಎದ್ದು ನಿಂತೆ. ಮುಂದಕ್ಕೆ ಅಡಿಗಳನ್ನು ಇಡಲು ಜಡವೆನಿಸಿದರೂ. ಅಡಿಗಳನ್ನು ಕಿತ್ತಿ ಕಿತ್ತಿ ಮುಂದೆ ಇರಿಸಲು ಅಭ್ಯಾಸ ಮಾಡಿದೆ. ನಾನು ಯಾವ ಪ್ರಯತ್ನವೂ ಇಲ್ಲದೆ ಹಾಸಿಗೆಯ ಮೇಲೆಯೇ ಬಿದ್ದು

ಹೂಂಡಿದ್ದರೆ ನನಗೆ ಅಂದೇ ನಡೆಯಲು ಬಾರದಂತಾಗುತ್ತಿದ್ದಿತೆಂದು ನನ್ನ ಈಗಿನ ಅನಿಸಿಕೆ.

ಒಂದು ಮಾತನ್ನು ಹೇಳಲು ಮರೆತೆ. ದೀವಳಿಗೆಯ ಸೂಟಿಯಲ್ಲಿ ನಮ್ಮ ಹಣಮಣ್ಣನು ಊರಿಗೆ ಬಂದಿದ್ದ. ನನ್ನ ದುಸ್ಥಿತಿಯನ್ನು ಕಂಡು ಅವನೂ ಮರಮರ ಮರುಗಿದ. ಆದರೆ ಆಗ ದೀವಳಿಗೆ ಬಿಡುವು ಆರು ದಿನಗಳದು ಮಾತ್ರ ಇದ್ದುದರಿಂದ ಅವನು ಬಿಡುವಿನ ಕೊನೆಯ ದಿನವೇ ಅನಿವಾರ್ಯವಾಗಿ ಮೂಡಲಗಿಗೆ ಹೊರಟು ಹೋದ. ನಮ್ಮ ಅರಿವೆಯ ಅಂಗಡಿಯ ಕಾರ್ಯವು ರಭಸದಿಂದ ನಡೆದಿತ್ತು. ಅದಕ್ಕಾಗಿ ನಮ್ಮ ರಾಘಣ್ಣನು ಬೇಗನೆ ಮೂಡಲಗಿಗೆ ಹೊರಟು ನಡೆದ.

ಒಂದು ವಿಶೇಷ ಸಂಗತಿಯನ್ನು ಹೇಳುವದೆಂದರೆ ಹಿಂದೆ ನಡೆದ ಜಲಪ್ರಳಯದಲ್ಲಿ ನಮ್ಮ ಹಗೆಯಲ್ಲಿ ನೀರು ಹೊಕ್ಕು ೨೦ ಹೇರು ಜೋಳದಿಂದ ತುಂಬಿದ ಹಗೆಯೆಲ್ಲವೂ ಕೊಳೆತು ಹೋಗಿದ್ದಿತು. ಅಲ್ಲದೆ ೩೦೦ ರೂ. ಬೆಲೆ ಬರಬಹುದಾದ ಕಣಿಕೆ-ಬಣಿವೆಯೂ ಕೊಳೆತುಹೋಗಿ ಹೊಸ ವರ್ಷದ ಬೆಳೆಗೆ ಗೊಬ್ಬರವಾಯಿತು. ನಾವು ಈಗ ಬೆಟಗೇರಿಯಲ್ಲಿಯೇ ಉಳಿದೆವಾದರೂ ತಿನ್ನಲಿಕ್ಕೆ ಕಾಳುಗಳು ಇರಲಿಲ್ಲ. ಕೈಗಡವೆಂದು ರೈತರ ಕಡೆಯಿಂದ ಜೋಳವನ್ನು ತಂದು ಅದರ ನೆರವಿನಿಂದ ಬೆಟಗೇರಿಯಲ್ಲಿಯ ದಿನಗಳನ್ನು ಸಾಗಿಸಬೇಕಾಯಿತು. ನಮ್ಮ ಕೈಯಲ್ಲಿರುವ ಜೋಳದ ಸಂಗ್ರಹವು ಇಲ್ಲದಂತಾಯಿತು. ಕಣಿಕೆಯ ಸಂಗ್ರಹವು ಇಲ್ಲದಂತಾಯಿತು. ಮನೆಯಲ್ಲಿದ್ದ ಬೇಳೆಕಾಳುಗಳೂ, ಬೆಲ್ಲ-ಹುಣಿಸೆ ಹಣ್ಣು, ಬುಸುರುಗಟ್ಟಿಹೋಗಿ ತಿನ್ನಲು ಬಾರದಂತಾಗಿದ್ದವು. ಇದರಿಂದ ನಮ್ಮ ದೈವ ನಮಗೆ ಬಡತನದ ಜೀವನವನ್ನೇ ಒದಗಿಸಿತು. ಪಾಲಿಗೆ ಬಂದದ್ದು ಪಂಚಾಮೃತವೆಂದು ತಿಳಿದು ನಾವು ಬದುಕಿ ಇದ್ದುದರಲ್ಲಿಯೇ ಘನತೆಯನ್ನು ಕಂಡೆವು. (ಸಶೇಷ)

ಹೊಸಓದು

ಪುರುಷೋತ್ತಮ (ಕಾದಂಬರಿ)

ಲೇಖಕರು: **ಯಶವಂತ ಚಿತ್ತಾಲ**

ಪ್ರಕಾಶಕರು: **ಗೀತಾ ಬುಕ್ ಹೌಸ್,** ಕೆ. ಆರ್. ಸರ್ಕಲ್, ಮೈಸೂರು–570 001

ಪುಟ: 591, ಬೆಲೆ: ರೂ. 65–00

ಯಶವಂತ ಚಿತ್ತಾಲರು ತಮ್ಮ 'ಪುರುಷೋತ್ತಮ' ಕಾದಂಬರಿಯಲ್ಲಿ ಮಹಾಕಾವ್ಯದ ಆಕಾಂಕ್ಷೆಯೊಂದಿಗೆ ತೊಡಗುತ್ತಾರೆ. ಆದ್ದರಿಂದ ಈ ಕಾದಂಬರಿಯ ತಂತ್ರದಲ್ಲಿ ಅಂಥ ಅನೇಕ ಲಕ್ಷಣಗಳನ್ನು ಕಾಣುತ್ತೇವೆ.

ಬ್ರೆಕ್ಟ್‌ನ ಎಪಿಕ್ ಥಿಯೇಟರ್ ರೀತಿಯಲ್ಲಿ ಪ್ರತಿಯೊಂದು ದೃಶ್ಯದ ಆರಂಭಕ್ಕೆ ಆ ದೃಶ್ಯದ ಸಾರವನ್ನು ಒಂದು ಕೋರಸ್ಸಿನ ಮೂಲಕ ಕೊಟ್ಟು ಪ್ರೇಕ್ಷಕನನ್ನು ನಾಟಕದ ಪಾತ್ರಗಳೊಡನೆ ತಲ್ಲೀನನಾಗುವ ಅಪಾಯದಿಂದ ರಕ್ಷಿಸಲಾಗುತ್ತದೆ. ಅದೇ ರೀತಿ ಮಹಾಕಾವ್ಯಗಳ ಪ್ರತಿಯೊಂದು ಭಾಗದ ಆರಂಭಕ್ಕೆ ಸೂಚನಾ ಪದ್ಯಗಳಿಂದ ಆ ಭಾಗದ ಸಾರವನ್ನು ಕೊಡುವ ಮೂಲಕ ಕೇಳುಗನ ಶ್ರಾವಕ ವ್ಯಕ್ತಿತ್ವವನ್ನು ರಕ್ಷಿಸಲಾಗುತ್ತದೆ. 'ಪುರುಷೋತ್ತಮ' ಕಾದಂಬರಿಯಲ್ಲಿ ಇಂಥ ತಂತ್ರದ ಬಳಕೆ ಆದದ್ದನ್ನು ಕಾಣುತ್ತೇವೆ. ಆದರೆ ಈ ಕಾದಂಬರಿಯಲ್ಲಿ, ಭಾಗಗಳ ಮೊದಲಿಗೆ ಇಂಥ ಘೋಷವಾಕ್ಯಗಳು ಬಂದಿರದೇ ಅವು ಅಲ್ಲಲ್ಲಿ ಮಧ್ಯ ಮಧ್ಯ ಸೇರಿಕೊಂಡಿವೆ. ಕೆಲವು ಉದಾಹರಣೆಗಳಿಂದ ಇದು ಸ್ಪಷ್ಟವಾಗಬಹುದು:

—ಒಂದು ಅರ್ಥದಲ್ಲಿ ಹನೇಹಳ್ಳಿಯೊಳಗಿನ ಪ್ರತಿಯೊಂದೂ ಬೆರಳು ಮಾಡುತ್ತಿದ್ದಂತಿದ್ದ ಆ ಮೂಲ ವಿಗ್ರಹದ ಹುಡುಕಾಟದಲ್ಲಿದ್ದ ಪುರುಷೋತ್ತಮ ಎನ್ನಬಹುದು. ತನ್ನ ಮನಸ್ಸಿನಲ್ಲಿ ಏಳಲು ತೊಡಗುವ ಹಲವಾರು ಭಾವನೆಗಳಿಗೆ ಪ್ರೇರಣೆಯಾಗುತ್ತಿದ್ದದ್ದು ಇದಲ್ಲ; ಇದರಾಚೆಯದಿನ್ನೇನೋ ಎನ್ನುವಂತಹ ನೋಟ ಅವನ ಕಣ್ಣುಗಳಲ್ಲಿ ಇಳಿಯುತ್ತಿತ್ತು. (ಪುಟ: 9)

—ತನಗಿನ್ನೂ ಸರಿಯಾಗಿ ಗೊತ್ತಿಲ್ಲದ ತನ್ನ ಮನೆತನದ ಇತಿಹಾಸದೊಳಗಿನ ಹಲವು ನಿಗೂಢಗಳಿಗೆ ತೆಕ್ಕೆ ಹಾಕಿಕೊಂಡಿದ್ದ ಈ ಭೇಟಿ ತನ್ನ ಮುಂದಿನ ಆಯುಷ್ಯದ ಉದ್ದಕ್ಕೂ ಸವಾಲಾಗಲಿದೆ ಎನ್ನುವುದರ ಬಗ್ಗೆ ಮಾತ್ರ, ಪುರುಷೋತ್ತಮನಿಗೆ ಅಂಥ ಗಳಿಗೆಯಲ್ಲೂ ಸಂಶಯವಿರಲಿಲ್ಲ. (ಪುಟ: 23)

—ಈ ಅನ್ನಿಸಿಕೆ ಮುಂದಿನ ದಿನಗಳಲ್ಲಿ ಎಂಥೆಲ್ಲ ಭೀಕರ ಅನುಭವಗಳ ರೂಪಧಾರಣೆ ಮಾಡಲಿತ್ತು ಎನ್ನುವ ಕಲ್ಪನೆ ಮಾತ್ರ ಶ್ರೀಧರನಿಗೆ ಆ ಗಳಿಗೆಯಲ್ಲಿರುವುದು ಶಕ್ಯವಿರಲಿಲ್ಲ. (ಪುಟ: 169)

ಇತ್ಯಾದಿಗಳು.

ಇಂಥ ತಂತ್ರ ಓದುಗನನ್ನು ಓದುಗನಾಗಿ ಉಳಿಸುತ್ತದೆ ಮತ್ತು ಲೇಖಕನನ್ನು 'ಸರ್ವಜ್ಞ' ಸ್ಥಾನದಲ್ಲಿ ಇರಿಸುತ್ತದೆ. ಪಾತ್ರಗಳಿಗೆ ತಿಳಿಯದ್ದು ಲೇಖಕರಿಗೆ ಈಗಾಗಲೇ ಸುಸ್ಪಷ್ಟವಾಗಿರುತ್ತದೆ. ರೋಮ್ಯಾಂಟಿಸಿಸ್ಮ್‌ನಿಂದ ಹೆಚ್ಚು ಪ್ರಭಾವ ಪಡೆಯುತ್ತಿರುವಂಥ ನಮ್ಮ ಇತ್ತೀಚೆಗಿನ ವಿಮರ್ಶೆ, ಲೇಖಕನ ಇಂಥ ಸರ್ವಜ್ಞತ್ವವನ್ನು anti creative ಆದದ್ದು ಎಂದು ಭಾವಿಸುತ್ತದೆ. ಆದರೆ ಈ ರೀತಿಯ ಸೂತ್ರ ಭಾವಗೀತೆಗಳ ವಿಮರ್ಶೆಯಲ್ಲಿ ಬಳಸಬಹುದಾದಂಥದು. ಬ್ರೆಕ್ಟ್‌ನ ಥಿಯೇಟರ್ ಆಗಲೀ, ಭಾರತದ ಪಾರಂಪರಿಕ ನಾಟ್ಯರಂಗವು ಒಳಗೊಳ್ಳುತ್ತಿದ್ದ ಸೂತ್ರಧಾರನ ಕಲ್ಪನೆಯಾಗಲೀ ಪ್ರೇಕ್ಷಕನಿಗೆ, ತನ್ನ ವ್ಯಕ್ತಿತ್ವವನ್ನು ಕಾಯ್ದುಕೊಳ್ಳುತ್ತಲೇ ರಸಾಸ್ವಾದನೆ ಪಡೆಯಲು ನೀಡುವ ಸಹಾಯವನ್ನು ನಾವು ಇಲ್ಲಿ ಗಮನಿಸಬಹುದು. ಆದರೆ ಆಧುನಿಕ ಏಕಾಂಕ ನಾಟಕಗಳಲ್ಲಿ ಸೂತ್ರಧಾರನ ಪಾತ್ರ ತರುವುದಾದರೆ ಅದು ಬಹುಶಃ ಸುಪರ್‌ಫ್ಲ್ಯುಯಿಸ್ ಆಗಬಹುದೆಂದು ತೋರುತ್ತದೆ. ಅಂದರೆ ವಸ್ತುವಿನ ವ್ಯಾಪ್ತಿ ವಿಶಾಲವಾಗಿದ್ದಾಗ ಮಹಾಕಾವ್ಯದ ಈ ತಂತ್ರ ಸಹಜವೆನಿಸುತ್ತದೆ. ಚಿತ್ತಾಲರು ಪುರುಷೋತ್ತಮ ಕಾದಂಬರಿಯಲ್ಲಿ ನಿರ್ವಹಿಸುವ ವಸ್ತುವಿನ ಗುರುತ್ವವು ಇಂಥ ಶೈಲಿಯನ್ನು ತಾಳಿಕೊಳ್ಳುವಂಥದ್ದಾಗಿದೆ. ಅಷ್ಟೇ ಅಲ್ಲದೆ ಕಾದಂಬರಿಯೊಳಗೆ ಹುಟ್ಟುವ ಭಾವಾವೇಶದ ಕೇಂದ್ರಸ್ತ ಬಲಗಳ ಸೆಳವಿನಿಂದ ತಪ್ಪಿಸಿಕೊಂಡು ವಸ್ತುವನ್ನು ನಿರ್ಲಿಪ್ತವಾಗಿ ಗ್ರಹಿಸಲು ಓದುಗನಿಗೆ ಈ ತಂತ್ರ ಸಹಾಯ ನೀಡುತ್ತದೆ.

O

ಮಹಾಕಾವ್ಯ ಒಂದು ಯುಗದ ಜನಾಂಗದ ಪ್ರಜ್ಞೆಯ ಸಮಗ್ರವಾದ ಗ್ರಹಿಕೆಗಾಗಿ ಪ್ರಯತ್ನಿಸುತ್ತದೆನ್ನುತ್ತೇವೆ. 'ಪುರುಷೋತ್ತಮ' ಕೂಡ ಇಂಥ ಒಂದು ಗ್ರಹಿಕೆಗಾಗಿಯೇ ಪ್ರಯತ್ನಿಸುತ್ತದೆ. ಔದ್ಯಮೀಕರಣ ಮತ್ತು ನಗರೀಕರಣಗಳ ಆಕರ್ಷಣೆಗೆ ಸಿಕ್ಕ ಆಧುನಿಕ ಸಮಾಜ ಮಾನವೀಯ ಜೀವಂತ ಮೌಲ್ಯಗಳನ್ನು ಬಿಟ್ಟುಕೊಟ್ಟು ವಸ್ತು ಮೌಲ್ಯಗಳನ್ನು ಆದರಿಸುತ್ತಿರುವುದು, ನಿರ್ದಯ ಹಣ ಮತ್ತು ಕ್ರೂರರಾಜಕಾರಣ ಇವು ಚಲಾವಣೆಯ ವಸ್ತುಗಳಾಗುತ್ತಿರುವುದನ್ನು ಕಾದಂಬರಿ ವಿಸ್ತೃತವಾಗಿ ಪರಿಭಾವಿಸುತ್ತದೆ. ಇಂಥದೇ ವಸ್ತು ಚಿತ್ತಾಲರ 'ಶಿಕಾರಿ' ಕಾದಂಬರಿಯ ಗ್ರಹಿಕೆಯಾಗಿತ್ತು. ಆದರೆ 'ಪುರುಷೋತ್ತಮ' 'ಶಿಕಾರಿ'ಗಿಂತ ನೂರು ಹೆಜ್ಜೆ

ಮುಂದೆ ಬಂದಿದೆ. 'ಶಿಕಾರಿ'ಯ ನಾಗಪ್ಪ ಏಕಾಂಗಿಯಾಗಿದ್ದ. ಸುತ್ತಲಿನ ಸಮಾಜವೆಲ್ಲ ದುಷ್ಟವಾಗಿದ್ದರೆ ಇವನೊಬ್ಬ ನಿಷ್ಪಾಪಿಯಾಗಿದ್ದ. ಮನುಷ್ಯ ಸಂಬಂಧಗಳೆಲ್ಲ ಅಲ್ಲಿ ಕೊಚ್ಚಿಹೋಗಿದ್ದವು ಮತ್ತು ಇದೆಲ್ಲದರಿಂದ liberate ಆಗಲು ನಾಗಪ್ಪ ಹುಡುಕಿ ಕೊಳ್ಳುವ ಮಾರ್ಗ ಅತ್ಯಂತ ವೈಯುಕ್ತಿಕವಾದುದಾಗಿತ್ತು. ಇವೆಲ್ಲದರ ಜೊತೆಗೆ ನಾಗಪ್ಪ ಫ್ರಾಮ್, ಲಾರೆಂಝರನ್ನು ಉದ್ದುದ್ದವಾಗಿ ಉದ್ಧರಿಸುತ್ತ ಭಾರತೀಯ ಮಣ್ಣಿಗೆ ಗಾಬರಿ ಹುಟ್ಟಿಸುತ್ತಿದ್ದನು. ಆದರೆ 'ಪುರುಷೋತ್ತಮ' ಕಾದಂಬರಿ ಭಾರತೀಯ ಮೂಲಭೂತ ಮನೋಸ್ಥಿತಿಯಾದ ಧಾರ್ಮಿಕ ಭಿತ್ತಿಯಲ್ಲಿ ನೆಲೆಗೊಳ್ಳು ತ್ತದೆ. ಹೀಗೆ ಧಾರ್ಮಿಕ ಭಿತ್ತಿಯಲ್ಲಿ ನೆಲೆಗೊಳ್ಳುತ್ತಲೇ ಸದ್ಯದ ದುರಂತ ಸಂದರ್ಭ ದಿಂದ ಬಿಡುಗಡೆ ಹೊಂದಲು ಸನಾತನಕ್ಕಿಂತ ತುಂಬ ಭಿನ್ನವಾದ ಮಾರ್ಗ ತೋರುತ್ತದೆ. ಮುತ್ತಜ್ಜ ಕಟ್ಟಿಸಿದ ಪ್ರೀತಿಯ ತಾಣ, ಪವಿತ್ರವಾದದ್ದು-ಅತ್ಯಂತ ಆಪ್ತವಾದದ್ದೂ ಆದ ಮನೆಯನ್ನು ಪುರುಷೋತ್ತಮ ಹಣ ಮತ್ತು ರಾಜಕಾರಣಗಳೆರಡರ ವಿರುದ್ಧ ಹೋರಾಡಿ ರಕ್ಷಿಸಿಕೊಳ್ಳುತ್ತಾನೆ. ಮುಂದೆ ಆ ಮನೆಯನ್ನು ಚಿಕ್ಕಮಕ್ಕಳ ಧರ್ಮಾರ್ಥ ಚಿಕಿತ್ಸಾಲಯವಾಗಿ ಮಾರ್ಪಡಿಸುವ ನಿರ್ಧಾರವು ಸನಾತನ ಪ್ರೀತಿಯ ಬಳ್ಳಿಯು ಆಧುನಿಕದ ಗಾಳಿಯಲ್ಲಿ ಬಿಡಬಹುದಾದ ಸುಂದರ ಹೂವಿನ ರೀತಿಯನ್ನು ಹೇಳುತ್ತದೆ. ಕಮಲಾವತಿಯ ಬರಡುಗೊಂಡ ಬದುಕಿಗೆ ಮರಳಿ ಫಲವಂತಿಕೆ ನೀಡುವ ಮಾನವೀಯ ವಾದ ಕ್ರಾಂತಿಕಾರೀ ನಿರ್ಧಾರದಲ್ಲಿ ನೆಲೆಗೊಳ್ಳುತ್ತದೆ.

'ಪುರುಷೋತ್ತಮ' ಕಾದಂಬರಿಯು ಮನುಷ್ಯನ ಮೂಲಪ್ರವೃತ್ತಿಗಳ ಗ್ರಹಿಕೆ ಯಲ್ಲಿ ಕೂಡ ತೊಡಗುತ್ತದೆ. ಕ್ರೌರ್ಯ. ಪ್ರೀತಿ, ಅಂತಃಕರಣಗಳನ್ನು ಕುರಿತಂತೆ ಚಿತ್ತಾಲರು ಈ ಕಾದಂಬರಿಯಲ್ಲಿ 'ಶಿಕಾರಿ' ಕಾದಂಬರಿಯಲ್ಲಿಗಿಂತ ಗುಣಾತ್ಮಕವಾಗಿ ಭಿನ್ನರಾಗಿದ್ದಾರೆ. ಅಲ್ಲಿ ಲಾರೆಂಝನ ದಟ್ಟ ಪ್ರಭಾವದಲ್ಲಿ ಕ್ರೌರ್ಯವನ್ನು ಮನುಷ್ಯನ ಮೂಲಸ್ಥಾಯಿಯಾಗಿ ಗುರುತಿಸಿದ್ದರು. ಆದರೆ ಇಲ್ಲಿ, ಪ್ರೀತಿ ಅಂತಃಕರಣಗಳು ಹೆಚ್ಚು ಬಲವಾದ ಪ್ರವೃತ್ತಿಗಳಾಗಿ ಮೂಡಿಬಂದಿವೆ. ಹತ್ತುದಿನ ಬದುಕಿ ತೀರಿ ಹೋದ ಮಗುವಿನಿಂದ ತೀವ್ರವಾಗಿ ಅತೃಪ್ತಗೊಂಡ ಮಾತೃವಾತ್ಸಲ್ಯವು ಝೋಪಡ ಪಟ್ಟಿಯೊಂದರ ಎಳೆಯ ಅನಾಥ ಕೂಸನ್ನು ತಬ್ಬಿಕೊಂಡು ದ್ರವಿಸುತ್ತದೆ. ಈ ಮಗುವಿನ ಬಗೆಗಿನ ಮಾತೃವಾತ್ಸಲ್ಯದಲ್ಲಿ ಸಾವಿತ್ರಿಗೆ ಪುನರ್ವಿವಾಹ ಬೇಕೆನಿಸುವುದಿಲ್ಲ. ಹಾಗೆಯೇ 'ಟೆರಿಟೋರಿಯಾಲಿಸ್ಮ್' ಪ್ರವೃತ್ತಿಯ ರೂಪಗಳಾದ ಮನೆ-ಆಸ್ತಿಯ ಬಗೆಗಿನ ಪ್ರೀತಿ ಔನ್ನತೀಕರಣಗೊಳ್ಳುವ ಸಾಧ್ಯತೆಯನ್ನು ಕಾದಂಬರಿ ಸೂಚಿಸುತ್ತದೆ.

ಕಾದಂಬರಿಯಲ್ಲಿ ಬರುವ ಸದೂ ಮಾಮಾ ಅವಧೂತನಂಥವನು. ನಿತ್ಯ ಪರಿವ್ರಾಜಕ, ಪರೋಪಕಾರಿ. ಝೋಪಡೀಬಾಬಾ ಆದ ಇವನು ಝೋಪಡಪಟ್ಟಿಯ

ಬಡವರ ಸೇವೆಗೆ ತನ್ನನ್ನು ತೊಡಗಿಸಿಕೊಂಡವನು. ಇವನು ಸಂಸಾರಿಯಲ್ಲ. ಆದರೆ ತನ್ನ ಇಳಿವಯಸ್ಸಿನಲ್ಲಿ ಸಾವಿತ್ರಿಗೆ ಹೇಳುತ್ತಾನೆ–'ಸತ್ಯಸಂಗತಿ ತಿಳಿದ ಮೇಲೆ ನಿನ್ನನ್ನು ಅಮ್ಮ ಎಂದು ಒಪ್ಪಿಕೊಳ್ಳಲು ಪುರುಷೋತ್ತಮನು ನಿರಾಕರಿಸಿದರೆ. ಈಗಲೂ ನಾನು ನಿನ್ನನ್ನು ಮದುವೆಯಾಗಲು ಸಿದ್ಧನಿದ್ದೇನೆ ! ಹೆದರಬೇಡ'. ಹೀಗೆ ಮಾಡಲು ಸದೂ ಮಾಮಾ ಶಕ್ತನಾಗಿದ್ದನು. 'ಕರ್ಮಕಾಂಡ'ದಲ್ಲಿ, ಗೊಂದಲದಲ್ಲಿ ಸಿಕ್ಕವರಿಗೆ ಇವನು ಬುದ್ಧನ ಜೀವನದ ಉದಾಹರಣೆ ವಿವರಿಸುತ್ತ ನಿಜದ ದಾರಿಯನ್ನು ತೋರಿಸುವವನು. ಅಂದರೆ, ಕಾದಂಬರಿ ಇವನ ಮೂಲಕ ನಮಗೆ ಭಾರತೀಯ ಸಂದರ್ಭದಲ್ಲಿ ಬಿಡುಗಡೆಯ ಒಂದು ಧಾರ್ಮಿಕ ಮಾರ್ಗವನ್ನು ಸೂಚಿಸುವಂತೆ ತೋರುತ್ತದೆ. ಪ್ರಾಯಶಃ ಕಾದಂಬರಿಯಲ್ಲಿ ಬರುವ ಪುರುಷೋತ್ತಮ ಕೇವಲ ಅಂಕಿತನಾಮದ ಪುರುಷೋತ್ತಮ. ನಿಜವಾದ ಪುರುಷೋತ್ತಮ ಈ ಸದೂಮಾಮಾ ಆಗಿದ್ದಾನೆ. ಅಂಕಿತನಾಮದ ಪುರುಷೋತ್ತಮ ಅನ್ವರ್ಥಕ ಪುರುಷೋತ್ತಮನಾಗಿ ಮಾಗುವ ದಾರಿಯ ಅನ್ವೇಷಣೆ ಕಾದಂಬರಿಯ ಒಂದು ಮುಖ್ಯವಾದ ಎಳೆಯಾಗಿದೆ.

O

ಹೊಸ ಓದು ಶೀರ್ಷಿಕೆಯಡಿ ಬರೆಯುತ್ತಿರುವ ನನ್ನ ಈ ಲೇಖನ 'ಪುರುಷೋತ್ತಮ' ಕಾದಂಬರಿಯ ವಿಮರ್ಶೆಯಲ್ಲ. ಪುಟಗಳಲ್ಲಿ ವಸ್ತುವಿನ ಸಂಕೀರ್ಣತೆಯಲ್ಲಿ ವಿಶಾಲವಾದ ಈ ಕಾದಂಬರಿಗೆ ವಿಸ್ತೃತವಾದ ವಿಮರ್ಶೆಯ ಅಗತ್ಯವಿದೆ.

—ರಾಘವೇಂದ್ರ ಪಾಟೀಲ

ಧಾರೆ (ಕವನ ಸಂಕಲನ)

ಲೇಖಕರು: **ವೇಣುಗೋಪಾಲ ಸೊರಬ**

ಪ್ರಕಾಶಕರು: ಐ. ಬಿ. ಹೆಚ್. ಪ್ರಕಾಶನ, ಬೆಂಗಳೂರು

ಬೆಲೆ: ರೂ. 30–00

ಸಂಕಲನದಲ್ಲಿ 102 ಕವಿತೆಗಳಿವೆ. ಕಾಯಿಸಿ ಸೋಸಿದರೆ–ಕರಗಿಸಿ ಎರಕ ಹೊಯ್ದರೆ ಹತ್ತಾರು ಕವಿತೆಗಳಾಗಿ ಹರಳುಗಟ್ಟಬಹುದಾದ ಕವಿತಾ ಖಂಡಗಳು ಸೊರಬ ಅವರ ಈ ಸಂಕಲನದಲ್ಲಿ ನೂರ ಎರಡು ಕವಿತೆಗಳಲ್ಲಿ ಹರಡಿಕೊಂಡಿವೆ. ಆದರಿಂದಲೇ ಇಡಿಯ ಕವನ ಸಂಕಲನ ಏಕತಾನತೆಯನ್ನು ಧ್ವನಿಸುತ್ತದೆ.

ಇದರಲ್ಲಿನ ಬಹುತೇಕ ಕವಿತೆಗಳು ಗಂಡು–ಹೆಣ್ಣಿನ ಸಂಬಂಧಗಳನ್ನು ಪ್ರೇರಣೆಯಾಗಿ ಉಳ್ಳವು. ಇದಕ್ಕೆ' ಅಪವಾದವೆಂದರೆ ಸ್ವರ್ಣಮಂದಿರದ ದಾಳಿಯನ್ನು ಕುರಿತು ಬರೆದದ್ದೆಂದು ಕವಿಯೇ ಹೇಳಿಕೊಂಡಿರುವ 'ಅಂತರಂಗದ ಕೋಟೆ' ಎಂಬ ಕವನ.

ಕೆಲವು ಕವಿತೆಗಳು ಹೆಣ್ಣಿನ ಮನದ ಭಾವವನ್ನು ಆರೋಪಿಸಿಕೊಂಡೋ, ಊಹಿಸಿಕೊಂಡೋ ಬರೆದವು. ಹೀಗೆ ಹೆಣ್ಣಿನ ಮನದ ಭಾವವನ್ನು ಆರೋಪಿಸಿಕೊಂಡು ಬರೆಯುವ ರೀತಿ ಕುತೂಹಲಕಾರಿಯಾಗಿದೆ: 'ತನ್ನೆದೆಯ ಕೋಶಗಳಿಗೆಲ್ಲ ತನ್ನನ್ನು ಒಳಗೆ ಬಿಟ್ಟುಕೊಳ್ಳದ' "ಮನಸುಖರಾಯ"ನಾದ ಗಂಡನ್ನು "ಬಂದಳಿಕೆ ಎನ್ನದಿರು ಎನ್ನ ನಾ ನಿನಗೆ ಅಲಂಕಾರವಷ್ಟೇ ಏನು" ಎಂದು "ಸಂಘರ್ಷಕ್ಕಿಳಿಯುವವಳಲ್ಲದ" ಹೆಣ್ಣು ಕೇಳಿದಂತಿದೆ. ಹೆಣ್ಣಿಗೆ ಬರುವ ಅಸ್ತಿತ್ವ ರಾಹಿತ್ಯದ ಸ್ಥಿತಿಯನ್ನು

"............ ....ಇರಬಹುದೇ
ರೇಷ್ಮೆಗೂಡಿನೊಳಗಿನ್ನೂ ತನ್ನದೇ ಅಸ್ತಿತ್ವ ಸಾರುವ
ಹುಳು ಒಮ್ಮೆ ಎಳೆತೆಗೆದ ಮೇಲೆ"

ಎಂಬ ಮಾತಿನಲ್ಲಿ ಹಿಡಿದಿಡುವ ಪ್ರಯತ್ನವಿದೆ. ಇವರ ಕವಿತೆಗಳ ಒಟ್ಟಾರೆ ದನಿ

"ಮಂಚದ ಮೇಲೆ ಹಾಸು–ಕಂಪಿನ ಬೀಸು
ಸದಾ ಹಾಸಿಕೊಂಡೇ ಇರುವ ವಿಕಾರಕ್ಕೆ ಏನೆನ್ನಲಿ" ಎನ್ನುವಂಥದು.

ಗದ್ಯಮಯವಾದ ಸಾಲುಗಳ ನಡುವೆ ಎಲ್ಲೋ ಒಂದೊಂದು ಕಡೆ–

"ಚಿಂತಾತುರದ ಕಣ್ಣವಲೆಗಳು ಹರಿಯುವತನಕ
ಬರಿಯ ಮಾತಿನದೇನು ತವಕ"

ಎಂಬಂಥ ಪದ್ಯಲಯದ ಮಾತುಗಳು ಮಿಂಚುತ್ತವೆ; ಆದರೆ ಸ್ಥಾಯಿಯಾಗಿ ಬೆಳೆದು ಅಖಂಡವಾದ ಕವನದ ಕಟ್ಟಡ ಕಟ್ಟುವುದಿಲ್ಲ.

ಈ ಇಡೀ ಸಂಕಲನದಲ್ಲಿ ಆಶ್ಚರ್ಯ ಹುಟ್ಟಿಸುವಂಥ, ಅಂಶಗಳೆಂದರೆ ತಮ್ಮ ಸಂಕಲನಕ್ಕೆ ತಾವೇ ಬರೆದುಕೊಂಡಿರುವ ಮುನ್ನುಡಿಯಲ್ಲಿ ಇವರು "ಇಲ್ಲಿ ಭಾಷಿಕ ಅನ್ವೇಷಣೆಯ ಮೇಲೆ ಒತ್ತು ಕೊಡಲಾಗಿದೆ. ಕನ್ನಡ ಕಾವ್ಯದಲ್ಲಿ ಆಡುಮಾತಿನ ಲಯದ ಶೃತಿಯನ್ನು ಹಿಡಿಯುವ ಪ್ರಯತ್ನ ಸಾಕಷ್ಟು ಗಮನಾರ್ಹವಾಗಿ ನಡೆದಿಲ್ಲ" ಎಂದು ತಮ್ಮಷ್ಟಕ್ಕೆ ತಾವೇ ನಿರ್ಧರಿಸಿ ಮೌಲ್ಯಮಾಪನ ಮಾಡಿಕೊಂಡಿರುವುದು ಮತ್ತು ಬೆನ್ನುಡಿಯಲ್ಲಿ "ಶ್ರೀ ವೇಣುಗೋಪಾಲ ಸೊರಬ ಅವರು ನವ್ಯ ನವೋದಯ, ದಲಿತ ಬಂಡಾಯಗಳಲ್ಲಿನ ಅತ್ಯುತ್ತಮ ಅಂಶಗಳನ್ನು ಮೈಗೂಡಿಸಿಕೊಂಡು, ಕನ್ನಡ ಕಾವ್ಯರಸಿಕರ ಮನದಲ್ಲಿ ತಮ್ಮದೇ ಆದ ಸ್ಥಾನವನ್ನು ಪಡೆದುಕೊಂಡಿದ್ದಾರೆ" ಎಂದು ಹೇಳಿರುವುದು !

—ಸ. ಉಷಾ

ಅರ್ಧಸತ್ಯದ ಹುಡುಗಿ (ಕವನ ಸಂಕಲನ)

ಪ್ರಕಾಶಕರು: ಸಂಕ್ರಮಣ ಪ್ರಕಾಶನ, ಧಾರವಾಡ, ೧೯೮೯
ಪುಟ: ೮೦, ಬೆಲೆ: ರೂ. ೧೫

ಎಂಭತ್ತೆರಡರಲ್ಲಿ ಬಂದ ಚಂ.ಪಾ. ಅವರ "ಹೂವು ಹೆಣ್ಣು ತಾರೆ" ಓದಿದಾಗ ಈ ಚಂ.ಪಾ. ಕವನಗಳೆಂದರೆ ವರ್ತಮಾನ ಪತ್ರಿಕೆಯೇ ಪದ್ಯವಾದಂತೆ ಎನಿಸಿತ್ತು. ದಿನದಿನದ ಮುಖ್ಯ ಸುದ್ದಿಗಳು, ದೇಶದ–ಲೋಕದ ರಾಜಕೀಯ ನಾಯಕರು, ಬಡವರು, ಶೋಷಿತರು, ಕವಿಗಳು, ತಾರೆಯರು–ಈ ಎಲ್ಲರ ಬಿಡಿ ಬದುಕಿನ ಚಿತ್ರಗಳ ಮೂಲಕ, ಮಾನವ ಬದುಕಿನ ಅರ್ಥಕ್ಕಾಗಿ ತಡಕಾಡಲು ಈ ಕವಿಗೆ ವ್ಯಂಗ್ಯದ ಈ ಮೊನಚು ದಾರಿ ಬಿಟ್ಟರೆ ಬೇರೆ ಇಲ್ಲವೆ ? ಎನಿಸಿತ್ತು. ಅಂದರೂ ಹಳೆತ ನಂಬಿಕೆಗಳನ್ನ ತಲೆದಿಂಬಿಗಿಟ್ಟು ಮಲಗ ಬಯಸುವ ಸಂತೃಪ್ತ ಬುದ್ಧಿಗಳ ಕಾಡುತ್ತ, ಲೇವಡಿ ಮಾಡುತ್ತ ತಿದ್ದಲೆತ್ನಿಸುವ ಇವರ ಬಗೆ ಪದ್ಯದ ಸಾಲುಗಳಾಗಿ ಎಲ್ಲೋ, ಯಾವಾಗಲೋ ಕಾಡುವ ಗುಂಗಾಗಿತ್ತು. ಈಗ ಇದೇ ದಶಕದ ಕೊನೆಯಲ್ಲಿ ಮತ್ತೊಂದು ಸಂಕಲನ ನೀಡಿದ್ದಾರೆ ಚಂ.ಪಾ. ತಮ್ಮ ಎಂದಿನ ಬಂಡುಗಾರ ಶೈಲಿಯಲ್ಲಿ ವಿಮರ್ಶಕಾರರ 'ಸೂತ್ರೀಕರಣ'ಗಳನ್ನು ಗೇಲಿ ಮಾಡಿದ್ದಾರೆ. ಇದುವರೆಗಿನ ಎಲ್ಲ ಚೌಕಟ್ಟುಗಳ ಆಚೆ ಜಿಗಿಯುವ ತಮ್ಮ ಯತ್ನದ ಬಗ್ಗೆ ಸ್ಪಷ್ಟಪಡಿಸಬೇಕಾದ ಕವಿಯ ಅವಶ್ಯಕತೆಯೇ 'ನಾಲ್ಕಾರು ಮಾತು'ಗಳಾಗಿವೆ. ಅಲ್ಲಿ ಹೇಳಿರುವ ಈ ಎರಡು ಅಂಶ ಗಮನಿಸಬೇಕು.

"....ನಿರಂತರ ಚಲನಶೀಲವಾದ ಕಾಲಕ್ಕೆ ಸಂವಾದಿಯಾಗಬೇಕಾದ ಕಾವ್ಯ. ನಿಗಿನಿಗಿ ಅನ್ನುವ ಬದುಕನ್ನು ಬಗೆಯಬೇಕು, ಅಗಿಯಬೇಕು" (ಪು. ೪) "....ಭಾಷೆಯ ಧ್ವನಿಪೂರ್ಣ ಬಳಕೆಯ ಹಿನ್ನೆಲೆಯಲ್ಲಿ 'ಗದ್ಯ' 'ಪದ್ಯ' ಎಂಬ ಪದಗಳ ಬಳಕೆಯ ಬಗ್ಗೆಯೇ ನನಗೆ ಸಂದೇಹವುಂಟಾಗುತ್ತಿದೆ". (ಪು. ೪).

ಈ ನಿರಂತರ ಹೊಸತನದ ಹುಡುಕಾಟಕ್ಕಾಗಿ ಗದ್ಯವನ್ನೂ ಪದ್ಯವಾಗಿಸುವ ಹವಣಿಕೆಯಾಗಿ ಬದುಕಲ್ಲಿ, ಕಾವ್ಯದಲ್ಲಿ ಪ್ರತಿಭಟನೆಯೆಂಬುದೂ ಜಡಸ್ಪಂದನೆಯಾಗುತ್ತಿರುವುದರ ವಿರುದ್ಧ ಸೂಕ್ಷ್ಮವಾದ ಪ್ರತಿಭಟನೆಯಾಗುವ ಆಶಯಹೊಂದಿ ಬಂದಿದೆ "ಅರ್ಧಸತ್ಯದ ಹುಡುಗಿ".

ನವೋದಯುದವರಿಗೆ, ನವ್ಯರಿಗೆ, ಪ್ರಕೃತಿಯಾಗಿ. ದೇವಿಯಾಗಿ, ಮಾತೆಯಾಗಿ, ಕಾಮವಾಗಿ ಕಾಡಿರುವ ಹೆಣ್ಣನ್ನು ಕುರಿತು ಇಲ್ಲಿ ಬದಲಾಗಿರುವ ಧೋರಣೆ ತುಂಬ ಕುತೂಹಲಕರವಾದದ್ದು :

'ನನ್ನ ಚಿನ್ನ, ಈ ಜಗತ್ತಿನ ಎಲ್ಲ ಹೆಣ್ಣು ಮುಖಗಳಲ್ಲೂ
ಅರಸುತ್ತೇನೆ ನಿನ್ನ ಮುಖವನ್ನ

ಅಂತ ಹೇಳಬೇಕೆನಿಸಿ
ಅರೆ ! ಈ ಸಮಾನತೆಯ ದಿನಗಳಲ್ಲಿ
ನಾನು ಕೇಳಬಹುದಾದ
ಅಂಥದೇ ಪ್ರಶ್ನೆಗೆ ಅವಳು ಅಂಥದೇ
ಉತ್ತರ ಕೊಟ್ಟರೇನು ಗತಿ' (ಸಮಾನತೆ)

ಎಂಬಂಥ ತಮಾಷೆಯಿಂದ ಹಿಡಿದು 'ನನ್ನ ಬೇರಿಗೇ ಹೊಸ ಜೀವ ತುಂಬಿ'ದ ಶಕ್ತಿಯಾಗಿ ತೋರುವವರೆಗೂ ಈ ಬದಲಾದ ವಿಚಾರದ ವ್ಯಾಪ್ತಿಯಿದೆ.

"ಒಂದು ಕ್ಷಣ ಕಣ್ಣು ಮುಚ್ಚಿದರೆ ಅಂತಃಪುರದ
ಇತರ ರಾಣಿಯರೆಲ್ಲ ಬಡಿದಾರು ಬಾಗಿಲ
ಹೀಗೆ ಕಾದಿರಬಹುದು ನಿನ್ನ ರಾಜರು ಕೂಡ" (ಹೊಸ ರಾಜಕೀಯ)

ಎಂಬ ಮಾತುಗಳಲ್ಲಿ ಪರಂಪರಾಗತವಾದ 'ಸ್ವತ್ತು' 'ಸ್ವಾಮ್ಯ'ಗಳ ಭಾವನೆ ಕೊಂಚ ಬದಲಾಗಿರುವುದನ್ನು ಗುರುತಿಸಬಹುದು. ಈ ಬದಲಾದ ಸ್ತ್ರೀ–ಪುರುಷ ಸಂಬಂಧಗಳು ಅರ್ಥಪೂರ್ಣವಾಗಲು

"ಬಿಡುಗಣ್ಣ ಬೆಳಕುಗಳ
ಖಚಿತ ಕಕ್ಷೆಯ ನಡುವೆ ಕಣ್ಣು ಮೈಯಾಗಿ ಮೈ ಕಣ್ಣಾಗಿ
ಹೊಸ ರಾಜಕೀಯದಲಿ ಬೆರೆಯೋಣವೆ?"

ಎಂಬ ಪರಿಹಾರವಿದೆ.

"ನೇರ ನೋಟದ ಈ ಕ್ಷಣದ ಸೇತುವೆಗುಂಟ
ಎಷ್ಟು ಸಾರಿಗೆ ಸಾಧ್ಯ–ಅಷ್ಟೇ ಖರೆ, ಗೆಳತಿ" ಎಂಬ ಅರಿವಿದೆ.
(ಹೊಸ ರಾಜಕೀಯ)

ಸ್ತ್ರೀಯನ್ನು ಜಡವಾಗಿ, ಪ್ರಕೃತಿಯಾಗಿ, ವಸ್ತುವಾಗಿ ಭಾವಿಸಿ, ಪುರುಷನನ್ನು ಕ್ರಿಯಾಶೀಲ ಸೃಜನಶೀಲತೆಯ ಶಕ್ತಿಯಾಗಿ, ವ್ಯಕ್ತಿಯಾಗಿ ಕಲ್ಪಿಸುವುದು ಪರಂಪರಾಗತ ಚಿಂತನೆಯ ಅಂಗವಾಗಿದೆ. ಈ ಚಿಂತನೆಯ ಬಹು ಪ್ರಖ್ಯಾತ ಪ್ರತೀಕ ಭೂಮಿಯದು. ಆ ಬಗ್ಗೆ ಕವಿ ಹೇಳುತ್ತಾರೆ:

ಭೂಮಿಯನ್ನು ಅಗಿಯುತ್ತೇವೆ ಬಗೆಯುತ್ತೇವೆ
ಬೀಜ ಬಿತ್ತಿ ಕಾವು ಕೊಟ್ಟು
ಬಸಿರ ಸೀಳಿ ಹಸಿರು ಚಿಮ್ಮಿಸುತ್ತೇವೆ
....
ಇಂಥ ಭೂಮಿಗೆ ತಾಯಿ
ಅಂತ ಕರೆದು ತಾಯ್ಗಂಡರು ಅಂತ

ಕರೆಸಿಕೊಳ್ಳುವುದಕ್ಕಿಂತ
ಭೂಮಿ ಒಬ್ಬ ಗೆಳತಿ, ಸಖಿ
ಅಂತ ಕರೆಯಬಹುದಲ್ಲವೆ"   (ಒಂದು ಪ್ರಾಮಾಣಿಕ ಸಲಹೆ)

ಈ ಪರಿವರ್ತನೆ ಸಮಕಾಲೀನ ಸಾಮಾಜಿಕ ಪ್ರಕ್ರಿಯೆಯ ಅಂಗವೇ ಆಗಿದೆ. ಹಲವು ಸ್ತರಗಳಲ್ಲಿ ಕಾಣಿಸಿಕೊಂಡ ಪ್ರತಿಭಟನೆ, ಬಂಡಾಯಗಳ ಗತಿತಾರ್ಕಿಕ ಬೆಳವಣಿಗೆಯೆನ್ನಬಹುದು. ಸಾಮಾಜಿಕವಾಗಿ ಸ್ತ್ರೀಯರು ಹೆಚ್ಚು ಕ್ರಿಯಾಶೀಲರಾಗಿ ಪಾಲ್ಗೊಳ್ಳುತ್ತಿರುವುದು, ಅವರಲ್ಲಿ ಸ್ವಂತಿಕೆಯ ಅರಿವು ಹೆಚ್ಚಿ, ತಮ್ಮ ಅಸ್ತಿತ್ವ ಗುರುತಿಸಲು ಅವರು ಆಂದೋಲನದ ಮೂಲಕವಾಗಿ ಯತ್ನಿಸುತ್ತಿರುವುದರ ಪರಿಣಾಮವೇ ವಿವಿಧ ಸಾಂಸ್ಕೃತಿಕ ಸ್ತರಗಳಲ್ಲಿ ಸ್ತ್ರೀ ಕುರಿತ ಮೌಲ್ಯದಲ್ಲಿ ಬದಲು ಕಾಣುತ್ತಿರುವುದರ ಮೂಲವಾಗಿದೆ. ಈ ಸಮಕಾಲೀನ ಪ್ರಕ್ರಿಯೆಗೆ ಚಂ.ಪಾ. ಅವರಂಥ ನವ್ಯ-ಬಂಡಾಯ-ದಾಟಿ ಬಂದ ಕವಿ ಮಾತು ನೀಡಿರುವುದು ನಿಜಕ್ಕೂ ಗಮನಾರ್ಹವಾದದ್ದು.

ಈ ಬದಲಾದ ಧೋರಣೆ 'ಗೆಳತಿ' 'ಸಖಿ' ಎಂಬ ಹೆಸರು ಮಾತ್ರವೆ ? ಈ ಕ್ರಿಯಾಪದಗಳು, 'ಇಸು' ಪ್ರತ್ಯಯಗಳನ್ನು ತನ್ನ ಸುತ್ತಲೇ ತುಂಬಿಕೊಂಡು ಹೆಣ್ಣನ್ನು ಕೇವಲ ಆಟದ ಗೊಂಬೆಯೆಂಬಂತೆ, ಅವಳ ಜೀವಂತಿಕೆ, ಕ್ರಿಯಾಶೀಲತೆಯನ್ನು ಇವರೂ ಅಲ್ಲಗಳೆದಿಲ್ಲವೆ ಎಂದು ಅನುಮಾನ ಹುಟ್ಟುತ್ತದೆ. ಆದರೆ ಚಂ.ಪಾ.ರ ಇತರ ಕವನಗಳು ಈ ಸಂದೇಹವನ್ನು ನಿವಾರಿಸುತ್ತವೆ. ಉದಾಹರಣೆಗೆ ಸಾವು ಕವಿಯನ್ನು ಕಾಡಿರುವ ಬಗೆಯನ್ನು, ವಿವಿಧ ರೀತಿಗಳನ್ನು ಚಿತ್ರಿಸುವ, ಸಂಕಲನದ ಮೂರನೆಯ ವಿಭಾಗದ ಈ ಕೆಲವು ತುಣುಕುಗಳನ್ನು ನೋಡಬಹುದು:

"ನಿನ ಹಾಡು ಮುಗಿದಾಗ ಕಿವಿತುಂಬ ಗುಂಗಮ್ಮ
ಮೋಡದ ತೆಕ್ಕ್ಯಾಗ ಮನಸಮ್ಮ"   (ಗುಂಡಮ್ಮನ ಹಾಡು)

"ಬರೇ ಹದಿನೆಂಟು ದಿನಗಳ ಕಂದ
ಬಸಿಯುವ ಮೊಲೆ ಹೀರಿ ಇನ್ನೊಂದಕ್ಕೆ
ಬಚ್ಚಬಾಯಿ ಚಪ್ಪರಿಸುವಾಗಲೆ
ಮಗ್ಗುಲಾದಳು ತಾಯಿ"   (ಅರ್ಧಸತ್ಯದ ಹುಡುಗಿ)

ಸಮಕಾಲೀನ ಬದುಕಿನ ಎಲ್ಲ ಸೆಳೆತಗಳಿಗೆ ತನ್ನನ್ನು ತೆರೆದುಕೊಳ್ಳುವ ಯತ್ನ ಈ ಸಂಕಲನದ ಉದ್ದಕ್ಕೂ ಹರಡಿದ್ದು, ಚಂ.ಪಾ. ಅವರ ಸುಪರಿಚಿತವಾದ ವಸ್ತುಗಳು ದ್ವಂದ್ವಾರ್ಥದ ಶಬ್ದ, ಕಸರತ್ತು, ಜೋಕು ವ್ಯಂಗ್ಯಗಳ ಮಾದರಿಗಳೂ ಬೇಕಾದಷ್ಟಿವೆ. ಆದರೂ ಇಲ್ಲಿ ಕವಿಯ ಹಿಂದಿನ ಒಗರು ಮಾಗಿರುವುದು ಗಮನಾರ್ಹ.

ಜುಲೈ-ಆಗಸ್ಟ್ ೧೯೯೦/೬೭

"ನಮ್ಮ ಲಯಬದ್ಧ ಸದ್ದುಗಳು
ಗುಡಿಸಿಲಲ್ಲಿ ಗುಡುಗು ಮೊಳಗಿಸುವುದಿಲ್ಲ
ನಮ್ಮ ಸ್ಫೋಟಗಳು
ಬೆಚ್ಚಗಿನ ಬಂಗಲೆಗಳ ನಡುಗಿಸುವುದಿಲ್ಲ" (ಬರದ ಹಾಡು)

ಎಂಬ ವಾಸ್ತವದ ಅರಿವಿದ್ದೂ ಕವಿ ಹತಾಶನಲ್ಲ. ಬದಲಾಗಿ ಇಲ್ಲಿಯೇ ಒಂದೆಡೆ ಹೇಳಿರುವ ಹಾಗೆ

"ಚಾಳೀಸಿನ ನಂಬರು ಹೆಚ್ಚಾದಂತೆಲ್ಲ ಕಣ್ಣಿನ ನೋಟದ
ಕ್ಷಿತಿಜದ ವಿಸ್ತಾರ ಹೆಚ್ಚಾಗುವ ಸೋಜಿಗ" (ಶಾಂತರಸು)

ಇದು ಎನ್ನಬಹುದು. "ಅರ್ಧಸತ್ಯದ ಹುಡುಗಿ" ಚಂ.ಪಾ.ರ ಬೆಳವಣಿಗೆಯ ಕುರುಹಾಗಿರುವ ಬಗ್ಗೆ ಹೆಚ್ಚು ಹೇಳಬೇಕಿಲ್ಲ. ಈ ಸಂಕಲನದಲ್ಲಿ ಹೊಸತೇನಿದೆಯೆಂದು ಇಲ್ಲಿ ಗುರುತಿಸುವ ಯತ್ನ ಮಾಡಿದ್ದೇನೆ. ಚಂ.ಪಾ. ಅವರ ಸುಪರಿಚಿತ ವಸ್ತುಗಳ ಕುರಿತ ಚರ್ಚೆ–ಓದುಗರಿಗೆ ಬಿಡುವೆ–ಓದಬೇಕಾದ ಸಂಕಲನವಿದು.

—ಡಾ॥ ಬಿ. ಎನ್. ಸುಮಿತ್ರಾಬಾಯಿ

ಸುವರ್ಣ ಪುತ್ಥಳಿ (ಕವನ ಸಂಕಲನ)

ಲೇಖಕರು: ಎಂ. ಗೋಪಾಲಕೃಷ್ಣ ಅಡಿಗ

ಪ್ರಕಾಶನ: ಅಪರ್ಣ ಪ್ರಕಾಶನ, ಬೆಂಗಳೂರು
ಪುಟ: xviii + 52 ಬೆಲೆ: ರೂ. 15–00

ಸುಮಾರು ಒಂದೂವರೆ–ಎರಡು ವರ್ಷಗಳ ಹಿಂದೆ ಇರಬಹುದು. ಅಡಿಗರನ್ನು ಅವರ ಮನೆಯಲ್ಲೊಮ್ಮೆ ಭೇಟಿಯಾಗಿದ್ದಾಗ "ಚಿಂತಾಮಣಿಯಲ್ಲಿ ಕಂಡ ಮುಖ ಬಹುಶಃ ನಿಮ್ಮ ಅತ್ಯುತ್ತಮ ಕವನ" ಎಂದೆ. ಅದಕ್ಕೆ ಅವರು ಆತ್ಮೀಯವಾಗಿ ಮಾತಾಡುವಾಗ ಯಾವಾಗಲೂ ಮಾಡುವಂತೆ ಒಂದು ಕಣ್ಣು ಹೊಡೆದು "ಅದರಲ್ಲಿ ನವ್ಯತೆ ಕಡಿಮೆ ಕಣಯ್ಯ" ಎಂದು ನನ್ನ ಮಾತನ್ನು ಸಮರ್ಥಿಸುವಂತೆ ಮಾತು ಮುಂದುವರೆಸಿದರು. ನವ್ಯ ಚಳುವಳಿಯ ಮಹಾ ದಂಡನಾಯಕರ ಬಾಯಿಂದ ಈ ಮಾತನ್ನು ಕೇಳಿ ನಾನು ಒಂದರೆಕ್ಷಣ ದಂಗಾದೆನಾದರೂ ಸಾವರಿಸಿಕೊಂಡು, ಅದೇ ಹೆಸರಿನ ಕವನ ಸಂಕಲನದಲ್ಲಿರುವ ನನ್ನ ಮೆಚ್ಚಿನ 'ಯಜಮಾನ', 'ಸಂತೋಷ ವಾಗುತ್ತದೆ', 'ಬಂಡಾಯ', 'ಪ್ರೀತಿ', 'ಮೈಗೆ ಹಿತವಾದರೆ' ಹಾಗೂ 'ಬಾಂಧವ್ಯ' ಕವನಗಳ ಬಗೆಗೆ ಮುಕ್ತವಾಗಿ ಮಾತನಾಡತೊಡಗಿದೆ, ಸಂಕ್ಷಿಪ್ತವಾಗಿಯಾದರೂ.

ಮುಕ್ತವಾಗಿ ಮಾತನಾಡತೊಡಗಿದೆನೆಂದು ಏಕೆ ಹೇಳುತ್ತಿರುವೆನೆಂದರೆ ಅಡಿಗರ ಕಾವ್ಯದ ಬಗ್ಗೆ ಈ ಮುಂಚೆ ನಾನು ಆತ್ಮವಿಶ್ವಾಸದಿಂದ ಮಾತನಾಡಲಾಗದ ತೊಂದರೆಗೆ ಸಿಲುಕಿದ್ದೆ. 'ಅವರ ಕಟ್ಟುವೆವು ನಾವು' ಘಟ್ಟದಾಚೆಗಿನ ಕಾವ್ಯವನ್ನು ನಾನು ಆಸ್ವಾದಿಸಲಾಗದಿದ್ದ ಕಾಲದಲ್ಲಿ ನನ್ನ ಸರೀಕ ಕಾವ್ಯಾಭಿಮಾನಿಗಳು ಅದನ್ನು ಹಾಡಿ ಹೊಗಳಿ ಅಟ್ಟಕ್ಕೇರಿಸುತ್ತಿದ್ದರು. 'ಭೂಮಿಗೀತ'ದ ಕಾಲಕ್ಕೇ, ಅದಕ್ಕೆ ಮುನ್ನುಡಿ ಬರೆದಿರುವ ಡಾ॥ ಯು. ಆರ್. ಅನಂತಮೂರ್ತಿಯವರು " 'ಅರಳು ಮರಳು' ಸಂಗ್ರಹಕ್ಕಿಂತ ಹಿಂದಿನ ಬೇಂದ್ರೆ, ಇನ್ನೂ ಜೀವಂತ ಕಾವ್ಯ ರಚಿಸುತ್ತಿರುವ ಅಡಿಗ, ಈ ಇಬ್ಬರೇ ಕನ್ನಡದ ಅತಿ ಶ್ರೇಷ್ಠ ಕವಿಗಳೆಂದು" ಅಭಿಪ್ರಾಯ ನೀಡಿದ್ದರು.

ಅದೇನೇ ಇರಲಿ, ಅಡಿಗರ ಆ ಕಾವ್ಯ ತನ್ನೆಲ್ಲಾ ಆಕರ್ಷಕ ಅಂಗಸೌಷ್ಠವ, ಆಳದಲ್ಲಿ ಅರ್ಥಗಳನ್ನು ಹೊಮ್ಮಿಸಬಲ್ಲ ಸಂಕೇತ–ಪ್ರತಿಮೆಗಳು ಹಾಗೂ ತಲೆದೂಗಿಸಬಲ್ಲ ತತ್ವ ಮೀಮಾಂಸೆಯು ಹೊರತಾಗಿಯೂ ಏನೋ ಮುಖ್ಯವಾದ ಹಾಗೂ ಪ್ರಾಣಸಮವಾದ ಅಂಶವೊಂದು ಅದರಲ್ಲಿ ಕಾಣೆಯಾಗಿದೆಯೆಂದು ನನಗೆ (ಹಾಗೂ ನನ್ನಂತೆ ಹಲವರಿಗೆ?) ಬೋಧೆಯಾಗುತ್ತಿತ್ತು. ಸ್ಥೂಲವಾಗಿ ಹೇಳುವುದಾದರೆ ಈ ಕಾವ್ಯದ ಹಿಂದಿರುವ ಕವಿ ಓರ್ವ ಸಿನಿಕ ವೈದಿಕನೇ ಹೊರತು ಜನಮನವನ್ನು ಒಂದು ಹಂತದಲ್ಲಾದರೂ ಆರ್ದ್ರಗೊಳಿಸಬಲ್ಲ ದ್ರಷ್ಟಾರನಲ್ಲ ಎಂದೆನಿಸುತ್ತಿತ್ತು. ('ಭೂಮಿಗೀತದ'ದ ಕವನಗಳನ್ನು ಓದಲು ಆರು ಪುಟಗಳ ಟಿಪ್ಪಣಿಗಳು ಅಗತ್ಯವೆಂದು ಕವಿಗೇ ಅನ್ನಿಸಿದೆ.) One upmanship ಅಡಿಗರ ಈ ಕಾವ್ಯದ ಸ್ಥಿರ ನಿಲುವು. ತನ್ನ ಅಹಂಕಾರಕ್ಕೊಗ್ಗದ್ದನೆಲ್ಲಾ ಗಾಢವಾಗಷ್ಟೇ ಅಲ್ಲ, ಕಠೋರ ಮತ್ತು ನಿಷ್ಠುರವಾಗಿ ವ್ಯಂಗ್ಯ–ಕಟಕಿ–ತೀರ್ಪುಗಳ ಮೂಲಕ ದಮನ ಮಾಡಲೆತ್ನಿಸುವ ವಸಿಷ್ಠತನ ಈ ಕಾವ್ಯದ ಸ್ಥಾಯಿ ಭಾವ. ನೀತಿಶಾಸ್ತ್ರ ಇವರ ಸ್ಥಿರಭಿತ್ತಿಯಾಗಿತ್ತು. ಆದರೆ, ಬಹುಶಃ ಅಡಿಗರು ಹುಟ್ಟು ಕವಿಯಾಗಿದ್ದುದರಿಂದಲೋ ಏನೋ ಕೊನೆಗೂ, ಈ ಎಲ್ಲ ದುಷ್ಟತನಕ್ಕೂ, ಕಾವ್ಯಕ್ಕೂ ಸಂಬಂಧವಿಲ್ಲ ಎಂಬ ಅರಿವಾಗಿ 'ಮೋಹನ ಮುರಲಿ'ಯ ಅನುಭಾವಕ್ಕೆ ಹಿಂದಿರುಗಿದರು, "ಚಿಂತಾಮಣಿಯಲ್ಲಿ ಕಂಡ ಮುಖ"ದಲ್ಲಿ. ಇದು ಕೇವಲ ಸ್ವಸ್ಥಾನಕ್ಕೆ ವಾಪಸಾತಿಯಲ್ಲ; 'ದೇಶ ಸುತ್ತಿ ಕೋಶ ಓದಿ' ಸಂಪನ್ನಗೊಂಡ ವಾಪಸಾತಿ ಎಂಬುದು "ಚಿಂತಾಮಣಿಯಲ್ಲಿ ಕಂಡ ಮುಖ" ಕವನಗಳನ್ನು ಓದಿದ ಎಲ್ಲರಿಗೂ ಗೊತ್ತಿದೆ.

ಆದರೆ "ಚಿಂತಾಮಣಿಯಲ್ಲಿ ಕಂಡ ಮುಖ" ಹುಟ್ಟಿಸಿದ್ದ ಆಸೆಯನ್ನು "ಸುವರ್ಣ ಪುತ್ಥಳಿ" ಕೊಂಚ ಮಟ್ಟಿಗೆ ಮಸುಕುಗೊಳಿಸುತ್ತದೆ. ಕವಿ ಅದೇ ಲಹರಿಯಲ್ಲಿರುವರಾದರೂ "ಸುವರ್ಣ ಪುತ್ಥಳಿ"ಯ ಬಹಳಷ್ಟು ಕವನಗಳು ಅವಸರದವು, ಅರ್ಧ ಬೆಂದವುಗಳು ಹಾಗೂ ಪೇಲವವಾದವು ಎಂದೆನ್ನಿಸುತ್ತವೆ. ಇದನ್ನು ಅಡಿಗರೇ ತಮ್ಮ

‘ಎರಡು ಮಾತು’ಗಳಲ್ಲಿ “ಹತ್ತರ ಕೂಡೆ ಹನ್ನೊಂದು ಎಂಬ ಹಾಗೆ ಇದು ನನ್ನ ಹನ್ನೊಂದನೆಯ ಕವನ ಸಂಕಲನವೂ ಹೌದು” ಎಂದು ಸೂಚ್ಯವಾಗಿ ತಿಳಿಸಿದ್ದಾರೆ. ಬಹುಶಃ ಅದಕ್ಕೇ ಈ ಪುಸ್ತಕಕ್ಕೆ ಜಿ. ರಾಜಶೇಖರ್ ಬರೆದಿರುವ ಮುನ್ನುಡಿಯೂ ತೇಪೆ ತೇಪೆಯಾಗಿದೆ. ಇಲ್ಲಿರುವ ಹತ್ತೊಂಭತ್ತು ಪದ್ಯಗಳಲ್ಲಿ ಎಂಟು ಪದ್ಯಗಳು ಐದರಿಂದ ಇಪ್ಪತ್ತೈದು ವರ್ಷಗಳಷ್ಟು ಹಿಂದೆ ಬರೆದು–ಬಿಟ್ಟವನ್ನು, ಮತ್ತೆ ಪ್ರಕಟಣೆಗೆ ಅಣಿಗೊಳಿಸಿರುವಂತಹವು. ಸಂಕಲನಕ್ಕೆ ಪುಟಗಳನ್ನು ಸೇರಿಸುವುದರ ಹೊರತಾಗಿ ಮತ್ತಾವ ಮಹತ್ತರ ಉದ್ದೇಶವೂ ಈ ಪದ್ಯಗಳಲ್ಲಿಲ್ಲ. ‘ನಮ್ಮ ಪುಟ್ಟ’ ಎಂಬ ಕವನ ಮಾತ್ರ ‘ಇನ್ನಿಲ್ಲ ನಮ್ಮ ಪುಟ್ಟ’ ಎಂಬ ಕವನಕ್ಕೆ ಹಿನ್ನೆಲೆಯೊದಗಿಸುತ್ತದೆ.

ಏಕತತ್ವಕ್ಕೆ ಬಹುಮುಖತ್ವವಿದೆ; ಆ ಬಹುಮುಖತ್ವ ಏಕತತ್ವವಾಗಿ ಕರಗಿ ಹೋಗುವುದು, ಪ್ರೀತಿಯ, ಸಹನೆಯ, ಕರುಣೆಯ ಹಾಗೂ ವ್ಯವಧಾನದ ಕಣ್ಣುಗಳಲ್ಲಿ ಎಂಬ ಅರಿವನ್ನು “ಚಿಂತಾಮಣಿಯಲ್ಲಿ ಕಂಡ ಮುಖ”ದಲ್ಲಿ ಪಡೆದುಕೊಂಡಂತೆ ತೋರುವ ಅಡಿಗರು ಇಲ್ಲಿ “ಮೌನದ ಸುವರ್ಣ ಪುತ್ಥಳಿ”, “ಹೊಸ ಸವಾಲಿನ ಮೊಳಗಿಗಂಜಿ”, “ದೊಡ್ಡವರ ಸಹವಾಸ”, “ಅಮೂರ್ತ ಚಿಂತನ” ಹಾಗೂ “ಇನ್ನಿಲ್ಲ ನಮ್ಮ ಪುಟ್ಟ” ಎಂಬ ಐದು ಒಳ್ಳೆಯ ಕವನಗಳನ್ನು ನೀಡಿದ್ದಾರೆ. ಸೆಟೆದು ಕೊಂಡಂತಿದ್ದ ಅಡಿಗರ ಅಂತಃಕರಣ ಇಲ್ಲಿ ಬಿಚ್ಚಿಕೊಂಡಿದೆ: ಮನುಷ್ಯ ಮಾತ್ರರಾಗಿ ತಮ್ಮ ಪ್ರೀತಿಯ ಹೆಂಡತಿ ಹಾಗೂ ಮುದ್ದಿನ ನಾಯಿ ಬಗ್ಗೆ ಪದ್ಯಗಳನ್ನು ಬರೆದಿದ್ದಾರೆ. ತಿಳಿನೀರಿನಂತಹ ಪ್ರೀತಿ ತನ್ನ ಪಾರದರ್ಶಕ ಭಾಷೆಯ ಮೂಲಕ ತನ್ನ ಒಳ ಚೆಲುವನ್ನು ಹೊರಹೊಮ್ಮಿಸುವ ರೀತಿ ನೋಡಿ:

ಮುಖದಲ್ಲಿ ಮೂಡಿ ಮಸಳುವ ಭಾವ ಭಾವಾಂತರದ
ನೂರಾರು ಮುದ್ರೆಗಳ ನಿನ್ನ ಭಾಷೆ
ಕಲಿತು ಅರ್ಥೈಸುತ್ತ ಬದುಕಿ ಬಂದೆ
ಅರೆ ಅದೇ ತಾಯೊಲವು ನಿಷ್ಠೆ ಮುಗಿಯದ ದುಡಿಮೆ
ಈ ಇಂಥ ಯೋಗಕರ್ಮವನೆಂತು ಎಲ್ಲಿಂದ
ಕಲಿತುಕೊಂಡೆ ? (ಮೌನದ ಸುವರ್ಣ ಪುತ್ಥಳಿ)

ಹಾಗೇ ಕರುಣೆ ಭಾಷೆಯಲ್ಲಿ ತನ್ನ ಲಯವನ್ನು ತಾನೇ ಕಂಡುಕೊಳ್ಳುವ ರೀತಿಯನ್ನು ಗಮನಿಸಿ:

ಪುಟ್ಟ, ಪುಟ್ಟೂ, ಪುಟ್ಟಿ, ಪುಟ್ಟಯ್ಯ
ಪುಟ್ಟೂರಾಯ, ಎಲ್ಲಿ ನೀನೀಗ ಎಲ್ಲಿ ?
ನಿಲ್ಲಯ್ಯ ಮಗು, ಎತ್ತ ನಡೆದೆ ?

ಎಲ್ಲಿರುವೆ ನೀನೀಗ ಮಗು ? ಮಣ್ಣಿನೊಳಗೆ
ಹೂತು ಹೋಯಿತು ದೇಹ. ನಿನ್ನಯ ಪ್ರಾಣ
ಎತ್ತ ಹಾರಿತೊ ಕಾಣೆ. ಎಲ್ಲಾದರೂ ಇರು ನೀನು,
ನಿನ್ನ ಮರೆಯೆವು ನಾವು
ಸುಖವಾಗಿರು. (ಇನ್ನಿಲ್ಲ ನಮ್ಮ ಪುಟ್ಟ)

ಯಾವಾಗಲೂ "ದೊಡ್ಡ"ದನ್ನೇ ಅರಸುವುದನ್ನು ವ್ಯಸನವಮಾಡಿಕೊಂಡಿದ್ದ ಅಡಿಗರಿಗೆ "ದೊಡ್ಡವರ ಸಹವಾಸ" ಕವನದಲ್ಲಿ ದೊಡ್ಡದು–ಸಣ್ಣದು ಎಂಬ ಕಲ್ಪನೆಯೇ ಅಹಂಕಾರ ಪ್ರೇರಿತವಾದದ್ದು ಎಂಬುದರ ಹೊಳಹು ಸಿಕ್ಕಿದೆ:

ಯಾವಾಗಲೋ ಬಂದು ಬಡಿವುಲ್ಕೆಗಳಿಗಾಗಿ
ಲಕ್ಷ ನಕ್ಷತ್ರ ಕಣ್ಮುಚ್ಚಬೇಕೆ ?
ಸೂರ್ಯ ಅಡಗಿದ ಮೇಲೆ, ಚಂದ್ರನಿಲ್ಲದ ವೇಳೆ
ಎಂದೆಂದಿಗೂ ಕೊನೆಗೆ ಮಿನುಗು ಬೆಳಕೇ.

ಅಲ್ಲದೆ, ಅವರ ವ್ಯಕ್ತಿವಾದಿತ್ವ ತನ್ನ ಪ್ರತ್ಯೇಕ ಶ್ರೇಷ್ಠತೆಯ ಧಿಮಾಕನ್ನು ಕಳೆದುಕೊಂಡು

ಶತಮಾನಗಳ ಗಲೀಜು ಕೊಳೆ ಕಸವ ಕಳೆಯಲು ಶುದ್ಧ
ಬಿಸಿಲು ಬೆಳಕೂ ಇರದೆ ಎಂತು ಸಾಧ್ಯ ?
ಪ್ರತಿ ಹೃದಯದಲ್ಲೂ ರವಿ ಮೂಡಿ ಪ್ರಖರವಾಗದೆ ಬಿಸಿಲು
ಹೊಸ ಮುಗಿಲು ಮಳೆಬಿಲ್ಲು, ಮಳೆ, ಎಲ್ಲಿ ಅಪೂರ್ವ ಫಸಲು ?

ಎಂಬ ಪ್ರಶ್ನೆ ಕೇಳಿಕೊಳ್ಳುವ ("ಹೊಸ ಸವಾಲಿನ ಮುಳುಗಿಗಂಜಿ") ವ್ಯವಧಾನ ಸಾಧ್ಯವಾಗಿದೆ ಅಡಿಗರಿಗೆ. ಈ ವ್ಯವಧಾನವೇ "ಅಮೂರ್ತ ಚಿಂತನ"ದಲ್ಲಿ ಮಹಾ ಸಹನೆಯಾಗಿ ಬೆಳೆದು 'ಹೊಸ' ಚಿಂತನ–ಸಂಸ್ಕೃತಿಯ ಕಡೆ ಹೊರಳುವುದರಲ್ಲಿ ಕೊನೆಗೊಳ್ಳುತ್ತದೆ:

......................................ಅಧ್ಯಾಯ
ಬದಲಾಗಿ ಎಲ್ಲ ಕಡೆ ಹೂ ಹೂ ಅರಳಿ, ಹೂವು ಹೀಚಾಗಿ
ಹೀಚು ಕಾಯಾಗಿ ರಸತುಂಬಿ ಪರಿಪಕ್ವವಾಗುವ ತನಕ
ಅವಕಾಶ ಕೊಡುವ, ಪಡೆವ ಹೊಸಸಂತಾನ ಮಣ್ಣಲ್ಲೆ
ಚಿಗುರಿ ಚಿನ್ಮಯುವಾಗಿ ಚಿಗಿತು ಫಲಿಸುವ ತನಕ
ಫಲಿಸಿ ಪರಿಪಕ್ವವಾಗಿ ಮಾಗುವ ತನಕ
ಕಾಯಬೇಕಯ್ಯ ಅಣ್ಣಯ್ಯ, ನಿರಾಶೆಗೂ ಉಂಟೊಂದು ತಾರಿ;
ಅದರಾಚೆ ಆಶೆ ಸವಾರಿ ಹೊಸ ದಿಗಂತದೆಡೆಗೆ.

ಈವರೆಗೆ ಕಾವ್ಯದ ರಾಚನಿಕ ಪಂತದಲ್ಲಿ ಮಾತ್ರ ತರ್ಕ ಮೀರಿದ್ದ ಅಡಿಗರು ಕ್ರಮೇಣ ಅದರ ಆಂತರ್ಯದ ಮಟ್ಟದಲ್ಲೂ ಅದನ್ನು ಮೀರುವ ಸಾಧನೆಯಲ್ಲಿ ತೊಡಗಿದ್ದಾರೆ. ಇದು ಬಹುಃಶಃ ಸಾಧ್ಯವಾಗಿರುವುದು ಅವರು, ಎಂದೋ ತಮ್ಮ ಜಾತ್ಯಾತೀತ ಗುಣವನ್ನು ಕಳೆದುಕೊಂಡಿರುವ ಪುರಾಣ ಪ್ರತಿಮೆಗಳ ಅವಾಂತರದಿಂದ, ಹಾವುಗಳೂ ಸೇರಿಕೊಳ್ಳಬಹುದಾದ "ಹುತ್ತಗಟ್ಟಿದ ಚಿತ್ತ"ದ ಸಂಕೀರ್ಣತೆಯಿಂದ ಹಾಗೂ ಗಂಟುಗಂಟಾದ ಪದವಿನ್ಯಾಸ ಲೋಲುಪತೆಯಿಂದ ಆಯಾಸಗೊಂಡು ನೇರ ಹೃದಯ ಸಂವಾದದಲ್ಲಿ ವಿರಮಿಸಲೆತ್ನಿಸಿರುವುದರಿಂದ.

—ಡಿ. ಎಸ್. ನಾಗಭೂಷಣ

ಮೊದಲ ನೋಟ

ಅರಣ್ಯ ಕಾಂಡ (ಕವನಗಳು)
ಲೇಖಕರು: ಜಿ. ಎಸ್. ಉಬರಡ್ಕ

ಜಿ. ಎಸ್. ಉಬರಡ್ಕರ ಈ ಎರಡನೆ ಕವನ ಸಂಕಲನದಲ್ಲಿ ಇಪ್ಪತ್ತೇಳು ಕವಿತೆಗಳಿವೆ. ಪರಿಸರದ ಹೊಸ ಸೀಮೆಗಳ ಅನ್ವೇಷಣೆಗೆ ತೊಡಗಬೇಕೆಂಬ ಹಂಬಲ ಹೊತ್ತ ಈ ಕವಿಯ ಕಾವ್ಯದ ಪ್ರೇರಣೆಗಳಲ್ಲಿ ಸಾಮಾಜಿಕ ಕಾಳಜಿಗಳು, ಪರಿಸರದ ಪ್ರೀತಿ ಮುಖ್ಯವಾಗಿವೆ. ಇದರಲ್ಲಿ ಕೆಲವು ಕವಿತೆಗಳು (ಉದಾ: 'ದೇಶ ಕಟ್ಟುವ ಕೆಲಸ', 'ಅರಣ್ಯ ಕಾಂಡ' ಹಾಗೂ 'ತುರ್ತು ಕಳೆದ ಮೇಲೆ' ಬುದ್ಧಿಪೂರ್ವಕವಾದ ಆಶಯುಗಳನ್ನು ವ್ಯಕ್ತಪಡಿಸುತ್ತದೆಯೇ ಹೊರತು ಕವಿತೆಯಾಗಿ ಹರಳುಗಟ್ಟುವುದಿಲ್ಲ. ಇಂಥ ಗಂಭೀರ ಕಾಳಜಿಯ ಕವಿತೆಗಳಿಗಿಂತಲೂ 'ಮೆಹರುನ್ನೀಸಾ', 'ಬೀಡಿ ಹುಡುಗಿಯರು'ನಂಥ ಕವಿತೆಗಳು_ಕವಿತೆಯಾಗುವ ಕಡೆಗೆ ಹೆಚ್ಚು ಒಲಿದಿವೆ. ಈ ಸಂಕಲನದ ಕವಿತೆಗಳಲ್ಲಿ 'ಕೊಂಬುಕೊಕ್ಕಿನ ಹಕ್ಕಿ', 'ಆರ್ಕಿಡ್ ವಂಶ'ದಂಥ ಕವಿತೆಗಳು ಹೆಚ್ಚು ಮಹತ್ವಾಕಾಂಕ್ಷಿಯಾದವು–ಭಾಷೆ ಮತ್ತು ಲಯಗಳ ಬಳಕೆಯಿಂದ ಒಂದು ಚಿತ್ರ ಕಟ್ಟುವುದರಲ್ಲಿ, ಅದರಾಚೆಗಿನದನ್ನು ಧ್ವನಿಸುವುದರಲ್ಲಿ ತೊಡಗುತ್ತದೆ.

ಗೆರೆಗಳು (ಕವನಗಳು)
ಲೇಖಕರು: **ಕೆ. ನ. ಶಿವತೀರ್ಥನ್**

ಈ ಕವನ ಸಂಕಲನವಲ್ಲಿ ಐವತ್ತೇಳು ಕವಿತೆಗಳಿವೆ. ವಿರೋಧಾಭಾಸದ ಸತ್ಯಗಳನ್ನು ಕಹಿವಾಸ್ತವ ಮತ್ತು ಕನಸುಗಳನ್ನು ಮುಖಾಮುಖಿಯಾಗಿಸಿ ಚುಟುಕಾಗಿ-

ಚುರುಕಾಗಿ ಮೂಡಿಸುವುದು ಶಿವತೀರ್ಥನ್ ಶೈಲಿ. ಈ ಚುಟುಕು ಚುರುಕು ಶೈಲಿಯಲ್ಲಿ ಸಮಕಾಲೀನ ಜೀವನದ, ಇತಿಹಾಸದ, ಪುರಾಣದ ಅನೇಕ ಪಾತ್ರಗಳನ್ನು ಕಾವ್ಯದ ತೆಕ್ಕೆಗೊಗ್ಗಿಸುವ ಪ್ರಯತ್ನ ಇಲ್ಲಿದೆ.

'ಕುಶ ಲವ ಕುಶಲವಾ?' ಎಂಬಲ್ಲಿ ಪುರಾಣದಿಂದ ಇಂದಿನವರೆಗೆ ಮನುಕುಲವನ್ನು ಅಳೆಯುವ ನೋಟವಿದೆ. 'ಬಿರುಬಿಸಿಲಿಗೆ ಅರಳಿನಿಂತ ಸಂತ' ತರಹದ ಮಾತುಗಳಲ್ಲಿ ಬದುಕಿನ ಒಳನೋಟವನ್ನು ಫಳ್ಳನೆ ಹೊಳೆಯಿಸುವ ಗೆರೆಗಳು ಕೆಲವೊಮ್ಮೆ 'ಅಲಲೇ, ಹುಡುಗಿ' ತರಹ ಬರಿ ಮಾತಾಗಿ ಅಭ್ಯಾಸ ಬಲವಾಗಿ ವ್ಯರ್ಥವಾಗಿಬಿಡುತ್ತದೆ. ಚಿತ್ರಕ್ಕೆ ಗೆರೆಗಳು ಮೂಲ. ಆದರೆ ಗೆರೆಗಳು ಹಲವು ಸೇರಿ ಚಿತ್ರವಾಗಬೇಕು ಎಂಬ ಗುಟ್ಟನ್ನು ಈ ಕವಿ ಅರಿಯಬೇಕಾಗಿದೆ. ಈ ಅರಿವಿನತ್ತ ಇಟ್ಟ ಹೆಜ್ಜೆಗಳು 'ಗೆಂಡಗಯ್ಯ' ಕವನದಲ್ಲಿ ಕಾಣುತ್ತವೆ.

ಕತ್ತಲ ಹೂವಿನ ಹಾಡು (ನೀಗ್ರೋ ಕವಯಿತ್ರಿಯರ ಕಾವ್ಯ)
ಕನ್ನಡಕ್ಕೆ: **ಎಂ. ಆರ್. ಕಮಲ**

ಅಮೆರಿಕನ್ ವಿಮೋಚನಾ ಚಳುವಳಿಯ ತಾತ್ವಿಕತೆಯ ನಂತರ ಮಹಿಳಾ ಚಿಂತನಕ್ಕೆ ಹೆಚ್ಚು ಪ್ರಸ್ತುತವಾಗಿರುವ, ಕಪ್ಪು ಲೇಖಕಿಯರ ಕಾವ್ಯವನ್ನು ಕನ್ನಡಕ್ಕೆ ತರುವ ಒಂದು ಗಂಭೀರ ಪ್ರಯತ್ನ 'ಕತ್ತಲ ಹೂವಿನ ಹಾಡು'. ವಾನಾ ಕುಪಾನಾ ಶಾಮ್‌ಳಂಥ ಕಳೆದ ಶತಮಾನದ ಕವಯಿತ್ರಿಯಿಂದ ಹಿಡಿದು ಇಂದಿನ ಕಪ್ಪು ಬರಹಗಾರ್ತಿಯರವರೆಗೆ ಈ ಪುಸ್ತಕದ ವ್ಯಾಪ್ತಿ ಇದೆ. ಇಲ್ಲಿ ಕಮಲ ಅವರ ಗಮನ ಅನುವಾದಕ್ಕಿಂತ ಹೆಚ್ಚಾಗಿ ಕವನಗಳ ಕಾವ್ಯತ್ವವನ್ನು ಉಳಿಸಿಕೊಂಡು ಅವನ್ನು ಕನ್ನಡಕ್ಕೆ ತಂದುಕೊಳ್ಳುವುದರ ಕಡೆಗಿದೆ. ಹಾಗಾಗಿ ಈ ಕವಿತೆ ವಿದೇಶೀ ಅನ್ನಿಸುವುದಿಲ್ಲ. ಆದರೆ ಇದೇ ಕೆಲವೊಮ್ಮೆ ಕರಿಯ ಹೆಣ್ಣಿನ ಮುಮ್ಮುಖ ಅಳಲಿನ (ವಸಾಹತುಶಾಹಿಯ, ವರ್ಣಭೇದದ, ಹೆಣ್ತನದ) ತೀವ್ರತೆಯನ್ನು ತೆಳ್ಳಗಾಗಿಸಿರುವುದೂ ಉಂಟು.

ಹಕ್ಕಿ ನಡಿಗೆ (ಕವನಗಳು)
ಪ್ರಧಾನ ಸಂಪಾದಕ: **ರಾಜೀವ ಸಖ**

ಹದಿನೆಂಟು ಜನ ಕವಿ-ಕವಯಿತ್ರಿಯರ ಕವನಗಳನ್ನೊಳಗೊಂಡ ಸಂಕಲನವಿದು. ಈ ಕವನಗಳನ್ನು ಆಯ್ದು ಮುನ್ನುಡಿ ಬರೆದಿರುವವರು ವಿಮರ್ಶಕ ಹೆಚ್. ಎಸ್. ರಾಘವೇಂದ್ರರಾವ್ ಅವರು. ಇನ್ನೂ ಅಷ್ಟೇನೂ ಹೆಸರು ಮಾಡಿರದ ಈ ಹದಿನೆಂಟು ಜನ ಕವಿಗಳ ಕವನಗಳನ್ನು ಓದಿದಾಗ ಕನ್ನಡ ಕಾವ್ಯದ ಭವಿಷ್ಯದ ಬಗ್ಗೆ ನಿಜವಾಗಿಯೂ ಭರವಸೆ ಉಂಟಾಗುತ್ತದೆ. ಕಾವ್ಯಕ್ರಿಯೆಗೆ ಹೊರತಾದ ಯಾವುದೇ

ತತ್ತ್ವ-ವಾದಗಳ ಮುಲಾಜಿಗೆ ಸಿಗದೆ ಸಹಜ ಸ್ಫೂರ್ತ ಅಭಿವ್ಯಕ್ತಿಗಾಗಿ ತುಡಿಯುವ ಪ್ರಯತ್ನಗಳು ಇಲ್ಲಿವೆ. ವಸ್ತುವಿನ್ಯಾಸ, ಭಾಷೆಯ ಬಳಕೆ ಹಾಗೂ ಲಯನಿರ್ವಹಣೆಯಲ್ಲಿ ಇನ್ನೂ ಸಾಕಷ್ಟು ಪಳಗಬೇಕಾಗಿದೆಯಾದರೂ, ಕೊಂಕು ಹಗೆತನಗಳಿಲ್ಲದ, ಪ್ರೀತಿ, ನೆಮ್ಮದಿಗಾಗಿ ಹಂಬಲಿಸುವ ಯುವ ಮನಸ್ಸುಗಳು ಸೃಷ್ಟಿಸಲೆತ್ನಿಸುತ್ತಿರುವ ಪಾರದರ್ಶಕ ಸೌಂದರ್ಯದ ಒಂದು ಸ್ಥೂಲ ಮಾದರಿಯಂತಿದೆ ಈ ಕವನ ಸಂಕಲನ. 'ಸೋವಿಯತ್ ಬ್ಯಾಲೆಂಸು ಕೈಗಳು', 'ಜೀವ ಪಕ್ಷಿ', 'ಗೋವಾದ ಕವಿತೆಗಳು' ಹಾಗೂ 'ಕಣ್ಣಾ ಮುಚ್ಚಾಲೆ' ಈ ಸಂಕಲನದ ಉಲ್ಲೇಖಾರ್ಹ ಕವಿತೆಗಳು.

ವರ್ತುಲದ ಹೊರಗೆ (ಕವನಗಳು)

ಲೇಖಕರು: ಲಕ್ಷ್ಮೀಶ ಚೊಕ್ಕಾಡಿ

ಸುಮಾರು 20 ವರ್ಷಗಳಲ್ಲಿ ಬರೆದ ಕವನಗಳಲ್ಲಿ ನಲವತ್ತೆಂಟನ್ನು ಆಯ್ದು ಈ ಸಂಕಲನ ಹೊರತಂದಿರುವುದಾಗಿ ಕವಿ ಹೇಳಿಕೊಂಡಿದ್ದಾರೆ. ಈ 20 ವರ್ಷಗಳಲ್ಲಿ ಕನ್ನಡ ಕಾವ್ಯಕ್ಷೇತ್ರದಲ್ಲಿ ನಡೆದ ಹಲವು ರೀತಿಯ ಪ್ರಯೋಗಗಳು ಈ ಸಂಕಲನದಲ್ಲಿ ಕಾಣಸಿಗುತ್ತವೆ. ನವ್ಯದ ಸಿನಿಕತನ, ವ್ಯಂಗ್ಯ ಹಾಗೂ ಬಂಡಾಯದ ಬಿಸಿಯುಸಿರು, ಹಾರಾಟಗಳು ಇಲ್ಲಿನ ಹೆಚ್ಚಿನ ಕವನಗಳನ್ನು ಆವರಿಸಿಕೊಂಡಿವೆ. ವ್ಯಕ್ತಿ-ಸಮಾಜಗಳೆರಡರ ಸಣ್ಣತನಗಳು, ಮೂಢ ಸಂಪ್ರದಾಯಗಳು, ಭ್ರಷ್ಟತೆಗಳು ಹಾಗೂ ನಿಷ್ಕ್ರಿಯತೆಗಳನ್ನು ಛೇಡಿಸುವುದನ್ನೇ ಮೂಲಕಾಳಜಿಯನ್ನಾಗಿ ಮಾಡಿಕೊಂಡಿರುವ ಈ ರಚನೆಗಳು ಕವಿತೆಗಳಾಗಿ ಮಾಗಿಲ್ಲ. ಕಾರಣ: ಸದಾ ತನ್ನ ಹೊರಗನ್ನಷ್ಟೇ (ವರ್ತುಲದ ಹೊರಗೆ?) ಪ್ರಶ್ನಿಸುತ್ತಾ ಹೋಗುವ ಕವಿಗೆ ಕಾವ್ಯದ ಬೇರುಗಳು ಮೂಡುವ ತನ್ನ ಒಳಗನ್ನು ನೋಡಿಕೊಳ್ಳುವ ವ್ಯವಧಾನವೇ ಇಲ್ಲವಾಗಿದೆ. ಇದಕ್ಕೆ ಏಕೈಕ ಅಪವಾದವೆಂದರೆ 'ಗಾಳಿ' ಎಂಬ ಕವಿತೆ. ಹೇಳಬೇಕಾದ್ದನ್ನು ಸರಳವಾಗಿ ಹೇಳುವ ಭಾಷಾ ಕೌಶಲ್ಯವನ್ನು ರೂಢಿಸಿಕೊಂಡಿರುವ ಚೊಕ್ಕಾಡಿಯವರಿಗೆ ಈ ಸರಳತೆಯೇ ತಾವು ಹೇಳಬೇಕಾದ್ದನ್ನು ಸರಳಗೊಳಿಸಿಬಿಡಬಹುದು ಎಂಬ ಅರಿವುಂಟಾದರೆ ಒಳ್ಳೆಯದು. ಇಲ್ಲದಿದ್ದರೆ 'ಹೆಣೆದ ಬಲೆಯೊಳಗೆ ಸಿಕ್ಕು ಜೀರ್ಣವಾಗು/ಬದುಕೊಂದು ಹೊಸ ವಿಧದ ಕಡೆಗೆ ತಿರುಗು' ಎಂಬ ಅವರ 'ಕಾಡು' ಕವಿತೆಯ ಸಾಲು ಕೇವಲ ಹೇಳಿಕೆಯಾಗಿ ಯುಳಿಯುವ ಅಪಾಯವಿದೆ.

ಕಾತರ (ಕವನಗಳು)

ಲೇಖಕರು: ನಜೀರ ಚಂದಾವರ

ಈಗಾಗಲೇ ತಮ್ಮ ಗಜಲ್‌ಗಳ ಮೂಲಕ ಕನ್ನಡ ಕಾವ್ಯಾಭಿಮಾನಿಗಳ ಗಮನ ಸೆಳೆದಿರುವ ನಜೀರ ಚಂದಾವರರ ಮೊದಲ ಕವನ ಸಂಕಲನವಿದು. ಇಲ್ಲಿರುವ

ಸುಮಾರು ಮುವ್ವತ್ತು ಕವನಗಳಲ್ಲಿ ಒಂಭತ್ತು ಗಜಲ್‌ಗಳಿವೆ. ಮಿಕ್ಕ ಬಹಳಷ್ಟು ಕವನಗಳೂ ಒಟ್ಟು ಲಹರಿಯಲ್ಲಿ ಗಜಲ್‌ಗಳಂತೇ ಇವೆ–ಲಯ ಮಾತ್ರ ಬೇರೆ.

ಆರ್ದ್ರ ವಿಷಾದ ನಜೀರರ ಸ್ಥಾಯೀ ಭಾವ. ಸೂಫಿ ಕಾವ್ಯದಿಂದ ಬಹು ಪ್ರಭಾವಿತರಾದಂತೆ ಕಾಣುವ ನಜೀರರ ಕಾವ್ಯ ಗಮನ ಸೆಳೆಯುವುದೂ ಆ ಕಾರಣ ದಿಂದಲೇ–'ಅಗಲಿಕೆ'ಯ ದುಃಖವನ್ನು ಆದಿಭೌತಿಕ ಸ್ಪಂದನಗಳನ್ನಾಗಿ ಮಾರ್ಪಡಿಸ ಲೆಣಿಸುವ ಪ್ರಯತ್ನಗಳಿಂದಾಗಿ. ನಿಸರ್ಗದಲ್ಲಿನ ಚಲನೆಗಳನ್ನು ತಮ್ಮ ಕಾವ್ಯದ ಚಲನೆ ಗಳನ್ನಾಗಿ ಮಾಡಿಕೊಳ್ಳಬಲ್ಲ ಛಾತಿ ಪ್ರದರ್ಶಿಸಿರುವ ಈ ಕವಿ ನಿಸರ್ಗದ ಆ ಚಲನೆ ಗಳನ್ನು ಮಂದ್ರ ಸ್ತರದಲ್ಲಿ ಮಾತ್ರ ಗ್ರಹಿಸಿರುವುದರಿಂದ ಇವರ ಕಾವ್ಯ ಮಂದ್ರಸ್ತರ ದಲ್ಲೇ ಕಂತಿ ಹೋಗುವ ಅಪಾಯವಿದೆ. ನಿಸರ್ಗದ ಚಲನಾತ್ಮಕತೆ ಮಂದ್ರದಿಂದ ರುಂದ್ರದವರೆಗೂ ಹರಡಿದೆ ಎಂಬುದನ್ನು ಅರಿತು ಆ ಎಲ್ಲ ಸ್ತರಗಳ ಸ್ಪಂದನಗಳನ್ನೂ ತಮ್ಮ ಕಾವ್ಯದಲ್ಲಿ ತರಬಲ್ಲವರಾದರೆ ನಜೀರ್ ಸಮಕಾಲೀನ ಕನ್ನಡ ಕಾವ್ಯಕ್ಕೆ ನಿಜ ವಾಗಿಯೂ ಹೊಸ ಬೆಡಗು ತರಬಲ್ಲರು. ಈ ಕವಿಗೆ ಆ ಶಕ್ತಿ ಇದೆಯೇ ಎಂಬುದನ್ನು ಕಾದುನೋಡಬೇಕಾಗಿದೆಯಾದರೂ ಈ ಸಂಕಲನದ ಬಹುಪಾಲು ಎಲ್ಲ ಕವನಗಳನ್ನೂ ನಾವು ಒಮ್ಮೆಯಾದರೂ ಓದಿ ಆನಂದಿಸಬಹುದಾಗಿದೆ.

ಮುಸ್ಸಂಜೆ ನೆರಳಲ್ಲಿ (ಕವನಗಳು)
ಲೇಖಕರು: **ಶಂಕರ ಕಟಗಿ**

ಶಂಕರ ಕಟಗಿಯವರ ಎರಡನೆಯ ಕವನ ಸಂಕಲನವಿದು. ಇಲ್ಲಿನ ಪದ್ಯಗಳು ಕಟಗಿಯವರ ಭಾಷೆಯ ಮೇಲಿನ ಹಿಡಿತವನ್ನು ತೋರಿಸುತ್ತವೆ. ಪದ್ಯ ಪದ್ಯಗಳಲ್ಲಿ ಸುಂದರವಾದ ಸಾಲುಗಳು ನಮ್ಮನ್ನು ಎದುರುಗೊಳ್ಳುತ್ತವೆ. 'ಗಂಧವತಿಯರ ಗೆಳತಿ' ಪದ್ಯದಲ್ಲಂತೂ ಎಷ್ಟೊಂದು ಸುಂದರ ಸಾಲುಗಳಿವೆ. ಇಂಥ ಸುಂದರ ಸಾಲುಗಳ ಮೂಲಕ ಈ ಸಂಕಲನದ ಮೊದಲ ಹನ್ನೊಂದು ಕವಿತೆಗಳು ಕವಿಯ ಕಾವ್ಯಶಕ್ತಿಯ ಬಗ್ಗೆ ಭರವಸೆ ಹುಟ್ಟಿಸುತ್ತವೆ. ಆದರೆ ಈ ಪದ್ಯಗಳು ನಮ್ಮಲ್ಲಿ ಅತೃಪ್ತಿಯನ್ನೂ ಹುಟ್ಟಿಸುವಂಥವಾಗಿವೆ. ಕಾರಣ: ಈ ಕವಿತೆಗಳೆಲ್ಲ ಬಹುತೇಕ ಅಪೂರ್ಣವಾಗುಳಿದಂತೆ ತೋರುತ್ತವೆ. ಈ ಕವಿತೆಗಳಲ್ಲಿ ನಳನಳಿಸುವಂಥ ಜೀವವಿದ್ದರೂ ಅದಕ್ಕೆ ಹಬ್ಬಲು ಅವಕಾಶ ನೀಡಲಾಗಿಲ್ಲವೆನಿಸುತ್ತದೆ.

'ಸಲಹೆ', 'ಕಾತರ' ಮತ್ತು 'ತಂಪು ತಾರೋ ಮೋಡದಾಗ' ಈ ಪದ್ಯಗಳು ಕಟಗಿಯವರ ಇನ್ನೊಂದು ಆಸಕ್ತಿಯ, ಸಫಲವಾಗುವ ಪದ್ಯಗಳು.

ಜುಲೈ–ಆಗಸ್ಟ್ ೧೯೮೦/೭೫

ಹಕ್ಕಿಯು ಹರೆಯು (ಕವನ)

ಲೇಖಕರು : **ಪದ್ಮಾ ಶೇಖರ್**

ಪದ್ಮಾ ಶೇಖರ್ ಅವರ ಈ ಮೊದಲ ಸಂಕಲನದಲ್ಲಿ ಐವತ್ತಕ್ಕೆ ಎರಡು ಕಡಿಮೆ ಪದ್ಯಗಳಿವೆ. ಪದ್ಮಾ ಅವರ ದೃಷ್ಟಿಕೋನ ವೈವಿಧ್ಯಮಯವಾಗಿದೆ. ಆದರೆ ಈ ದೃಷ್ಟಿಪಟಲ ಮೂಲಭೂತವಾಗಿ ಹೆಣ್ಣಿನದು. ಹೆಣ್ಣಿನ ಶೋಷಣೆ ಮತ್ತು ಅದಕ್ಕೆ ಕಾರಣವಾಗಿ ಗಂಡನ್ನು ಗುರುತಿಸುವ ಪದ್ಯಗಳಿರುವಂತೆಯೇ ಹೆಣ್ಣು ತನ್ನ ಮಿತಿಗಳನ್ನು ಗುರುತಿಸಿಕೊಳ್ಳಬೇಕೆನ್ನುವ 'ಕಿವಿಮಾತು' ದಂಥ ಪದ್ಯಗಳಿವೆ. 'ಪೊರೆಕಳಚು' ಪದ್ಯ ಹೆಣ್ಣಿಗೆ ಒಂದು ಮ್ಯಾನಿಫೆಸ್ಟೋ ಹೇಳುತ್ತದೆ. 'ಪ್ರಕೃತಿ–ಪುರುಷ'ದಂಥ ಪದ್ಯಗಳು ಗಂಡು ಹೆಣ್ಣಿನ ಅನಿವಾರ್ಯವಾದ ಸಂಬಂಧವನ್ನು ಹೇಳುತ್ತವೆ.

ಈ ವಿಭಿನ್ನ ನಿಲವುಗಳನ್ನು ಒಳಗೊಳ್ಳುವುದರಿಂದ ಇಡೀ ಸಂಕಲನಕ್ಕೆ ಒಂದು ರೀತಿಯ ನಿರ್ಲಿಪ್ತ ನಿಲುವು ಸಾಧ್ಯವಾಗಿದೆ. ಆದರೆ ಪ್ರತ್ಯೇಕ ಪದ್ಯಗಳನ್ನು ತೆಗೆದುಕೊಂಡಾಗ ಅವುಗಳಲ್ಲಿ ಒಂದೊಂದು ವ್ಯೆಯ್ಯು ಮಾತ್ರ ಸಂಭವಿಸಿ ಅವೆಲ್ಲ ಎಳೆ ಎಳೆಗಳಾಗಿ ಉಳಿದುಹೋಗುತ್ತವೆ. ಹೆಣ್ಣು – ಪ್ರಕೃತಿ ಮತ್ತು ಮಗು – ಗಂಡು ಸಮೀಕರಣಗೊಳ್ಳುವಂಥ 'ಕೌತುಕ' ಮತ್ತು 'ನನ್ನ ಪೋರ' ಸಫಲ ಪದ್ಯಗಳಾಗಿವೆ.

ಅಂತರಾಳ (ಕವನಗಳು)

ಲೇಖಕರು : **ತಾಳ್ಯದ ವೇದಮೂರ್ತಿ**

'ಅಂತರಾಳ' ತಾಳ್ಯದ ವೇದಮೂರ್ತಿಯವರ ಮೊದಲ ಕವನ ಸಂಕಲನ. ಕಾವ್ಯಕ್ರಿಯೆ ಒಂದು ಪ್ರತಿಷ್ಠಿತ ಚಟುವಟಿಕೆ ಎಂದೋ ಅಥವಾ ಒಂದು ಚಟವೆಂದೋ ಆದಾಗ ಮೂಡಿಬರುವ ಕವಿತೆಗಳು ಇಲ್ಲಿವೆ. ಒಂದಾದರೂ ನಮ್ಮನ್ನು ತಟ್ಟುವುದಿಲ್ಲ. ಈ ಪದ್ಯಗಳು – ನಾನೀಗ ಮೌನಿ – ಎಂದು ಘೋಷಿಸುತ್ತ ಮಾತನಾಡುತ್ತವೆ ಮಾತಾಡುತ್ತವೆ ನಿಲ್ಲದ ನಿರಂತರ ಮಾತಿನಲ್ಲಿ ಕೊಚ್ಚಿಹೋಗುತ್ತವೆ. ಮಾತು ಸಾಲುಗಳಲ್ಲಿ ನೆಲೆಗೊಳ್ಳುತ್ತವೆ ಮತ್ತು ಕವಿತೆ ಮೌನದೊಂದಿಗೆ ಮೂರ್ಛೆ ಹೋಗುತ್ತದೆ. ಈ ಮಾತು ಮಾತುಗಳು ಮಥಿಸುವುದೂ ಇಲ್ಲ. ಎಲ್ಲ ಸಾಲುಗಳಲ್ಲಿ ! ಒಂದರ ಮುಂದೊಂದು ಇಲ್ಲದೇ ಒಂದರ ಹಿಂದೊಂದು....

ಸಾವಿರ ಕಣ್ಣಿನ ನವಿಲು (ಕವನಗಳು)

ಲೇಖಕರು : **ಕೃಷ್ಣಮೂರ್ತಿ ಬಿಳಿಗೆರೆ**

ಇದು ಕೃಷ್ಣಮೂರ್ತಿ ಬಿಳಿಗೆರೆಯವರ ಎರಡನೆಯ ಕವನ ಸಂಕಲನ. ಇದರಲ್ಲಿ 24 ಪದ್ಯಗಳಿವೆ. ಸಮಾಜಮುಖಿಯಾದ ಕೃಷ್ಣಮೂರ್ತಿಯವರ ಮನಸ್ಸು ಕವನ

ಟ್ಟುವಲ್ಲಿ ಬಳಸುವ ಪ್ರತಿಮಾ ವಿಧಾನದ ಶಿಸ್ತಿಗೆ ಬದ್ಧವಾಗಿದೆ. ಇದರಿಂದ ಪದ್ಯಗಳಿಗೆ ವಿಶಿಷ್ಟವಾದ ಗಾಂಭೀರ್ಯ ಸಾಧ್ಯವಾಗಿದೆ. ಇದಲ್ಲದೆ ಬಹುತೇಕ ಯುವಕ ಪೀಳಿಗೆಯ ಬಂಡಾಯ ಕವಿಗಳು ಸಾಧಿಸಲಾರದ ನಿರ್ಲಿಪ್ತತೆಯನ್ನು ಇವರು ತಮ್ಮ ಕವನಗಳಲ್ಲಿ ಸಾಧಿಸಿದ್ದಾರೆ. ಇವರ ಕವನಗಳು ಯಾರನ್ನೂ ವ್ಯಕ್ತವಾಗಿ ದೂರದೇ, ಇರುವ ದುರಂತ ಮಯ ಸಂದರ್ಭ ಹೇಳುತ್ತ ಮುಟ್ಟಬೇಕಾದಲ್ಲಿ ಮುಟ್ಟಲು ಪ್ರಯತ್ನಿಸುತ್ತವೆ. 'ಸಾವಿರ ಕಣ್ಣಿನ ನವಿಲು', 'ಹೂವು ಅರಳುತ್ತವೆ' 'ಪ್ರೀತಿಸು ಮರಿ' ಇವು ಸಂಕಲನದ ಹೆಚ್ಚು ಸಫಲವಾಗುವ ಪದ್ಯಗಳು. ಇವರ ಹನಿಗವಿತೆಗಳು ಚುರುಕಾದವುಗಳು ಮತ್ತು ಗಂಭೀರವಾದವುಗಳು.

21 ನೇ ಶತಮಾನಕ್ಕೆ (ಕವನಗಳು)

ಲೇಖಕರು: **ಹರೋನಹಳ್ಳಿ ಸ್ವಾಮಿ**

ಈ ಸಂಕಲನದಲ್ಲಿ 31 ಕವಿತೆಗಳಿವೆ. ಸ್ವಾಮಿಯವರಿಗೆ ಕವನ ಕಟ್ಟುವ ಉತ್ಸಾಹ ತುಂಬ ಇದೆ. ಆದರೆ ತಾಳ್ಮೆ ಇಲ್ಲ. ಆದ್ದರಿಂದ ಇಲ್ಲಿನ ಪದ್ಯಗಳು ಉತ್ಸಾಹದ ಅಭಿವ್ಯಕ್ತಿಗಳಾಗಿ ತೋರುತ್ತವೆ. ಇಂಥದರಲ್ಲಿಯೂ ಈ ಕವಿತೆಗಳು ಸ್ವಾಮಿಯವರು ಕಾವ್ಯಕನ್ನಿಕೆಯನ್ನು ಒಲಿಸಿಕೊಳ್ಳುವ ಶಕ್ತಿ ಹೊಂದಿದ್ದಾರೆಂದು ಅಲ್ಲಲ್ಲಿ ಮಿಂಚಿ ತೋರಿಸುತ್ತವೆ. 'ಕಾಯುವದಕ್ಕೆ ತಪವು ಇನ್ನಿಲ್ಲ' ಎನ್ನುವ ಮಾತು ಅರಿತರೆ ಸ್ವಾಮಿಯವರಿಂದ ಒಳ್ಳೆಯ ಪದ್ಯಗಳು ಬರಬಲ್ಲವೆನಿಸುತ್ತದೆ. 'ಹೆಣಗಳು ಮತ್ತು ನೆಲ್ಸನ್ ಮಂಡೆಲಾ' ಈ ಸಂಕಲನದ ಒಳ್ಳೆಯ ಪದ್ಯವಾಗಿದೆ. ●

ಪುಸ್ತಕ ಸ್ವೀಕಾರ

ಕಾವ್ಯ :

1. ಅರ್ಧ ಸತ್ಯದ ಹುಡುಗಿ ಲೇ: ಚಂದ್ರಶೇಖರ ಪಾಟೀಲ
   ಪ್ರ: ಸಂಕ್ರಮಣ ಪ್ರಕಾಶನ, ಧಾರವಾಡ–8, ಪು: 80 ಬೆಲೆ: 15 ರೂ,
2. ಆರಣ್ಯ ಕಾಂಡ ಲೇ: ಜಿ. ಎಸ್. ಉಬರಡ್ಕ
   ಪ್ರ: ಸುಮನಸಾ ವಿಚಾರ ವೇದಿಕೆ, ಚೊಕ್ಕಾಡಿ (ದ.ಕ.), ಪು: 45, ಬೆಲೆ: 15 ರೂ.
3. ಗೆರೆಗಳು ಲೇ: ಕೆ. ನ. ಶಿವತೀರ್ಥನ್
   ಪ್ರ: ನೈಋತ್ಯ ಪ್ರಕಾಶನ, ಮೈಸೂರು–12, ಪು: xvi + 64, ಬೆಲೆ: 20 ರೂ.
4. ಅಗ್ನಿಸ್ತಂಭ ಲೇ: ಡಾ॥ ಎಚ್. ಎಸ್. ವೆಂಕಟೇಶಮೂರ್ತಿ
   ಪ್ರ: ಕೃತಿ ಪ್ರಕಾಶನ, ತ್ಯಾಗರಾಜನಗರ, ಬೆಂಗಳೂರು–70, - ಪು: 64 ಬೆಲೆ: 20 ರೂ.
5. ತುಂಗೆಯಲ್ಲಿ ಹೆಣ ಲೇ: ಜಿ. ಪಿ. ಬಸವರಾಜು
   ಪ್ರ: ಅಕ್ಷರ ಪ್ರಕಾಶನ, ಹೆಗ್ಗೋಡು (ಸಾಗರ), ಪು: 64, ಬೆಲೆ: 20 ರೂ.

6. ಬೇರು ಒಣಗಿದೆ ಪ್ರೀತಿ ಲೇ: ಬಿ. ಎನ್. ಮಲ್ಲೇಶ್,
ಪ್ರ: ಅನ್ವೇಷಣೆ ಪ್ರಕಾಶನ, ವಿಜಯನಗರ, ಬೆಂಗಳೂರು–40, ಪು: 64, ಬೆಲೆ: 12 ರೂ.

7. ಮತ್ತೆ ಸೂರ್ಯ ಬರುತ್ತಾನೆ ಲೇ: ಲೋಕೇಶ ಅಗಸನಕಟ್ಟೆ,
ಪ್ರ: ಯುವ ಹಿರಿಯ ವಿದ್ಯಾರ್ಥಿ ಸಂಘ, ಸಿರಿಗೆರೆ, ಪು; 56, ಬೆಲೆ: 10 ರೂ.

8. ಕನಸು ನನಸುಗಳ ನಡುವೆ ಲೇ: ರತ್ನಾಮೂರ್ತಿ
ಪ್ರ: ಭಾವನಾ ಪ್ರಕಾಶನ, ಮುಂಬಯಿ, ಪು: 81, ಬೆಲೆ: 15 ರೂ.

9. ಹೊಸಗಾಳಿ ಲೇ: ಡಾ॥ ನಿಂಗಣ್ಣ ಸಣ್ಣಕ್ಕಿ
ಪ್ರ: ಕಾಲಗತಿ ಪ್ರಕಾಶನ, ರಾಯಭಾಗ, ಬೆಳಗಾವಿ ಜಿಲ್ಲೆ, ಪು: 62, ಬೆಲೆ: 15 ರೂ.

10. ಚಕ್ರತೀರ್ಥ ಸಂ: ಕೇಶವ ಮಳಗಿ/ಸುಶೀಲಾ ಸಿರೂರು,
ಪ್ರ: ಅಂಕುರ ಪ್ರಕಾಶನ, ಬಳ್ಳಾರಿ, ಪು: 100, ಬೆಲೆ: 12 ರೂ.

11. ಹುತ್ತದೊಳಗಿನ ಹಾವು ಲೇ: ವಸಂತಕುಮಾರ ಪೆರ್ಲ
ಪ್ರ: ಸಾಹಿತ್ಯ ಸಂಘ, ಬದಿಯಡ್ಕ, ಕಾಸರಗೋಡು ಜಿಲ್ಲೆ (ಕೇರಳ)
ಪು: 64+xiv, ಬೆಲೆ: 15 ರೂ.

12. ನಾಕೊಂದ್ಲ ನಾಕು ಪ್ರ. ಸಂ. : ಕಬ್ಬಿನಾಲೆ ವಸಂತ ಭಾರದ್ವಾಜ್,
ಪ್ರ: ಬ್ಯಾಂಕರುಗಳ ಸಾಂಸ್ಕೃತಿಕ ಅಕಾಡೆಮಿ, ಹಾಸನ, ಪು: 54 ಬೆಲೆ: 15 ರೂ.

ಇತರೆ:

1. ತಲೆದಂಡ (ನಾಟಕ) ಲೇ: ಗಿರೀಶ್ ಕಾರ್ನಾಡ
ಪ್ರ: ಮನೋಹರ ಗ್ರಂಥಮಾಲೆ, ಧಾರವಾಡ–11 ಪು: 10+127 ಬೆಲೆ: 25 ರೂ.

2. ಹೊಸ ಹೆಜ್ಜೆಗಳು (ಕಾದಂಬರಿ) ಲೇ: ಬಿ. ಚಂದ್ರೇಗೌಡ
ಪ್ರ: ಕೃತಿ ಪ್ರಕಾಶನ, ಗವಿಪುರಂ, ಬೆಂಗಳೂರು–19. ಪು: 140 ಬೆಲೆ: 15 ರೂ.

3. ದಗಡೂ ಪರಬನ ಅಶ್ವಮೇಧ (ಕತೆಗಳು) ಲೇ: ಜಯಂತ ಕಾಯ್ಕಿಣಿ
ಪ್ರ: ಕೃತಿ, ತ್ಯಾಗರಾಜನಗರ, ಬೆಂಗಳೂರು–28 ಪು: 120, ಬೆಲೆ: 20 ರೂ.

4. ಕಾಲ (ಕತೆಗಳು) ಲೇ: ಜಯಪ್ರಕಾಶ್ ಮಾವಿನಕುಳಿ
ಪ್ರ: ಸ್ಫಟಿಕ ಪ್ರಕಾಶನ. ಮೂಡಬಿದರೆ (ದ.ಕ.) ಪು: 126 ಬೆಲೆ; 20 ರೂ.

5. ನಾನು ಒಲಿದಂತೆ ಹಾಡುವೆ (ಲಲಿತ ಪ್ರಬಂಧಗಳು) ಲೇ: ಚಂದ್ರಶೇಖರ ಆಲೂರು
ಪ್ರ: ಕಲ್ಯಾಣಿ ಪ್ರಕಾಶನ, ಶ್ರೀನಗರ, ಬೆಂಗಳೂರು–50 ಪು: 112 ಬೆಲೆ: 15 ರೂ.

6. ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಆಧುನೀಕರಣದ ಪ್ರಕ್ರಿಯೆ (ಸಾಹಿತ್ಯ ವಿಮರ್ಶೆ)
ಲೇ: ಟಿ.ಪಿ. ಅಶೋಕ ಪ್ರ: ಕರ್ನಾಟಕ ಸಂಘ, ಪುತ್ತೂರು (ದ.ಕ.) ಪು: 63 ಬೆಲೆ: 15ರೂ.

7. ಹೊಸ ಆಲೋಚನೆ (ವಚನ ವಿಶ್ಲೇಷಣೆ) ಲೇ: ಡಾ॥ ಬಸವರಾಜ ಸಾದರ
ಪ್ರ: ಶಿವಶಕ್ತಿ ಪ್ರಕಾಶನ, ರಾಯಚೂರು–584 101 ಪು: 112 ಬೆಲೆ: 15 ರೂ.

8. ನಕ್ಷತ್ರ ಹೊದಿಕೆ (ವೀಚಿ ಅಭಿನಂದನ) ಸಂ: ಕೆ. ಬಿ, ಸಿದ್ಧಯ್ಯ/ಜಿ, ವಿ, ಆನಂದಮೂರ್ತಿ
ಪ್ರ: ಜಲನ ಸಹಕಾರಿ ಪ್ರಕಾಶನ, ತುಮಕೂರು–2 ಪು: 46 ಬೆಲೆ: 5 ರೂ.

ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೆ,

ಸಂವಾದದ ಹದಿನಾರನೆ ಸಂಚಿಕೆಯನ್ನು ನಿಮ್ಮ ಕೈಯಲ್ಲಿಡುತ್ತಿದ್ದೇವೆ. ಈ ಸಂಚಿಕೆಯಲ್ಲಿ ಒಬ್ಬ ಪಾಶ್ಚಾತ್ಯ ಭೌತ ವಿಜ್ಞಾನಿಯ ಚಿಂತನ–ಅನುಭವ ಸತ್ಯಗಳ ಸಾರ ಸಂಗ್ರಹವನ್ನು "ವಿಜ್ಞಾನದ ಆಧ್ಯಾತ್ಮ" ಎಂಬ ಹೆಸರಿನಲ್ಲಿ ಕೊಟ್ಟಿದ್ದೇವೆ.

ಈ ಶತಮಾನದ ಎಪ್ಪತ್ತರ ದಶಕದಿಂದೀಚೆಗೆ ಆಧ್ಯಾತ್ಮ, ಪರಿಸರ ಪ್ರಜ್ಞೆ, ಆರೋಗ್ಯ ಮತ್ತು ಸೇವಾಮನೋಭಾವನೆಯ ಬಗೆಗಿನ ಎಚ್ಚರವನ್ನು ಅನೇಕ ಸಾಮಾಜಿಕ ಆಂದೋಲನಗಳಲ್ಲಿ ಇಡೀ ವಿಶ್ವ ಕಂಡಿತು. ಈ ಸಾಮಾಜಿಕ ಆಂದೋಲನ ಗಳು ಕೇವಲ ಆಕಸ್ಮಿಕವಾದುವಾಗಿರಲಿಲ್ಲ. ಆವರೆಗೆ ಪಾಶ್ಚಾತ್ಯ ಪ್ರಪಂಚವು ಸಂಯೋಜನೆಗೆ ಬದಲಾಗಿ ವಿಶ್ಲೇಷಣೆಯನ್ನು, ಸಮಷ್ಟಿವಾದಕ್ಕೆ ಬದಲಾಗಿ ವ್ಯಕ್ತಿ ವಿಶಿಷ್ಟತಾವಾದವನ್ನು, ಅಂತಃಕರಣ, ಸ್ಫೂರ್ತಿ, ಅರಿವುಗಳಿಗೆ ಬದಲಾಗಿ ತರ್ಕ, ಜ್ಞಾನ, ಬೌದ್ಧಿಕತೆಗಳನ್ನೂ, ಸಹಕಾರಕ್ಕೆ ಬದಲಾಗಿ ಸ್ಪರ್ಧೆಯನ್ನೂ ಉತ್ತೇಜಿಸುತ್ತ ಬಂದಿತ್ತು. ಆ ಏಕಮುಖ ಬೆಳವಣಿಗೆ ಒಂದು ಅಪಾಯಕಾರಿಯಾದ ಸ್ಥಿತಿಯಲ್ಲಿ ನಿಂತಾಗ ಅನಿವಾರ್ಯವಾಗಿ ಮೌಲ್ಯಗಳ ಚಕ್ರಭ್ರಮಣದಲ್ಲಿ ಅಂತಃಕರಣ, ಸಹಕಾರ, ಸೇವಾಭಾವನೆ, ಪರಿಸರ ಪ್ರಜ್ಞೆಗಳು ಎಚ್ಚತ್ತುಕೊಳ್ಳಬೇಕಾಯಿತು.

ಈ ಹಿನ್ನೆಲೆಯಲ್ಲಿ ವಿಜ್ಞಾನವೂ ಕೇವಲ ವಸ್ತುನಿಷ್ಠ ಮೌಲ್ಯಮುಕ್ತವಾಗಿರಲು ಸಾಧ್ಯವಿಲ್ಲ ಎಂಬುದನ್ನು ವಿಜ್ಞಾನಿಗಳೂ ಗುರುತಿಸಿಕೊಂಡರು. ಪೌರ್ವಾತ್ಯ ತತ್ವ ಜ್ಞಾನವು ಅಪಾಯದ ಅಂಚಿನಲ್ಲಿರುವ ಆಧುನಿಕ ನಾಗರಿಕತೆಗೆ ದಾರಿ ತೋರುತ್ತದೆನ್ನುವ ಆಶಯವನ್ನು ಪಾಶ್ಚಾತ್ಯ ವಿಜ್ಞಾನಿಗಳು ವ್ಯಕ್ತಪಡಿಸಿದ್ದಾರೆ. ಅಂಥ ಸೂಕ್ಷ್ಮ ಗ್ರಹಿಕೆಯ ವಿಜ್ಞಾನಿಗಳಲ್ಲಿ ಫ್ರಿತೋ ಕಾಪ್ರ ಒಬ್ಬ. ಭಾರತೀಯ ಆಧ್ಯಾತ್ಮ, ತಾವೋ ಮತ್ತು ಝೆನ್‌ಗಳನ್ನು ಮುಂದುವರಿದ ಭೌತವಿಜ್ಞಾನದೊಡನೆ ಹೋಲಿಸಿ ಆತ ಬರೆದ ಎರಡು ಪುಸ್ತಕಗಳು Tao of Physics ಮತ್ತು Turning Point. ಇವು ಬದಲಾಗುತ್ತಿರುವ ಹೊಸ ಪ್ರಪಂಚದ-ಹೊಸ ಮೌಲ್ಯಗಳ ಒಂದು ಇಣುಕು ನೋಟವನ್ನು ಕೊಡುತ್ತವೆ.

ಈ ಚಿಂತನ ನಮ್ಮ ಇಂದಿನ ಅನೇಕ ಬಿಕ್ಕಟ್ಟುಗಳಿಗೆ ಉತ್ತರ ಕೊಡುವಂತಿದೆ. ಸದ್ಯದ ಸಂದರ್ಭದಲ್ಲಿ ಪ್ರಸ್ತುತವಾಗಿದೆ.

ಜುಲೈ–ಆಗಸ್ಟ್ ೧೯೯೦/೭೯

ಈ ಜುಲೈ ತಿಂಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರು ಹಾಗೂ ಸದಸ್ಯರ ಅವಧಿ ಮುಗಿದಿದೆ. ಬಹುಮಾನ ಪ್ರಶಸ್ತಿಗಳನ್ನು ನೀಡುವುದಕ್ಕಿಂತ ಹೆಚ್ಚಿನ ದೇನನ್ನೂ ಅಕಾಡೆಮಿಗಳು ಮಾಡುವುದಿಲ್ಲ ಎಂಬ ಸೊಲ್ಲು ಈವರೆಗೆ ಕೇಳಿಸುತ್ತಿತ್ತು. ವಿಶ್ವಕನ್ನಡ ಸಮ್ಮೇಳನದ ನಂತರ ಕೆಲವು ಹೊಸ ಜವಾಬ್ದಾರಿಗಳನ್ನು ವಹಿಸಿಕೊಂಡ ರಾಜ್ಯ ಸಾಹಿತ್ಯ ಅಕಾಡೆಮಿ ಅವುಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿರುವುದಲ್ಲದೆ ಕೆಲವು ದೀರ್ಘಾವಧಿಯ ದೂರದೃಷ್ಟಿಯ ಯೋಜನೆಗಳನ್ನು ರೂಪಿಸಿ ಮುಂದೆ ಕೆಲಸ ಮಾಡುವವರಿಗೆ ಅನುಕೂಲವಾಗುವಂಥ ವಾತಾವರಣವನ್ನು ನಿರ್ಮಿಸಿಕೊಟ್ಟಿದೆ. ಈ ವರೆಗೆ ಕಂಡರಿಯದಿದ್ದಷ್ಟು ಮೌಲಿಕ ಪುಸ್ತಕಗಳ ಹಾಗೂ 'ಭಾರತೀಯ ಸಾಹಿತ್ಯ ಸಮೀಕ್ಷೆ'ಯಂಥ ಬೃಹತ್ ಸಂಪುಟಗಳ ಪ್ರಕಟಣೆ, ಮಾರಾಟ ಹಾಗೂ ಪುಸ್ತಕ ಪ್ರಕಟಣ ಆವರ್ತಕ ನಿಧಿ, ಅಮೆರಿಕಾ ಕನ್ನಡ ಸಂಘಗಳ ಹಾಗೂ ಕನ್ನಡಿಗರ ವಿಶೇಷ ಬಹುಮಾನ ಯೋಜನೆ, 'ಅನಿಕೇತನ'ಗಳ ಹಾಗೂ ವಾರ್ತಾಪತ್ರದ ಪ್ರಕಟಣೆ, ಸಾಹಿತ್ಯಿಕ ಕಿರು ಪತ್ರಿಕೆಗಳಿಗೆ ಪ್ರೋತ್ಸಾಹ ಧನ-ಇವು ಅಂಥ ದೂರದೃಷ್ಟಿಯ ಯೋಜನೆಗಳ ಸಾಲಿಗೆ ಸೇರುವಂಥವು.

ಸದಭಿರುಚಿಯ ಓದಿನ, ದೀರ್ಘಾವಧಿಯ ಯೋಜನೆಗಳ ಪರಂಪರೆಯೊಂದನ್ನು ನಿರ್ಮಿಸಿರುವ ಡಾ|| ಜಿ. ಎಸ್. ಶಿವರುದ್ರಪ್ಪ ಮತ್ತು ಅವರೊಂದಿಗೆ ಕೆಲಸ ಮಾಡಿದ ಅಕಾಡೆಮಿ ಸದಸ್ಯರಿಗೆ 'ಸಂವಾದ'ದ ಅಭಿನಂದನೆಗಳು.

ನಾವು ಹೊಸ ಪುಸ್ತಕಗಳ 'ಮೊದಲ ನೋಟ'ವನ್ನು ಆರಂಭಿಸಿದಾಗಿನಿಂದ ಅನೇಕ ಲೇಖಕರು ತಮ್ಮ ತಮ್ಮ ಪುಸ್ತಕಗಳನ್ನು 'ಮೊದಲ ನೋಟ'ಕ್ಕಾಗಿ ಕಳುಹಿಸುತ್ತಿದ್ದಾರೆ. ಒಂದು ಸಂಚಿಕೆಯಲ್ಲಿ ಹೆಚ್ಚೆಂದರೆ ಹತ್ತು ಪುಸ್ತಕಗಳ 'ಮೊದಲ ನೋಟ'ವನ್ನು ಹಾಕಲು ಸಾಧ್ಯವಾಗುತ್ತದೆ. ಅದಕ್ಕಿಂತ ಹೆಚ್ಚಿನ ಪುಟಗಳನ್ನು 'ಮೊದಲ ನೋಟ'ಕ್ಕೆ ಕೊಟ್ಟರೆ ಸಂಚಿಕೆಯ ಒಟ್ಟಾರೆ ಅಂದ ಏರುಪೇರಾಗುತ್ತದೆ. ಸ್ವೀಕಾರದಲ್ಲಿ ಪುಸ್ತಕಗಳ ಹೆಸರು ಬಂದ ನಂತರ 'ಮೊದಲ ನೋಟ'ದಲ್ಲಿ ಬರುವ ಈ ಕ್ರಮವನ್ನು, ಅಸಮಾಧಾನವಿಲ್ಲದೆ ಒಪ್ಪಿಕೊಳ್ಳಬೇಕೆಂದು ಲೇಖಕ ಮಿತ್ರರನ್ನು ಕೇಳಿಕೊಳ್ಳುತ್ತೇವೆ.

ಪ್ರಾಯೋಗಿಕ ಚಂದಾದಾರರಾಗಿ ನಾವು ಪಟ್ಟಿ ಮಾಡಿ ಪುಸ್ತಕ ಕಳಿಸಿದವರಲ್ಲಿ ಅನೇಕರು ಚಂದಾ ಕಳಿಸಿ ಉತ್ಸಾಹದ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ. ಹಿಂದೆಲ್ಲ ಸಂವಾದ ಬರುವುದು ತಡವಾದಾಗ ಕೆಲವರು ಸಹೃದಯರು ಪತ್ರ ಬರೆದು ನಮ್ಮ ತೊಂದರೆಗಳ ಬಗ್ಗೆ ವಿಚಾರಿಸಿಕೊಂಡಿದ್ದಾರೆ. ಇಂಥ ಸಹೃದಯ ಅಭಿಮಾನಿಗಳಿಗೆ ಸಂವಾದದ ಕೃತಜ್ಞತೆಗಳು.

ಸಂವಾದ ಪ್ರಕಾಶನ

ಪ್ರಿಯರೇ.

ವರ್ಷಕ್ಕೆ ಮುವ್ವತ್ತು ರೂಪಾಯಿ ಸದಸ್ಯತ್ವ ಶುಲ್ಕ ನೀಡಿ ಸುಮಾರು ಮೂರು ನೂರು ಪುಟಗಳ ಮೌಲಿಕ ಸಾಹಿತ್ಯ ಪಡೆಯಬಹುದಾಗಿದೆ. 1990 ರ ಮೊದಲ ಪುಸ್ತಕವಾಗಿ ಬಿಡುಗಡೆಯಾಗಿದೆ :

ಸ. ಉಷಾ ಅವರ ಕವನ ಸಂಕಲನ

ಈ ನೆಲದ ಹಾಡು

ಪುಟಗಳು : 60 **ಬೆಲೆ : 15 ರೂಪಾಯಿಗಳು**

ನಮ್ಮ ಮುಂದಿನ ಪುಸ್ತಕ ಬಾನುಮುಷ್ತಾಕ್ ಅವರ ಕಥಾ ಸಂಕಲನ

ಹೆಜ್ಜೆ ಮೂಡಿದ ಹಾದಿ

ಸಾಹಿತ್ಯಾಸಕ್ತರು ವಾರ್ಷಿಕ ಸದಸ್ಯತ್ವ ಪಡೆದು ನಮಗೆ ಬೆಂಬಲವಾಗಿ ನಿಲ್ಲಬೇಕೆಂದು ಕೋರುವ.

ವೈ. ಮಂಜಪ್ಪ
ಜಿ. ಎಲ್. ರಾಮಪ್ಪ
ಸಂವಾದ ಪ್ರಕಾಶನ (ಪುಸ್ತಕ ಪ್ರಕಟಣ ವಿಭಾಗ) ಪರವಾಗಿ

ಸಂಪರ್ಕ ವಿಳಾಸ :
ಜಿ. ಎಲ್. ರಾಮಪ್ಪ
ಸಂವಾದ ಪ್ರಕಾಶನ
ಮಲ್ಲಾಡಿಹಳ್ಳಿ – 577 531 (ಚಿತ್ರದುರ್ಗ ಜಿಲ್ಲೆ)

ಸೂಚನೆ : ಚಂದಾದಾರರಲ್ಲದ, ಆದರೆ ಸಂವಾದಂತಹ ಸಾಹಿತ್ಯಿಕ ಪತ್ರಿಕೆಗಳಲ್ಲಿ ಆಸಕ್ತಿಯಿರಿಸಿ ಕೊಂಡಿರುವವರೆಂದು ನಾವು ಭಾವಿಸಿರುವ ಕೆಲವು ಗೆಳೆಯರಿಗೆ ನಾವು ಪ್ರಾಯೋಗಿಕ ಚಂದಾದಾರರೆಂದು ಸಂವಾದ ಕಳಿಸುತ್ತಿದ್ದೇವೆ. ಇದರಲ್ಲಿ ಕೆಲವರು ವಿಶ್ವಾಸದಿಂದ ಚಂದಾ ಕಳಿಸಿ ಪ್ರೋತ್ಸಾಹಿಸಿದ್ದಾರೆ. ಉಳಿದವರೂ ಕೂಡಾ ಚಂದಾ ಕಳಿಸಿ ನಮ್ಮ ಪ್ರಯತ್ನಕ್ಕೆ ಕೈಯಾಸರೆ ನೀಡಬೇಕೆಂದು ಕೇಳಿಕೊಳ್ಳುತ್ತೇವೆ. ನಿಮ್ಮ ಚಂದಾ ಅಕ್ಟೋಬರ್ 15 ರೊಳಗಾಗಿ ಬರದಿದ್ದಲ್ಲಿ, ಈ ಪತ್ರಿಕೆಯ ಬಗ್ಗೆ ನಿಮ್ಮ ಆಸಕ್ತಿ ಇಲ್ಲ ವೆಂದು ಭಾವಿಸಿ ಸಂಚಿಕೆ ಕಳಿಸುವುದನ್ನು ಅನಿವಾರ್ಯವಾಗಿ ನಿಲ್ಲಿಸಲಾಗುತ್ತದೆ. ದಯವಿಟ್ಟು ಚಂದಾ ಕಳಿಸಿ ಸಹಕರಿಸಿ.

ಈ ಸಂಕಲನದಲ್ಲಿ –

ಕಥಾ ಕಮ್ಮಟ/ರಾಘವೇಂದ್ರ ಖಾಸನೀಸ/ಕಿ. ರಂ. ನಾಗರಾಜ ೩

ನಗೀಬ್ ಮಹಫುಜ್‌ರ ಪ್ರಪಂಚ/ಅಮಿತಾವ್ ಘೋಷ್ ೧೪

ಕಾವ್ಯ/ಜಯರಾಮ ಕಾರಂತ/ಆನಂದ ಝುಂಝರವಾಡ/
ಸ. ರಘುನಾಥ/ಎಂ. ಆರ್. ಕಮಲ ೨೫

ವಿಜ್ಞಾನದ ಅಧ್ಯಾತ್ಮ /ಫ್ರಿತೋ ಕಾಪ್ರಾ/ಸ. ಉಷಾ ೩೫

ನನ್ನ ನೆನಪುಗಳು/ಆನಂದ ಕಂದ ೫೪

ಹೊಸ ಓದು/ರಾಘವೇಂದ್ರ ಪಾಟೀಲ/ಸ. ಉಷಾ/
ಡಾ॥ ಬಿ. ಎನ್. ಸುಮಿತ್ರಾಬಾಯಿ/ಡಿ. ಎಸ್. ನಾಗಭೂಷಣ ೬೦

ಮೊದಲ ನೋಟ/೭೨

ಸಂಪಾದಕರ ಟಿಪ್ಪಣಿಗಳು/೭೮

ಹೊಸ ಪುಸ್ತಕಗಳು/೮೦